ಗುರುವಾರ, ಜೂನ್ 2, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ ಪ್ರದರ್ಶನ ಕೇರಳದ ಕೋಯಿಕ್ಕೋಡ್‌ನಲ್ಲಿ ಶಾಲಾ ಆರಂಭದ ಅಂಗವಾಗಿ ಪುಟಾಣಿಗಳು ಬುಧವಾರ ನೃತ್ಯ ಪ್ರದರ್ಶಿಸಿದರು







ಸ್ಫೂರ್ತಿದಾಯಕ ಪ್ರಗತಿಯ 8 ವರ್ಷಗಳ ಸಂಭ್ರಮಾಚರಣೆ

ಮಹತ್ವಾಕಾಂಕ್ಷೆಯ ರಾಜ್ಯದಿಂದ ಸ್ಫೂರ್ತಿದಾಯಕ ರಾಜ್ಯ

ಸ್ವಚ್ಛ ಆಡಳಿತದ ಮೂಲಕ ರಾಷ್ಟ್ರ ಪ್ರಗತಿಗೆ ಪ್ರೇರಣೆ

ಪ್ರಗತಿಶೀಲ ಅಭಿವೃದ್ಧಿಯಲ್ಲಿ ದಾಪುಗಾಲು

- ಕಳೆದ 8 ವರ್ಷಗಳಲ್ಲಿ ತೆಲಂಗಾಣದ ಜಿಡಿಪಿ ರೂ.5,05,849 ಕೋಟಿಗಳಿಂದ ರೂ.11,54,860 ಕೋಟಿಗಳಿಗೆ ಏರಿಕೆಯಾಗಿದೆ
- ತೆಲಂಗಾಣವು 2017-22 ರಿಂದ 11.7% ವಾರ್ಷಿಕ ತಲಾವಾರು ಆದಾಯ ದರ ದಾಖಲಿಸಿದ್ದು ದಕ್ಷಿಣದ ರಾಜ್ಯಗಳಲ್ಲಿಯೇ ಅತಿ ಹೆಚ್ಚಿನ ಏರಿಕೆಯಾಗಿದೆ.
- ಕಳೆದ 8 ವರ್ಷಗಳಲ್ಲಿ ತೆಲಂಗಾಣ ರಾಜ್ಯದ ತಲಾ ಆದಾಯವು ರೂ.1,24,104 ರಿಂದ ರೂ.2,78,833ಕ್ಕೆ ಏರಿಕೆಯಾಗಿದೆ.

1 ದೇಶದಲ್ಲೇ ನಂಬರ್ ಒನ್ ರಾಜ್ಯ

• ಜನ ಕಲ್ಯಾಣದಲ್ಲಿ ನಂ. 1 • ವಿದ್ಯುತ್ ಪ್ರಸರಣ ಮತ್ತು ಬಳಕೆಯಲ್ಲಿ ನಂ. 1 • ಗ್ರಾಮೀಣಾಭಿವೃದ್ಧಿಯಲ್ಲಿ ನಂ. 1
• ಶುದ್ಧ ಕುಡಿಯುವ ನೀರು ಪೂರೈಕೆಯಲ್ಲಿ ನಂ. 1 • ರೈತ ಕಲ್ಯಾಣದಲ್ಲಿ ನಂ. 1 • ಹಸಿರೀಕರಣದಲ್ಲಿ ನಂ.1

ತೆಲಂಗಾಣ ರಾಜ್ಯ, 'ಪವರ್ ಹೌಸ್'



ಉಚಿತ ವಿದ್ಯುತ್

- ಎಲ್ಲಾ ವಲಯಗಳಿಗೆ 24 ಗಂಟೆಗಳ ಖಾತರಿ ಗುಣಮಟ್ಟದ ವಿದ್ಯುತ್ ಮತ್ತು ಕೃಷಿಗೆ ಉಚಿತ ವಿದ್ಯುತ್.
- ತೆಲಂಗಾಣದ ಸ್ಥಾಪಿತ ವಿದ್ಯುತ್ ಸಾಮರ್ಥ್ಯವು 2014 ರಲ್ಲಿ 7778 ಮೆ.ವ್ಯಾ.ನಿಂದ 2021 ರಲ್ಲಿ 17234 ಮೆ.ವ್ಯಾಗೆ ಹೆಚ್ಚಾಗಿದೆ.

ರೈತ ಬಂಧು - ರೈತ ಬಿಮಾ



- ರೈತರಿಗೆ ವರ್ಷಕ್ಕೆ ಪ್ರತಿ ಎಕರೆಗೆ 10,000/- ಬಂಡವಾಳ ಹೂಡಿಕೆ ನೆರವಿನ ಮೂಲಕ ನಿಜವಾದ ರೈತ ಸಮಬಲೀಕರಣ
- ಕಳೆದ 8 ವರ್ಷಗಳಲ್ಲಿ 63 ಲಕ್ಷ ರೈತರು 50,448 ಕೋಟಿ ರೂಗಳ ನೆರವು ಪಡೆದಿದ್ದಾರೆ.
- ರೈತ ಬಿಮಾ ಯೋಜನೆಯಡಿ ತಲಾ 5 ಲಕ್ಷ ರೂಗಳ ವಿಮೆ ಮಾಡಲಾಗಿದೆ. ಈ ಯೋಜನೆಯಲ್ಲಿ ಈಗಾಗಲೇ 80,861 ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ.

ಸಾಲ ಮನ್ನಾ

- ರಾಜ್ಯ ಸರ್ಕಾರವು 41.46 ಲಕ್ಷ ರೈತರ 22,000 ಕೋಟಿ ಸಾಲವನ್ನು ಮನ್ನಾ ಮಾಡಿದೆ.
- ತೆಲಂಗಾಣವು 2.18 ಕೋಟಿ ಟನ್ ಅಕ್ಕಿಯನ್ನು ಉತ್ಪಾದಿಸುವ ಮೂಲಕ ರಾಷ್ಟ್ರದ ಆಹಾರ ಬುಟ್ಟಿಯಾಗಿ ಹೊರಹೊಮ್ಮಿದೆ.



ಭೂ ಆಡಳಿತದಲ್ಲಿ ಹೊಸ ಯುಗ - ಧರಣಿ ಪೋರ್ಟಲ್

- ಪೋರ್ಟಲ್ ಮುಂಗಡ ಸ್ಲಾಟ್ ಬುಕಿಂಗ್ ಮತ್ತು ತ್ವರಿತ ರೂಪಾಂತರದೊಂದಿಗೆ ನೋಂದಣಿಯನ್ನು ಸುಲಭ ನೀಡುತ್ತದೆ.

ಸದಾ ಹರಿಯುವ ನೀರು, ಜಲಭರಿತ ತೆಲಂಗಾಣ

- ರಾಜ್ಯ ರಚನೆಯ ನಂತರ, ರಾಜ್ಯ ಸರ್ಕಾರವು 2014-15 ಮತ್ತು 2020-21 ರ ನಡುವೆ ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳ ಮೇಲೆ 1,52,000 ಕೋಟಿ ರೂ ವೆಚ್ಚ ಮಾಡಿದ್ದು, ಒಟ್ಟು ನೀರಾವರಿ ಪ್ರದೇಶ (ಜಿಐಎ) 119% ಗಣನೀಯವಾಗಿ ಏರಿಕೆ ಕಂಡಿದೆ.

ರೈತರ ಸಬಲೀಕರಣ, ನೇಗಿಲ ಸಂಭ್ರಮ



- 74.31 ಲಕ್ಷ ಎಕರೆ ಪ್ರದೇಶದಲ್ಲಿ ನೀರಾವರಿ ಸೌಲಭ್ಯ
- 'ಮಿಷನ್ ಕಾಕತೀಯ' ಅಡಿಯಲ್ಲಿ ರಾಜ್ಯದ ಎಲ್ಲಾ ಸಣ್ಣ ನೀರಾವರಿ ಟ್ಯಾಂಕ್‌ಗಳು ಮತ್ತು ಜಲಮೂಲಗಳ ಪುನರುತ್ಥಾನ
- ಮಹತ್ವಾಕಾಂಕ್ಷೆಯ ಯೋಜನೆಗಳಾದ ಕಾಳೇಶ್ವರಂ ಏತ ನೀರಾವರಿ ಯೋಜನೆ, ಮಹಾತ್ಮ ಗಾಂಧಿ ಕಲ್ವಕುರ್ತಿ ಏತ ನೀರಾವರಿ ಯೋಜನೆ ಮತ್ತು ಎ ಚೊಕ್ಕರಾವ್ ದೇವಡುಲ ಏತ ನೀರಾವರಿ ಯೋಜನೆ ರಾಜ್ಯದಲ್ಲಿ ನೀರಾವರಿ ಸೌಲಭ್ಯ ಪ್ರವೇಶವನ್ನು ತೀವ್ರವಾಗಿ ಹೆಚ್ಚಿಸಿವೆ.



Issued by Department of Information & Public Relations, Govt. of Telangana.

ಪರಿಷ್ಕರಣೆ: ಒಪ್ಪಿಗೆ ಹಿಂಪಡೆದ ನಾಲ್ವರು ಲೇಖಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆ ನೆಪದಲ್ಲಿ ಮೂಲಭೂತವಾದ ಹೇರಲಾಗುತ್ತಿದೆ, ಸಮಿತಿ ಅಧ್ಯಕ್ಷರು ನಾಡಗೀತೆ ಹಾಗೂ ಕುವೆಂಪು ಅವರಿಗೆ ಅವಮಾನ ಮಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿರುವ ನಾಲ್ವರು ಲೇಖಕರು ತಮ್ಮ ಪಾಠದ ಬಳಕೆಗೆ ನೀಡಿದ್ದ ಅನುಮತಿಯನ್ನು ವಾಪಸ್ ಪಡೆದಿದ್ದಾರೆ.

ಈ ಸಂಬಂಧ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಪತ್ರ ಬರೆದಿರುವ ಅವರು, ಯಾವುದೇ ಕಾರಣಕ್ಕೂ ತಮ್ಮ ಲೇಖನ–ಕವಿತೆ ಬಳಸದಂತೆ ವಿನಂತಿಸಿದ್ದಾರೆ.

ವರನಟ ರಾಜಕುಮಾರ್ ಪಾಠವೂ ಹಿಂದಕ್ಕೆ

‘ವರನಟ ಡಾ.ರಾಜಕುಮಾರ್ ಬಗೆಗಿನ ಲೇಖನವನ್ನು ಆರನೇ ತರಗತಿಯ ಪಠ್ಯದಲ್ಲಿ ಸೇರಿಸಲು ನೀಡಿದ್ದ ಒಪ್ಪಿಗೆಯನ್ನು ಹಿಂಪಡೆದಿದ್ದೇನೆ’ ಎಂದು ಲೇಖಕ ದೊಡ್ಡ ಹುಲ್ಲೂರು ರುಕ್ಕೋಜಿರಾವ್ ಅವರು ಸಚಿವರಿಗೆ ಪತ್ರ ಬರೆದಿದ್ದಾರೆ.

‘ಈಗಿನ ಅಧ್ಯಕ್ಷ ಚಕ್ರತೀರ್ಥ ಅವರು ನಾಡಧ್ವಜವನ್ನು ಒಳ ಉಡುಪಿಗೆ ಹೋಲಿಸಿದ್ದಲ್ಲದೇ ಕುವೆಂಪು ಅವರನ್ನು ಕೀಳಾಗಿ ಕಂಡಿದ್ದಾರೆ. ಕನ್ನಡ ಭಾಷೆಯನ್ನೇ ತಮ್ಮ ಮೇಲೆ ಹೇರಲಾಗಿದೆ ಎಂದು ಕನ್ನಡ ವಿರೋಧಿ ಮಾತನಾಡಿದ್ದಾರೆ. ಕನ್ನಡ ದ್ರೋಹದ ಮಾತನಾಡಿರುವ ವ್ಯಕ್ತಿ ಪರಿಷ್ಕರಿಸಿದ ವ್ಯಕ್ತಿಯ ಪಠ್ಯದಲ್ಲಿ, ಅಪೂರ್ವ ಕನ್ನಡ ಪ್ರೇಮಿಯಾದ ರಾಜ ಕುಮಾರ್ ಅವರ ಬಗೆಗಿನ ಪಠ್ಯ ಸೇರಿಸುವುದು ರಾಜ್ ಅವರಿಗೆ ಅವಮಾನ ಮಾಡಿದಂತೆ. ಹೀಗಾಗಿ ಲೇಖನ ಬಳಸಬೇಡಿ’ ಎಂದು ಅವರು ಕೋರಿದ್ದಾರೆ.

ಸಾವಿತ್ರಿಬಾಯಿ ಫುಲೆ ಪಾಠ ವಾಪಸ್

ಏಳನೇ ತರಗತಿಯ ಕನ್ನಡ ಭಾಷಾ(ಪ್ರಥಮ) ಪಠ್ಯ ಪುಸ್ತಕದಲ್ಲಿ ‘ಸಾವಿತ್ರಿ ಬಾಯಿ ಫುಲೆ’ ಗದ್ಯ ಬರಹ ಹಾಗೂ ಅದೇ ತರಗತಿಯ ಕನ್ನಡ ಭಾಷೆ ತೃತೀಯ ಪಠ್ಯಪುಸ್ತಕದಲ್ಲಿರುವ ‘ನೆನೆವುದೆನ್ನ ಮನ’ವನ್ನು ಪಠ್ಯಕ್ಕೆ ಅಳವಡಿಸಲು ಒಪ್ಪಿಗೆ ನೀಡಿದ್ದನ್ನು ವಾಪಸ್ ಪಡೆದಿರುವುದಾಗಿ ಲೇಖಕಿ ಎಚ್.ಎಸ್.ಅನುಪಮಾ ಹೇಳಿದ್ದಾರೆ.

‘ಕನ್ನಡಿಯಂತಹ ಮನಸ್ಸಿನ ಮಕ್ಕಳ ಭವಿಷ್ಯದ ಬಗ್ಗೆ ಕಿಂಚಿತ್ತೂ ಕಾಳಜಿಯಿರದ ದುರುಳರು ಪಠ್ಯಪುಸ್ತಕದಲ್ಲಿ ಕೈಕಾಲಾಡಿಸಿ ಅವಾಂತರ ಮಾಡಿದ್ದಾರೆ. ಹೀಗಾಗಿ ಒಪ್ಪಿಗೆ ಹಿಂಪಡೆದಿದ್ದೇನೆ’ ಎಂದಿದ್ದಾರೆ.

‘ನನ್ನ ಅಯ್ಯ’ ವಾಪಸ್–ದು.ಸರಸ್ವತಿ

‘ಏಳನೇ ತರಗತಿಯ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿರುವ ‘ನನ್ನ ಅಯ್ಯ’ ಗದ್ಯ ಬರಹದ ಬಳಕೆಗೆ ನೀಡಿದ್ದ ಒಪ್ಪಿಗೆ ವಾಪಸ್ ಪಡೆದಿದ್ದೇನೆ’ ಎಂದು ಲೇಖಕಿ ದು.ಸರಸ್ವತಿ ತಿಳಿಸಿದ್ದಾರೆ.

‘ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಹಾಳುಗೆಡಹುತ್ತಿರುವ ಹಾಗೂ ಕುವೆಂಪು ಅವರನ್ನು ಅವಮಾನಿಸುತ್ತಿರುವ ಹಿನ್ನೆಲೆಯಲ್ಲಿ ಈ ನಿಲುವು ತೆಗೆದುಕೊಂಡಿರುವೆ’ ಎಂದು ಅವರು ಹೇಳಿದ್ದಾರೆ.

ಕವಿತೆ ವಾಪಸ್ ಪಡೆದ ಸುಕನ್ಯಾ ಮಾರುತಿ

ಪಠ್ಯ ಪರಿಷ್ಕರಣೆ ನೆಪದಲ್ಲಿ ಮೂಲಭೂತವಾದವನ್ನು ಮಕ್ಕಳ ಮೇಲೆ ಹೇರಿ ಕಲುಷಿತಗೊಳಿಸುವುದನ್ನು ವಿರೋಧಿಸುವುದಾಗಿ ಹೇಳಿರುವ ಕವಯಿತ್ರಿ ಸುಕನ್ಯಾ ಮಾರುತಿ ಅವರು, ‘ಹತ್ತನೇ ತರಗತಿಯ ದ್ವಿತೀಯ ಭಾಷಾ ಪಠ್ಯದಲ್ಲಿರುವ ‘ಏಣಿ’ ಕವಿತೆಗೆ ನೀಡಿದ್ದ ಅನುಮತಿಯನ್ನು ವಾಪಸ್ ಪಡೆಯುವುದಾಗಿ ತಿಳಿಸಿದ್ದಾರೆ.

‘ಕುವೆಂಪು, ನಾಡಗೀತೆ, ನಾಡಧ್ವಜಕ್ಕೆ ಅವಹೇಳನ ಮಾಡಿರುವವರ ವಿರುದ್ಧ ಕ್ರಮ ಜರುಗಿಸದೇ ಇರುವ ಸರ್ಕಾರದ ಧೋರಣೆ ಸರಿಯಲ್ಲ. ಈ ಅಹಿತಕರ ವಿದ್ಯಮಾನಗಳನ್ನು ವಿರೋಧಿಸುತ್ತೇನೆ’ ಎಂದವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಭೂವೀಕ್ಷಕ ಉಪಗ್ರಹ ‘ನಿಸಾರ್’: ಪೇಲೋಡ್ ಭಾರತಕ್ಕೆ

ಬೆಂಗಳೂರು: ಅಮೆರಿಕಾದ ‘ನಾಸಾ’ ಮತ್ತು ಭಾರತದ ‘ಇಸ್ರೊ’ ಜಂಟಿಯಾಗಿ ಅಭಿವೃದ್ಧಿಪಡಿಸಿ ಉಡಾವಣೆ ಮಾಡಲಿರುವ ಭೂವೀಕ್ಷಕ ಉಪಗ್ರಹದ ‘ನಾಸಾ– ಇಸ್ರೊ ಸಿಂಥೆಟಿಕ್ ಅಪರ್ಚರ್ ರಾಡಾರ್’ (ನಿಸಾರ್) ನ ಪೇಲೋಡ್‌ನ ಜೋಡಣೆ ಕಾರ್ಯ ಅಮೆರಿಕಾದಲ್ಲಿ ಮುಗಿದ್ದು, ಅದನ್ನು ಉಪಗ್ರಹಕ್ಕೆ ಅಳವಡಿಸಲು ಭಾರತಕ್ಕೆ ಸದ್ಯವೇ ಕಳುಹಿಸಲಾಗುವುದು.

ಇಸ್ರೊ ತನ್ನ ಉಡಾವಣೆ ವಾಹನದ ಮೂಲಕ ಈ ಉಪಗ್ರಹವನ್ನು ಉಡಾವಣೆ ಮಾಡಲಿದೆ. ಭಾರತ ಮತ್ತು ಅಮೆರಿಕಾದ ವಿಶಾಲ ಭೂಪ್ರದೇಶ, ಭೂಮಿಯ ಮೇಲ್ಪದರ, ಘನೀಕೃತ ರೂಪದಲ್ಲಿರುವ ನೀರು, ಸಮುದ್ರದಲ್ಲಿನ ಮಂಜುಗಡ್ಡೆ, ಮಂಜುಗಡ್ಡೆ ಆವರಿಸಿದ ಸರೋವರ, ಹೆಪ್ಪುಗಟ್ಟಿದ ನದಿ, ನೀರ್ಗಲ್ಲು ಮತ್ತು ಹಿಂದೂ ಮಹಾಸಾಗರದ ಮೇಲೆ ಈ ಉಪಗ್ರಹವು ಕಣ್ಣಿಡಲಿದೆ.



ನಾಸಾ ಸೈನ್ಸ್ ಮಿಷನ್ ನಿರ್ದೇಶನಾಲಯದ ಸಹಾಯಕ ಆಡಳಿತಾಧಿಕಾರಿ ಡಾ.ಥಾಮಸ್ ಜುರ್ಬುಚೆನ್ ಮತ್ತು ಅಧಿಕಾರಿಗಳ ತಂಡ ಈ ವಿಚಾರವಾಗಿ ಇಸ್ರೊ ಅಧಿಕಾರಿಗಳ ಜತೆ ಸಭೆ ನಡೆಸಿದರು.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಥಾಮಸ್ ಅವರು, ‘ಅಮೆರಿಕಾ ಮತ್ತು ಭಾರತದ ಮಧ್ಯೆ ಅತ್ಯಂತ ದೊಡ್ಡ ಸಹಯೋಗದ ಯೋಜನೆ ಇದಾಗಿದ್ದು, ಇಸ್ರೊ ಅಧ್ಯಕ್ಷ ಮತ್ತು ವೈಜ್ಞಾನಿಕ ಕಾರ್ಯದರ್ಶಿ ಮಾತುಕತೆ ನಡೆಸಿದ್ದೇವೆ’ ಎಂದರು. ನಗರದ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಜತೆ ಸಂವಾದ ನಡೆಸಲು ಬಂದಿದ್ದ ಅವರು ಸುದ್ದಿಗಾರರ ಜತೆ ಮಾಹಿತಿ ಹಂಚಿಕೊಂಡರು.

ಬಡ ವಿದ್ಯಾರ್ಥಿಗಳ ನೀಟ್, ಜೆಇಇ ಶುಲ್ಕ ಭರಿಸಲು ಚಿಂತನೆ

ಮಂಗಳೂರು: ‘ನೀಟ್, ಜೆಇಇ, ಸಿಇಟಿ ಬರೆಯುವ ಬಡ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ಸರ್ಕಾರದಿಂದಲೇ ಭರಿಸುವ ಚಿಂತನೆ ಇದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ಬುಧವಾರ ಆಯೋಜಿಸಿದ್ದ ರೈತ ವಿದ್ಯಾನಿಧಿ ಪಡೆದ ವಿದ್ಯಾರ್ಥಿಗಳೊಂದಿಗಿನ ಸಂವಾದದಲ್ಲಿ, ರೈತ ವಿದ್ಯಾನಿಧಿಯ ಮೊತ್ತ ಹೆಚ್ಚಿಸಬೇಕು ಎಂಬ ವಿದ್ಯಾರ್ಥಿನಿಯ ಬೇಡಿಕೆಗೆ ಉತ್ತರಿಸಿದ ಅವರು, 'ಈ ವರ್ಷ ಮೊದಲ ಬಾರಿಗೆ ಪ್ರಾರಂಭಿಸಲಾಗಿದ್ದು, ವಿದ್ಯಾರ್ಥಿಗಳ ಫಲಿತಾಂಶ ಗಮನಿಸಿ, ಮೊತ್ತ ಹೆಚ್ಚಳಕ್ಕೆ ಯೋಚಿಸುತ್ತೇನೆ' ಎಂದರು.

ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಹೊಸದೊಂದು ತರಬೇತಿ ಯೋಜನೆ ಪ್ರಾರಂಭಿಸಲು ಸರ್ಕಾರ ಯೋಚಿಸಿದೆ. ಪರೀಕ್ಷೆ ಸಿದ್ಧತೆ ಕೈಗೊಳ್ಳುವ ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ, ಈ ವರ್ಷ ಬಜೆಟ್‌ನಲ್ಲಿ ಘೋಷಿಸಿದಂತೆ ‘ಮುಖ್ಯಮಂತ್ರಿ ಮಾರ್ಗದರ್ಶಿ’ ಆ್ಯಪ್ ಸಿದ್ಧಪಡಿಸಲಾಗಿದೆ. ₹ 10 ಕೋಟಿ ಮೊತ್ತ ಮೀಸಲಿಡಲಾಗಿದ್ದು, ಬೈಜೂಸ್ ಜತೆ ಸೇರಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಸಾವಿರಾರು ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗಿದೆ ಎಂದರು.

ನಾರಾಯಣಗುರುಗಳ ತತ್ವ ಹತ್ತಿಕ್ಕುವ ಪ್ರಯತ್ನಕ್ಕೆ ಖಂಡನೆ

ಪ್ರಜಾವಾಣಿ ವಾರ್ತೆ



ಪ್ರಣವಾನಂದ ಸ್ವಾಮೀಜಿ

ಬೆಂಗಳೂರು: ‘ಶಾಲಾ ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಪಠ್ಯವನ್ನು ಸಮಾಜ ವಿಜ್ಞಾನದಿಂದ ತೆಗೆದು, ಕನ್ನಡ ವಿಷಯಕ್ಕೆ ಸೇರಿಸುವ ಮೂಲಕ ಸರ್ಕಾರವು ನಾರಾಯಣ ಗುರುಗಳ ತತ್ವ ಸಿದ್ಧಾಂತ ಹತ್ತಿಕುವ ಪ್ರಯತ್ನ ಮಾಡುತ್ತಿದೆ’ ಎಂದು ರಾಷ್ಟ್ರೀಯ ಈಡಿಗ ಮಹಾ ಮಂಡಳದ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಮಾಜ ವಿಜ್ಞಾನ ಪಠ್ಯವನ್ನು ಎಲ್ಲ ವಿದ್ಯಾರ್ಥಿಗಳು ಓದುತ್ತಾರೆ. ಆದರೆ, ಕನ್ನಡವನ್ನು ಶೇ 70 ರಷ್ಟು ವಿದ್ಯಾರ್ಥಿಗಳು ಮಾತ್ರ ಓದುತ್ತಾರೆ. ನಾರಾಯಣ ಗುರುಗಳ ಜೀವನ ಚರಿತ್ರೆ ಪಠ್ಯಪುಸ್ತಕದಲ್ಲಿ ಸೇರ್ಪಡೆಯಾಗಬೇಕು’ ಎಂದು ಅವರು ಆಗ್ರಹಿಸಿದರು.

ಪಠ್ಯಪುಸ್ತಕ ಪರಿಷ್ಕರಣೆ ಗೊಂದಲ ಕುರಿತ ವರದಿ • ‘ಪರಿಷ್ಕರಣೆ ಕಾರ್ಯಕ್ಕೆ ಚಕ್ರತೀರ್ಥ ಅರ್ಹ’

‘ಸಾಧನೆ ಸಹಿಸದೇ ಪಠ್ಯ ಪರಿಷ್ಕರಣೆ ವಿವಾದ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ 24 ಸಾವಿರ ಶಿಕ್ಷಕರ ವರ್ಗಾವಣೆ ಸುಗಮವಾಗಿ ನಡೆದಿರುವುದು, ಮಾದರಿ ಶಾಲೆಗಳ ಸ್ಥಾಪನೆಯಂತಹ ಸಾಧನೆಗಳನ್ನು ಸಹಿಸದೇ ಪಠ್ಯಪುಸ್ತಕ ಪರಿಷ್ಕರಣೆ ರಾಜಕೀಯಗೊಳಿಸಲಾಗಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಪಠ್ಯಪುಸ್ತಕ ಪರಿಷ್ಕರಣೆ ಗೊಂದಲಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಿಸಲು ಸಿದ್ಧಪಡಿಸಿರುವ ವರದಿಯಲ್ಲಿ ತಿಳಿಸಿದ್ದಾರೆ.

35 ಪುಟಗಳ ಈ ವರದಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ‘ಪಠ್ಯಪುಸ್ತಕ ಪರಿಷ್ಕರಣೆ ಬಗ್ಗೆ ಅನಗತ್ಯ ವಿವಾದ ಸೃಷ್ಟಿಸಿ, ಗೊಂದಲ ಮೂಡಿಸಿ, ಶೈಕ್ಷಣಿಕ ವಾತಾವರಣ ಹಾಳು ಮಾಡುವ ಕಾರ್ಯವನ್ನು ಅನೇಕರು ಮಾಡುತ್ತಿದ್ದಾರೆ. ರೋಹಿತ್ ಚಕ್ರತೀರ್ಥ ಅವರು ಕನ್ನಡ ಕಾವ್ಯ, ಇತಿಹಾಸವನ್ನು ಆಳವಾಗಿ ಅಭ್ಯಾಸ ಮಾಡಿದ್ದು, ಪರಿಷ್ಕರಣೆ ಕಾರ್ಯಕ್ಕೆ ಅರ್ಹರಾಗಿದ್ದಾರೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ವರದಿಯ ಪ್ರಮುಖ ಅಂಶಗಳು:

- ಎಲ್ಲಾ ಪಠ್ಯಪುಸ್ತಕಗಳನ್ನು ಪರಿಷ್ಕರಣೆ ಮಾಡಿಲ್ಲ. 1 ರಿಂದ 10 ನೇ ತರಗತಿಯ ಕನ್ನಡ ಭಾಷಾ ಪಠ್ಯಪುಸ್ತಕಗಳು ಮತ್ತು 6 ರಿಂದ 10 ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಅಲ್ಪ ಪ್ರಮಾಣದ ಪರಿಷ್ಕರಣೆ ಮಾಡಲಾಗಿದೆ.
- 2014–15 ರಲ್ಲಿ ಸಾಕಷ್ಟು ಉತ್ತಮವಾಗಿ ರೂಪಿಸಲ್ಪಟ್ಟ ನೂತನ ಪಠ್ಯ ಪುಸ್ತಕಗಳನ್ನು ಜಾರಿಯಾದ ಒಂದೆರಡು ವರ್ಷದಲ್ಲಿಯೇ ಕೇಸರಿಕರಣದ ನೆಪವೊಡ್ಡಿ ಮತ್ತೊಮ್ಮೆ ಪರಿಷ್ಕರಿಸಲು ಅಂದಿನ ಸರ್ಕಾರ ನಿರ್ಧಾರ ಮಾಡಿ 2017–18 ರಲ್ಲಿ ಪರಿಷ್ಕೃತ ಪಠ್ಯಪುಸ್ತಕಗಳನ್ನು ಜಾರಿಗೊಳಿಸಿತು. ಈ ಪಠ್ಯ ಪುಸ್ತಕಗಳಲ್ಲಿ ಭಾರತೀಯ ಮತ್ತು ಹಿಂದೂಧರ್ಮದ ವಿಚಾರಗಳಿಗೆ ಚ್ಯುತಿ ತರಲಾಗಿತ್ತು.
- ಅಲ್ಲದೆ, ನಿರ್ದಿಷ್ಟ ಜಾತಿ, ಧರ್ಮ, ಪಂಥಗಳಿಗೆ ಚ್ಯುತಿ ತರುವ ಅಂಶಗಳನ್ನು ಬರಗೂರು ಸಮಿತಿ ಸೇರಿಸಿತ್ತು. ಹೊಸ ಮತಗಳ ಉದಯಕ್ಕೆ ಕಾರಣಗಳು ಎಂಬ ಪೀಠಿಕಾ ಭಾಗ ಸೇರಿಸಿತ್ತು. ಇದರಲ್ಲಿ ವೈದಿಕ ಧರ್ಮ ಮತ್ತು ಬ್ರಾಹ್ಮಣರನ್ನು ನಿಂದಿಸಲಾಗಿತ್ತು. ವೇದಗಳ ಕಾಲದಲ್ಲಿ ಹೋಮ, ಹವನಗಳಿಂದ ಹಾಲು, ತುಪ್ಪ, ಆಹಾರಗಳಿಗೆ ಅಭಾವ ಉಂಟಾಗಿ, ಬಡತನಕ್ಕೆ ಕಾರಣವಾಗಿತ್ತು ಎಂಬ ಆಧಾರ ರಹಿತ ಮಾಹಿತಿ ನೀಡಲಾಗಿತ್ತು. ಪುರೋಹಿತ ಶಾಹಿ, ಬ್ರಾಹ್ಮಣ ಎನ್ನುವ ಪದಗಳನ್ನು ಅವಹೇಳನಕಾರಿಯಾಗಿ ಬಳಸಲಾಗಿತ್ತು.
- ಮಾತೃ ಭೂಮಿ, ಭರತ ಮಾತೆ, ಭಾರತೀಯ, ತಾಯಿ, ತಾಯ್ನೆಲ ಮುಂತಾದ ಪದಗಳನ್ನು ಸಾರಾಸಗಟಾಗಿ ಅಳಿಸಿ ಹಾಕಲಾಯಿತು. ಹಿಂದೂ ಮಹಾಸಾಗರ ಎಂಬ ಪದವನ್ನು ತೆಗೆದು ಇಂಡಿಯನ್ ಓಷನ್ ಎಂದು ಬದಲಾವಣೆ ಮಾಡಲಾಗಿತ್ತು. 1857 ರ ಭಾರತ ಸ್ವಾತಂತ್ರ್ಯ ಸಂಗ್ರಾಮವನ್ನು ‘ದಂಗೆ’ ಎಂದು ಕರೆಯಲಾಗಿತ್ತು.
- ಪಠ್ಯಪುಸ್ತಕಗಳ ಮುದ್ರಣ ಪೂರೈಕೆಗಾಗಿ ಟೆಂಡರ್ ಅನ್ನು 2021 ರ ಡಿಸೆಂಬರ್ 22 ರಂದು ಕರೆಯಲಾಗಿತ್ತು. ಮುದ್ರಕರಿಗೆ ಕಾರ್ಯಾದೇಶವನ್ನು 2022 ರ ಫೆಬ್ರುವರಿ 18 ರಿಂದ 2022 ರ ಮಾರ್ಚ್ 5 ಅವಧಿಯಲ್ಲಿ ನೀಡಲಾಗಿತ್ತು. ಪ್ರಸ್ತುತ ಪಠ್ಯ ಪುಸ್ತಕಗಳು ಶೇ 76.87 ರಷ್ಟು ಮುದ್ರಣಗೊಂಡು ಶೇ 63.01 ರಷ್ಟು ಶಾಲೆಗಳಿಗೆ ಸರಬರಾಜು ಮಾಡಲಾಗಿದೆ.

ಸಾಹಿತ್ಯ ಕ್ಷೇತ್ರದಲ್ಲಿ ರಾಜಕೀಯ ಬೇಡ: ವಸಂತಕುಮಾರ್

ಬೆಂಗಳೂರು: ‘ರಾಜಕೀಯದಲ್ಲಿ ಅಪಪ್ರಚಾರ ಒತ್ತಡ ತಂತ್ರ ಕುತಂತ್ರಗಳಿದ್ದು, ಅವು ಸಾಹಿತ್ಯ ಕ್ಷೇತ್ರವನ್ನು ಆಕ್ರಮಿಸದಿರಲಿ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ.ವಸಂತಕುಮಾರ್ ಹೇಳಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪಕ್ಷಗಳಲ್ಲಿ ಸಾಹಿತ್ಯವಿರಲಿ, ಸಾಹಿತ್ಯದಲ್ಲಿ ಪಕ್ಷಗಳು ಬೇಡ. ಪ್ರಾಚೀನ ಕಾಲದಿಂದಲೂ ಕನ್ನಡ ಸಾಹಿತ್ಯವನ್ನು ಜನ ಬದುಕಲೆಂದು ಬರೆಯುವವರ ಪರಂಪರೆ ಇದೆ. ಪಕ್ಷ ರಾಜಕಾರಣ ಮಾಡುವ ಸಾಹಿತಿಗಳೇ ಇಡೀ ಕನ್ನಡ ಸಾಹಿತ್ಯದ ಪ್ರತಿನಿಧಿಗಳಲ್ಲ ಎಂಬುದನ್ನು ಸರ್ಕಾರಗಳು ತಿಳಿದಿರಲಿ ಎಂದಿದ್ದಾರೆ.

‘ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಸಾಹಿತಿಗಳು ಎಂದಾಗಬಾರದು. ಬೇಕಾದರೆ ಆ ಪಕ್ಷಗಳ ಕಾರ್ಯಕರ್ತರು ನಾಯಕರಾಗಿ ರಾಜಕೀಯ ಕ್ಷೇತ್ರದಲ್ಲಿ ಸುಧಾರಣೆ ತರಲಿ. ತಮ್ಮ ತಮ್ಮ ಸಿದ್ಧಾಂತಗಳಿಗೆ ಆಶಯಗಳಿಗೆ ತಕ್ಕಂತೆ ತಂತ್ರ ಪ್ರತಿತಂತ್ರಗಳನ್ನು ಬಳಸಿ, ಭ್ರಷ್ಟಾಚಾರಿಗಳನ್ನು ಸೋಲಿಸಿ ಮನೆಗೆ ಕಳಿಸುವ ಕೆಲಸ ಮಾಡಲಿ. ಸದನಗಳಲ್ಲಿ ಶಿಷ್ಟಾಚಾರಗಳನ್ನು ಜಾರಿಗೆ ತರಲು ಸಾಧ್ಯವೇ ಎಂದು ಪರೀಕ್ಷಿಸಿಕೊಳ್ಳಿ’ ಎಂದು ಹೇಳಿದ್ದಾರೆ.

‘ಸುಳ್ಳು ಸಾಧಿಸುವ ಬದಲು ತಪ್ಪೊಪ್ಪಿಕೊಂಡು ಕ್ಷಮೆ ಕೇಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾಲತಾಣದಲ್ಲಿ ನಾಡಗೀತೆ ಮತ್ತು ಕುವೆಂಪು ಅವರ ಬಗ್ಗೆ ಕೆಟ್ಟ ಒಕ್ಕಣೆ ಬಂದಾಗ ಒಬ್ಬ ಲೇಖಕರಾಗಿ ಯಾಕೆ ತೆಪ್ಪಗಿದ್ದಿರಿ’ ಎಂದು ರೋಹಿತ್ ಚಕ್ರತೀರ್ಥ ಅವರಿಗೆ ಪ್ರಶ್ನಿಸಿರುವ ಸಾಹಿತಿ ಹಂ.ಪ. ನಾಗರಾಜಯ್ಯ ಅವರು, ‘ಸುಳ್ಳನ್ನು ಸಾಧಿಸುವ ಬದಲು ತಪ್ಪು ಒಪ್ಪಿಕೊಂಡು ಕ್ಷಮೆ ಕೇಳುವುದು ಮೇಲು’ ಎಂದು ಸಲಹೆ ನೀಡಿದ್ದಾರೆ.

‘ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಗ್ಗೆ ಅನೇಕರು ದೂರವಾಣಿ ಕರೆ ಮಾಡಿ ಪ್ರಶ್ನೆ ಕೇಳುತ್ತಿದ್ದಾರೆ. ಅದಕ್ಕೆ ಎಲ್ಲರಿಗೂ ತಲುಪುವಂತೆ ಉತ್ತರ ನೀಡುತ್ತಿದ್ದೇನೆ’ ಎಂದು ಮಾಧ್ಯಮಕ್ಕೆ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಕುವೆಂಪು ಮತ್ತು ನಾಡಗೀತೆ ವಿಚಾರವಾಗಿ ನನ್ನ ನಿಲುವನ್ನು ಅನೇಕರು ಸಮರ್ಥಿಸಿದ್ದಾರೆ. ಇನ್ನು ಕೆಲವರು ರೋಹಿತ್ ಚಕ್ರತೀರ್ಥರನ್ನು ಬೆಂಬಲಿಸಿ ವಿವರಣೆಯಿತ್ತು, ಇದೊಂದು ಅಣಕವಾಡೆಂದೂ, ನಾನು ರಾಜೀನಾಮೆ ನೀಡಿರುವುದು ಸರಿಯಲ್ಲವೆಂದೂ ವಾದಿಸಿದ್ದಾರೆ. ‘ಕುವೆಂಪು ನಿಂದನೆಯ ಸಾಲುಗಳನ್ನು ರೋಹಿತರು ಬರೆದದ್ದಲ್ಲ. ಬೇರೆ ಯಾರೋ ಬರೆದದ್ದು. ತಮಗೆ ಜಾಲತಾಣದಲ್ಲಿ ಬಂದುದನ್ನು ಫಾರ್ವರ್ಡ್ ಮಾಡಿದ್ದಾರೆ’ ಎಂದು ಅವರು ಸಮರ್ಥನೆ ಮಾಡುತ್ತಿದ್ದಾರೆ’ ಎಂದು ಹೇಳಿರುವ ಹಂಪನಾ, ‘ಇದು ಅಣಕವಾಡಲ್ಲ, ಕೊಳಕು ಬುದ್ಧಿಯ ಗೇಲಿಮಾತುಗಳು. ವಾಸ್ತವವಾಗಿ ಇದು ಫಾರ್ವರ್ಡ್ ಮೆಸೇಜೆಂದು ನಂಬಲು ಸರಿಯಾದ ಕುರುಹುಗಳಿಲ್ಲ. ಬಂದಿರುವ ಆರೋಪದಿಂದ ಪಾರಾಗಲು ಉಪಾಯಗಳನ್ನು ಹುಡುಕಿ ‘ವಾಟ್ಸ್ ಆ್ಯಪ್‌ನಲ್ಲಿ ಬಂದಿದೆ’ ಎಂದು ಹೊಸದಾಗಿ ಸೇರಿಸಿದಂತಿದೆ’ ಎಂದೂ ಪ್ರತಿಪಾದಿಸಿದ್ದಾರೆ.

‘ಕುವೆಂಪು ಅವರ ಬಗ್ಗೆ ನಿಂದನೆಯ ಒಕ್ಕಣೆ ಬರೆದವರು ಯಾರು? ಜಾಲತಾಣದಲ್ಲಿ ಯಾರಿಂದ ನಿಮಗೆ ಬಂತೆಂಬುದನ್ನು ಮೊದಲು ಸ್ಪಷ್ಟಪಡಿಸಿ ಮತ್ತು ನಿಮಗೊಬ್ಬರಿಗೆ ಮಾತ್ರ ಹೇಗೆ ಬಂತು. ಎಷ್ಟನೆಯ ತಾರೀಕು, ಎಷ್ಟು ಹೊತ್ತಿಗೆ ನಿಮಗೆ ಬಂತು? ನಿಮಗೆ ಕಳಿಸಿದವರನ್ನು ‘ಇದು ತಪ್ಪು’ ಎಂದು ಕೇಳಲಿಲ್ಲವೇಕೆ. ನೀವು ಬೇರೆ ಯಾರ್ಯಾರಿಗೆ ಫಾರ್ವರ್ಡ್ ಮಾಡಿದಿರಿ’ ಎಂದು ರೋಹಿತ್ ಅವರನ್ನು ಹಂಪನಾ ಪ್ರಶ್ನಿಸಿದ್ದಾರೆ.

‘ಪಠ್ಯಪುಸ್ತಕ ಸಂಬಂಧವಾಗಿ ನಾನು ಟೀಕಿಸದಿರುವುದಕ್ಕೆ ಕಾರಣವೆಂದರೆ ನಾನು ಆ ಪುಸ್ತಕಗಳನ್ನು ಓದಿಲ್ಲ. ಆಮೂಲಾಗ್ರವಾಗಿ ನೋಡದೆ ನಾನು ಪಠ್ಯಪುಸ್ತಕಗಳ ಚರ್ಚೆಗೆ ಇಳಿಯಲಿಲ್ಲ. ಅದನ್ನು ಓದಿನೋಡಿರುವವರು ತಮ್ಮ ಅಭಿಪ್ರಾಯ-ಆಕ್ಷೇಪಗಳನ್ನು ತಿಳಿಸುತ್ತಿದ್ದಾರೆ. ನಾನು ಹಟವಾದಿಯೇನಲ್ಲ. ನನ್ನದು ತಪ್ಪು ಗ್ರಹಿಕೆ ಎಂದು ತೋರಿಸಿಕೊಟ್ಟರೆ ತಿದ್ದಿಕೊಳ್ಳುತ್ತೇನೆ. ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಹೇಳಿರುವುದನ್ನು ನಾನು ಸ್ವಾಗತಿಸುತ್ತೇನೆ’ ಎಂದು ಅವರು ತಿಳಿಸಿದ್ದಾರೆ.

ಪ್ರತಿಭಟನಕಾರರ ಮೇಲೆ ಬಿಜೆಪಿ ಕಾರ್ಯಕರ್ತರಿಂದ ಹಲ್ಲೆ: ಆರೋಪ

ಶಿಕ್ಷಣ ಸಚಿವ ನಾಗೇಶ್ ಮನೆಗೆ ಎನ್‌ಎಸ್‌ಯುಐ ಮುತ್ತಿಗೆ

ಪ್ರಜಾವಾಣಿ ವಾರ್ತೆ

ತಿಪಟೂರು: ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ನಡೆಯ ವಿರುದ್ಧ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) ಸದಸ್ಯರು ಬುಧವಾರ ನಗರದ ಕೆ.ಆರ್. ಬಡಾವಣೆಯಲ್ಲಿರುವ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಪ್ರತಿಭಟನಕಾರರು ಸಚಿವರ ಮನೆಯ ಮುಂದೆ ನಿಂತು ಧಿಕ್ಕಾರ ಕೂಗಿದರು. ತಮ್ಮೊಂದಿಗೆ ತಂದಿದ್ದ ಆರ್‌ಎಸ್‌ಎಸ್ ಖಾಕಿ ಚಡ್ಡಿಗಳನ್ನು ಪ್ರದರ್ಶಿಸಿದರು. ಪೊಲೀಸರು ಪ್ರತಿಭಟನಕಾರರನ್ನು ವಶಕ್ಕೆ ಪಡೆದು ಗ್ರಾಮಾಂತರ ಠಾಣೆಗೆ ಕರೆದೊಯ್ದು, ನಂತರ ಬಿಟ್ಟು ಕಳುಹಿಸಿದರು.

ಠಾಣೆಯಿಂದ ಹೊರ ಬಂದ ಎನ್‌ಎಸ್‌ಯುಐ ಸದಸ್ಯರ ಗುಂಪಿನ ಮೇಲೆ ಬಿಜೆಪಿ ಕಾರ್ಯಕರ್ತರು ಏಕಾಏಕಿ ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಪೊಲೀಸರು ಮಧ್ಯ ಪ್ರವೇಶಿಸಿದಾಗ ಅವರೆಲ್ಲ ಸ್ಥಳದಿಂದ ಪರಾರಿಯಾದರು ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದ್ದಾರೆ.

‘ಹಲ್ಲೆಯನ್ನು ಪ್ರತ್ಯಕ್ಷವಾಗಿ ಕಂಡಿದ್ದೇನೆ. ನ್ಯಾಯಾಲಯದ ಒಳಗೆ ಇದ್ದ ನಮಗೆ ಗಲಾಟೆಯ ಸದ್ದು ಕೇಳಿಸಿತು. ಕೂಡಲೇ ಹೊರ ಬಂದಾಗ ನಾಲ್ಕೈದು ವಿದ್ಯಾರ್ಥಿಗಳನ್ನು ಸ್ಥಳೀಯ ಬಿಜೆಪಿ ಕಾರ್ಯಕರ್ತರು ಹೊಡೆಯುತ್ತಿದ್ದರು. ನಾವು ಅವರನ್ನು ತಡೆಯಲು ಯತ್ನಿಸಿದೆವು. ಪೊಲೀಸರು ಬಂದ ನಂತರ ಎಲ್ಲರೂ ಸ್ಥಳದಿಂದ ಓಡಿಹೋದರು’ ಎಂದು ಕಾಂಗ್ರೆಸ್ ಸ್ಥಳೀಯ ಮುಖಂಡ ನ್ಯಾಕೇನಹಳ್ಳಿ ಸುರೇಶ್ ತಿಳಿಸಿದರು.

‘ಶಿಕ್ಷಣ ವ್ಯವಸ್ಥೆಯೊಂದಿಗೆ ಸಚಿವರು ಹಾಗೂ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಸದಸ್ಯರು ಚೆಲ್ಲಾಟ ಆಡುತ್ತಿದ್ದಾರೆ. ಶಾಲೆ ಪ್ರಾರಂಭವಾಗಿ 15 ದಿನ ಕಳೆದರೂ ಪಠ್ಯಪುಸ್ತಕ ಸರಬರಾಜು ಆಗಿಲ್ಲ. ಮಹಾನ್ ಲೇಖಕರ, ಸಾಹಿತಿಗಳ ವಿಚಾರಗಳನ್ನು ಪಠ್ಯದಿಂದ ಕೈಬಿಡಲಾಗಿದೆ. ಕುವೆಂಪು, ಬಸವಣ್ಣನವರಿಗೆ ಅಪಮಾನ ಮಾಡಲಾಗಿದೆ. ಕೂಡಲೇ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ವಜಾ ಮಾಡಬೇಕು’ ಎಂದು ಎನ್‌ಎಸ್‌ಯುಐ ರಾಜ್ಯ ಘಟಕದ ಅಧ್ಯಕ್ಷ ಕೀರ್ತಿ ಗಣೇಶ್ ಆಗ್ರಹಿಸಿದರು.



ತಿಪಟೂರಿನ ಕೆ.ಆರ್‌.ಬಡಾವಣೆಯಲ್ಲಿನ ಸಚಿವ ಸಚಿವ ಬಿ.ಸಿ.ನಾಗೇಶ್ ಮನೆ ಎದುರು ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು

‘ನಿರ್ದಾಕ್ಷಿಣ್ಯ ಕ್ರಮ’

ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ತಿಪಟೂರಿನ ಮನೆಯ ಆವರಣಕ್ಕೆ ನುಗ್ಗಿ ಎನ್‌ಎಸ್‌ಯುಐ ಕಾರ್ಯಕರ್ತರು ಪ್ರತಿಭಟನೆ ಮಾಡಿ ದಾಂದಲೆ ನಡೆಸಿರುವುದು ಖಂಡನೀಯ. ಇಂತಹ ನಡೆ ವಿದ್ಯಾರ್ಥಿಗಳಿಗೆ, ಶಿಕ್ಷಣ ಪ್ರೇಮಿಗಳಿಗೆ ಶೋಭೆ ತರುವುದಿಲ್ಲ. ಈ ಕುಕೃತ್ಯ ನಡೆಸಿರುವ ದುಷ್ಕರ್ಮಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟ್ವೀಟ್ ಮಾಡಿದ್ದಾರೆ.

ಸಚಿವ ನಾಗೇಶ್ ಮನೆಗೆ ಬೆಂಕಿ ಹಚ್ಚುವ ಯತ್ನ: ಆರೋಪ

ತುಮಕೂರು: ಸಚಿವ ಬಿ.ಸಿ.ನಾಗೇಶ್ ಅವರ ತಿಪಟೂರು ನಗರದ ಮನೆಗೆ ಬೆಂಕಿ ಹಚ್ಚುವ ಪ್ರಯತ್ನ ನಡೆದಿದ್ದು, ಒಂದಷ್ಟು ಬಟ್ಟೆಗಳಷ್ಟೇ ಸುಟ್ಟಿವೆ. ಹೆಚ್ಚಿನ ಅನಾಹುತ ಸಂಭವಿಸಿಲ್ಲ. ಇಂತಹ ಗೂಂಡಾ ವರ್ತನೆ ಸಹಿಸುವುದಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಇಲ್ಲಿ ಬುಧವಾರ ಎಚ್ಚರಿಸಿದರು.

ಸಂಜೆ ಸಚಿವರ ತಿಪಟೂರಿನ ಮನೆಗೆ ಭೇಟಿ ನೀಡಿ ಮಾತನಾಡಿದ ಅವರು,‘ಇಲ್ಲಿಯ ಸ್ಥಿತಿ ನೋಡಿದರೆ ಪ್ರತಿಭಟನಕಾರರು ನಾಗೇಶ್ ಅವರ ಪ್ರಾಣ ತೆಗೆಯುತ್ತಿದ್ದರೇನೋ ಎನ್ನುವಂತಿದೆ’ಎಂದರು.

‘ಮನೆಯಲ್ಲಿ ಎಲ್ಲಿ ಬೆಂಕಿ ಹಚ್ಚಲಾಗಿದೆ ತೋರಿಸಿ’ ಎಂದು ಪರ್ತಕರ್ತರು ಪ್ರಶ್ನಿಸಿದಾಗ, ‘ಬಟ್ಟೆಗೆ ಬೆಂಕಿ ಹಚ್ಚಲಾಗಿದೆ. ಬಿಟ್ಟಿದ್ದರೆ ಮನೆಗೆ ಬೆಂಕಿ ಹಚ್ಚುತ್ತಿದ್ದರು.ನಮ್ಮ ಬಳಿ ಫೋಟೊ ಇವೆ. ಅವುಗಳನ್ನು ಮಾಧ್ಯಮಕ್ಕೆ ನೀಡಲಾಗುವುದು’ ಎಂದರು.

ಪ್ರತಿಭಟನಕಾರರ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆ ನಡೆಸಿರುವ ಕುರಿತ ಪ್ರಶ್ನೆಗೆ, ‘ಇದರ ಬಗ್ಗೆ ಮಾಹಿತಿ ಇಲ್ಲ. ಪೊಲೀಸರು ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಾರೆ’ ಎಂದರು.

ಹರ್ಷ ಹತ್ಯೆ: ಜಾಮೀನು ತಿರಸ್ಕೃತ

ಬೆಂಗಳೂರು: ಶಿವಮೊಗ್ಗದ ಬಜರಂಗ ದಳ ಕಾರ್ಯಕರ್ತ ಹರ್ಷ ಹತ್ಯೆಗೆ ಸಂಚು ರೂಪಿಸಲು ಸಹಕರಿಸಿದ ಆರೋಪ ಎದುರಿಸುತ್ತಿರುವ ಪ್ರಕರಣದ ಹತ್ತನೇ ಆರೋಪಿಯ ಜಾಮೀನು ಅರ್ಜಿಯನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

ಜಾಮೀನು ಕೋರಿ ಶಿವಮೊಗ್ಗದ ವಾದಿ ಎ ಹುದಾ ನಗರದ ವಾಸಿಯಾದ 50 ವರ್ಷದ ಜಾಫರ್ ಸಾದಿಕ್ ಬಿನ್ ಅಬ್ದುಲ್ ಸತ್ತಾರ್ ಸಲ್ಲಿಸಿದ್ದ ಅರ್ಜಿಯನ್ನು ಎನ್‌ಐಎ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಿ.ಎಂ.ಗಂಗಾಧರ ಅವರು ಮಾನ್ಯ ಮಾಡಲು ನಿರಾಕರಿಸಿದ್ದಾರೆ.

‘ನನ್ನನ್ನು ತಪ್ಪಾಗಿ ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ. ನಾನು ನಿರಪರಾಧಿ ನನಗೆ ಜಾಮೀನು ನೀಡಬೇಕು’ ಎಂದು ಕೋರಿ ಜಾಫರ್ ಸಾದಿಕ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗೆ ಅಕ್ಷೇಪಣೆ ಸಲ್ಲಿಸಿದ್ದ ಎನ್‌ಐಎ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, ‘ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಇರುವ ಕಾರಣ ಜಾಮೀನು ನೀಡಬಾರದು‘ ಎಂದು ಕೋರಿದ್ದರು.

ಪ್ರಾಸಿಕ್ಯೂಷನ್ ಆಕ್ಷೇಪಣೆಯನ್ನು ಮಾನ್ಯ ಮಾಡಿರುವ ನ್ಯಾಯಾಧೀಶರು, ‘ಆರೋಪಿಯು ಕೃತ್ಯದಲ್ಲಿ ಭಾಗಿಯಾಗಿರುವ ಬಗ್ಗೆ ಮೇಲ್ನೋಟಕ್ಕೇ ಸಾಕಷ್ಟು ಪುಷ್ಟಿ ನೀಡುವಂತಿದೆ. ಹತ್ಯೆಯಾಗಿರುವ ಹರ್ಷ, ಗೋರಕ್ಷಣೆ ಮತ್ತು ಹಿಂದುತ್ವದ ಪ್ರತಿಪಾದನೆಯ ಕಟ್ಟಾ ಕಾರ್ಯಕರ್ತನಾಗಿದ್ದುದನ್ನು ಸಹಿಸದೆ ಹತ್ಯೆ ನಡೆಸಲಾಗಿದೆ ಎಂದು ತನಿಖಾಧಿಕಾರಿಗಳು ವಿವರಿಸಿದ್ದಾರೆ. ಹತ್ಯೆಗೂ ಮುನ್ನ ಜಾಫರ್ ತನ್ನ ಐ–20 ಕಾರನ್ನು ಉಳಿದ ಆರೋಪಿಗಳಿಗೆ ಸಂಚು ರೂಪಿಸಲು ಮಂಡಗದ್ದೆಗೆ ಕಳುಹಿಸಿಕೊಟ್ಟಿರುವ ಬಗ್ಗೆ ಪುರಾವೆ ಕಂಡು ಬರುತ್ತಿದೆ’ ಎಂದು ಆದೇಶದಲ್ಲಿ ವಿವರಿಸಿದ್ದಾರೆ.

‘ಬಸವಣ್ಣ ಬಗ್ಗೆ ಪಠ್ಯದಲ್ಲಿ ತಪ್ಪು ಮಾಹಿತಿ’

ಪ್ರಜಾವಾಣಿ ವಾರ್ತೆ

ಭಾಲ್ಕಿ: ‘9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಲಿಂಗಾಯತ ಧರ್ಮಗುರು ಬಸವಣ್ಣನವರ ಕುರಿತ ಪಾಠದಲ್ಲಿ ಈ ವರ್ಷ ಕೆಲವಷ್ಟು ಬದಲಾವಣೆ ಮಾಡಿ ಪ್ರಕಟಿಸಿದ್ದು ಸರಿಯಲ್ಲ’ ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿಗೆ ಪತ್ರ ಬರೆದಿರುವ ಅವರು, ‘ಪಠ್ಯಪುಸ್ತಕದಲ್ಲಿ ಉಪನಯನದ ಬಳಿಕ ಬಸವಣ್ಣನವರು ಕೂಡಲಸಂಗಮಕ್ಕೆ ನಡೆದರು ಎಂದು ಬರೆದಿದ್ದು ತಪ್ಪು. ಬಸವಣ್ಣನವರು ತಮ್ಮ ಸಹೋದರಿ ಅಕ್ಕನಾಗಾಯಿಗೆ ಇಲ್ಲದ ಉಪನಯನ ತಮಗೇಕೆ ಎಂದು ಧಿಕ್ಕರಿಸಿ ಕೂಡಲಸಂಗಮಕ್ಕೆ ಹೋಗಿದ್ದರು. ಶೈವಗುರುಗಳ ಸಾನ್ನಿಧ್ಯದಲ್ಲಿ ಲಿಂಗ ದೀಕ್ಷೆ ಪಡೆದರು ಎಂದು ಬರೆದಿರುವುದು ತಪ್ಪು. ಶೈವಗುರುಗಳು ಗುಡಿ-ಗುಂಡಾರಗಳಲ್ಲಿರುವ ಸ್ಥಾವರ ಲಿಂಗಾರಾಧಕರು. ಅವರು ಹೇಗೆ ಇಷ್ಟಲಿಂಗ ದೀಕ್ಷೆ ಮಾಡಬಲ್ಲರು’ ಎಂದು ಅವರು ಪ್ರಶ್ನಿಸಿದ್ದಾರೆ.

‘ಪರಿಷ್ಕೃತ ಪಠ್ಯದಲ್ಲಿ ಆಗಿರುವ ಎಲ್ಲ ದೋಷಗಳನ್ನು ನಿವಾರಿಸಿ ಪಠ್ಯಪುಸ್ತಕ ಮುದ್ರಿಸಬೇಕು. ಬಹುಸಂಖ್ಯಾತ ಲಿಂಗಾಯತರು, ಲಿಂಗಾಯತ ಮಠಾಧಿಪತಿಗಳು ಬೃಹತ್ ಪ್ರಮಾಣದ ಪ್ರತಿಭಟನೆ ನಡೆಸುವ ಮೊದಲು ಈ ತಪ್ಪು ಸರಿಪಡಿಸಿ ಪಠ್ಯ ಪುಸ್ತಕಗಳನ್ನು ಪ್ರಕಟಿಸಬೇಕು’ ಎಂದರು.

> ಬಸವಣ್ಣನ ಕುರಿತು ತಪ್ಪುಮಾಹಿತಿ ಹೊಂದಿದ 9ನೇ ತರಗತಿ ಸಮಾಜ ವಿಜ್ಞಾನದ ಪಠ್ಯವನ್ನು ಕೂಡಲೇ ಹಿಂಪಡೆಯಬೇಕು. ತಪ್ಪಿದಲ್ಲಿ ಹೋರಾಟ ಮಾಡಬೇಕಾಗುತ್ತದೆ
> **ಮಾತೆ ಗಂಗಾದೇವಿ,** ಬಸವ ಧರ್ಮ ಪೀಠಾಧ್ಯಕ್ಷೆ

> ಪಠ್ಯ ಕೈಬಿಡುವಂತೆ ಪತ್ರ ಬರೆಯುತ್ತಿರುವವರು, ಅದರ ಹೆಸರಿನಲ್ಲಿ ಪ್ರಚಾರ ಪಡೆಯುತ್ತಿರುವವರು ವಿಚಾರಹೀನರು. ವಿವಾದದಿಂದ ಪ್ರಚಾರ ಪಡೆಯುತ್ತಿದ್ದಾರೆ
> **ಪ್ರತಾಪ ಸಿಂಹ,** ಸಂಸದ

ಪಿಎಸ್‌ಐ ಅಕ್ರಮ: ಮತ್ತೆ ಮೂವರ ಬಂಧನ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಬುಧವಾರ ಪ್ರಮುಖ ಆರೋಪಿ ಆರ್‌.ಡಿ. ಪಾಟೀಲ ಸಹಚರರಾದ ಮೂವರನ್ನು ಬಂಧಿಸಿದ್ದಾರೆ.

‘ಆರ್‌.ಡಿ. ಪಾಟೀಲ ಸೋದರಳಿಯ ಆಳಂದ ತಾಲ್ಲೂಕಿನ ಜಾವಳಿ (ಡಿ) ಗ್ರಾಮದ ಪ್ರಕಾಶ ಬಸವರಾಜ ಉಡಗಿ, ಅಫಜಲಪುರ ತಾಲ್ಲೂಕು ಮಣೂರ ಗ್ರಾಮದ ಅಸ್ಲಂ ಸೈಫುನ್ ಮುಲ್ಕ್ ಮುಜಾವರ ಮತ್ತು ಕರಜಗಿಯ ಮುನಾಫ್ ಜಮಾದಾರ ಬಂಧಿತರು. ಮೂವರು ಪಿಎಸ್‌ಐ ಸ್ಪರ್ಧಾತ್ಮಕ ಪರೀಕ್ಷೆ ವೇಳೆ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿ, ಅಭ್ಯರ್ಥಿಗಳಿಗೆ ಉತ್ತರ ತಲುಪಿಸುತ್ತಿದ್ದರು’ ಎಂದು ಗೊತ್ತಾಗಿದೆ.



ಅಸ್ಲಂ



ಪ್ರಕಾಶ ಉಡಗಿ



ಮುನಾಫ್

ಅಸ್ಲಂ ಮುಜಾವರ ವಾಟ್ಸ್‌ಆ್ಯಪ್ ನಲ್ಲಿ ಬೆದರಿಕೆ ಹಾಕಿರುವ ಬಗ್ಗೆ ಧಾರವಾಡದ ಸಾಮಾಜಿಕ ಹೋರಾಟಗಾರ ರವಿಶಂಕರ್ ಅಲ್ಲಿನ ವಿದ್ಯಾಗಿರಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಸದಾನಂದ ಗೌಡ ಟೀಕೆ • ಟೂಲ್ ಕಿಟ್ ರಾಜಕಾರಣಕ್ಕೆ ನಮ್ಮ ಹತ್ತಿರ ಔಷಧಿ ಇಲ್ಲ: ಸಿ.ಟಿ ರವಿ

ಆರ್‌ಎಸ್‌ಎಸ್ ಕಂಡರೆ ಸಿದ್ದರಾಮಯ್ಯಗೆ ಭಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಆರ್‌ಎಸ್‌ಎಸ್ ಭಯ ಕಾಡುತ್ತಿದೆ. ಹೀಗಾಗಿ ಪದೇ ಪದೇ ಅನಗತ್ಯ ಆರೋಪಗಳನ್ನು ಮಾಡುತ್ತಿರುತ್ತಾರೆ’ ಎಂದು ಸಂಸದ ಡಿ.ವಿ. ಸದಾನಂದಗೌಡ ಟೀಕಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು,‘ಕಾಂಗ್ರೆಸ್ ಅಧಃಪತನದಲ್ಲಿರುವುದರಿಂದ ಸಿದ್ದರಾಮಯ್ಯ ಕೆಲಸಕ್ಕೆ ಬಾರದ ಟ್ವೀಟ್‌ಗಳಲ್ಲಿ ಕಾಲ ಕಳೆಯುತ್ತಿದ್ದಾರೆ. ಯೋಗ್ಯವಲ್ಲದ ವಿಷಯಗಳನ್ನು ಪ್ರಸ್ತಾಪಿಸುತ್ತಿರುವುದರಿಂದ ನಾವ್ಯಾರೂ ಪ್ರತಿಕ್ರಿಯೆ ಕೊಡುತ್ತಿಲ್ಲ’ ಎಂದು ತಿರುಗೇಟು ನೀಡಿದರು.

‘ಸಿದ್ದರಾಮಯ್ಯ- ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಬ್ಬರ ಜಗಳ ಬಿಡಿಸಲು ಕಾಂಗ್ರೆಸ್ ಹೈಕಮಾಂಡ್ ಪದೇ ಪದೇ ಕರೆಸಿಕೊಳ್ಳುತ್ತಿದೆ. ಅಷ್ಟರ ಮಟ್ಟಿಗೆ ಕಾಂಗ್ರೆಸ್ ಸಮಸ್ಯೆಗಳಲ್ಲಿ ಮುಳುಗಿದೆ’ ಎಂದು ವ್ಯಂಗ್ಯವಾಡಿದರು.

(ಹಾಸನ ವರದಿ): ‘ಆರ್‌ಎಸ್‌ಎಸ್ ಏನು ಎಂಬುದು ದೇಶಭಕ್ತಿಯ ಮೂಲಕ ಸಾಬೀತಾಗಿದೆ. ಸಿದ್ದರಾಮಯ್ಯ ಅವರ ಸರ್ಟಿಫಿಕೇಟ್ ಬೇಕಿಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಮಗೂ ಆರ್‌ಎಸ್‌ಎಸ್‌ಗೂ, ತಾಯಿ–ಮಕ್ಕಳ ಸಂಬಂಧವಿದೆ. ಟಿಪ್ಪು ದ್ರೋಹಿ ಎಂದು ಹೇಳಿದರೆ ಏಕೆ ಉರಿದುಕೊಳ್ಳುತ್ತೀರಿ? ನಿಮಗೂ ಮೊಘಲರಿಗೂ ಏನು ಸಂಬಂಧ ಎಂಬ ಪ್ರಶ್ನೆಗೆ ಸಿದ್ದರಾಮಯ್ಯ ಅವರಿಂದ ಉತ್ತರದ ನಿರೀಕ್ಷೆಯಲ್ಲಿದ್ದೇನೆ’ ಎಂದರು.

ಪಠ್ಯಪುಸ್ತಕ ಪರಿಷ್ಕರಣೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಲೇಖಕರ ಬಗ್ಗೆ ಪ್ರತಿಕ್ರಿಯಿಸಿದ ಅವರು ‘ಟೂಲ್ ಕಿಟ್ ರಾಜಕಾರಣಕ್ಕೆ ನಮ್ಮ ಹತ್ತಿರ ಔಷಧಿ ಇಲ್ಲ. ನಿಜವಾದ ಹೊಟ್ಟೆನೋವಿಗೆ ಔಷಧಿಯಿದೆ. ಹೊಟ್ಟೆಕಿಚ್ಚಿಗೆ ಹೇಗೆ ಔಷಧಿ ಕೊಡಲು ಸಾಧ್ಯ. ನಮ್ಮವರ ಬಗ್ಗೆ ಅಭಿಮಾನ ಪಡುವ ಸಂಗತಿಗಳನ್ನು ಅವರು ಹೇಳಿಕೊಡಲಿಲ್ಲ. ಅವರು ಮಾಡಿದ್ದೆಲ್ಲ ಸರಿಯೇ? ಈಗ ಆ ತಪ್ಪುಗಳನ್ನು ಸರಿಪಡಿಸುವಂತಹ, ಅಭಿಮಾನ ಮೂಡಿಸುವಂತಹ ಕೆಲಸ ಪಠ್ಯಪುಸ್ತಕದಲ್ಲಿ ಆಗುತ್ತಿದೆ’ ಎಂದರು.

‘ರಾಜ್ಯಸಭೆ ಚುನಾವಣೆಯಲ್ಲಿ ಇಬ್ಬರು ಅಭ್ಯರ್ಥಿಗಳ ಗೆಲುವಿಗೆ ಬೇಕಾದ ಮತಗಳ ನಂತರವೂ 32 ಮತಗಳು ಉಳಿಯಲಿವೆ. ಅವುಗಳಿಂದ ನಾವು ಮೂರನೇ ಅಭ್ಯರ್ಥಿಯನ್ನೂ ಗೆಲ್ಲಿಸಿಕೊಳ್ಳಲಿದ್ದೇವೆ’ ಎಂದರು.

> ಕಾಂಗ್ರೆಸ್ ಅನ್ನು ಸಮರ್ಥಿಸಿಕೊಳ್ಳುತ್ತಿದ್ದ ವಕ್ತಾರ ಬ್ರಿಜೇಶ್ ಕಾಳಪ್ಪ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವುದರಿಂದ ಪಕ್ಷದ ಸ್ಥಿತಿ ಏನಾಗಿದೆ ಎನ್ನುವುದು ಗೊತ್ತಾಗುತ್ತದೆ
> **ಡಿ.ವಿ.ಸದಾನಂದಗೌಡ,** ಸಂಸದ

‘ಯಡಿಯೂರಪ್ಪ ಕೋಮುವಾದಿಯಾಗಿರಲಿಲ್ಲ’

ಮೈಸೂರು: ‘ಬಿ.ಎಸ್.ಯಡಿಯೂರಪ್ಪ ಕೋಮುವಾದಿಯಾಗಿರಲಿಲ್ಲ. ಆದರೆ, ಬಸವರಾಜ ಬೊಮ್ಮಾಯಿ ಸರ್ಕಾರ ಬಂದ ಮೇಲೆ ಕೋಮುಶಕ್ತಿಗಳಿಗೆ ರೆಕ್ಕೆಪುಕ್ಕ ಬಂದಿವೆ. ಕೋಮು ದ್ವೇಷದಿಂದ ರಾಜ್ಯ ಹೊತ್ತಿ ಉರಿಯುತ್ತಿರುವಾಗ ವಿದೇಶಿ ಕಂಪನಿಗಳು ಬಂಡವಾಳ ಹೂಡಲು ಬರುತ್ತವೆಯೇ’ ಎಂದು ಎಐಟಿಯುಸಿ ರಾಜ್ಯ ಸಮಿತಿ ಅಧ್ಯಕ್ಷ ಎಚ್.ವಿ.ಅನಂತ ಸುಬ್ಬರಾವ್ ಪ್ರಶ್ನಿಸಿದರು.

ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಸವರಾಜ ಬೊಮ್ಮಾಯಿ ಪ್ರಗತಿಪರ ಮುಖ್ಯಮಂತ್ರಿಯಾಗುತ್ತಾರೆಂದು ಭಾವಿಸಿದ್ದೆವು. ಆದರೆ, ಅವರು ನಾಗಪುರದ ಅಜೆಂಡಾವನ್ನು ಜಾರಿಗೊಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ’ ಎಂದು ಆರೋಪಿಸಿದರು.

‘ಸಾರಿಗೆ ನೌಕರರ ಮುಷ್ಕರವನ್ನು ಹತ್ತಿಕ್ಕಲು ₹ 35 ಕೋಟಿ ಪಡೆದ ಆರೋಪಕ್ಕೆ ಗುರಿಯಾಗಿರುವ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಬಂಧಿಸಬೇಕು. ರಾಕೇಶ್ ಟಿಕಾಯತ್ ಮೇಲಿನ ಹಲ್ಲೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು’ ಎಂದು ಆಗ್ರಹಿಸಿದರು.

‘ಸೋಲುವ ಆತಂಕವಿದ್ದರೂ ಟಿಕೆಟ್’

ಶಿವಮೊಗ್ಗ: ‘ಸೋಲುತ್ತಾರೆ ಎಂದು ಗೊತ್ತಿದ್ದರೂ ರಾಜ್ಯಸಭೆ ಚುನಾವಣೆಯಲ್ಲಿ ಎರಡನೇ ಅಭ್ಯರ್ಥಿಯಾಗಿ ಮುಸ್ಲಿಮರನ್ನು ಕಣಕ್ಕಿಳಿಸುವ ಮೂಲಕ ಆ ಸಮುದಾಯಕ್ಕೆ ಕಾಂಗ್ರೆಸ್ ದ್ರೋಹ ಮಾಡುತ್ತಿದೆ. ಇದು ಅಲ್ಪಸಂಖ್ಯಾತರಿಗೆ ಮಾಡಿದ ಅಪಮಾನ’ ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಟೀಕಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇದು ಕಾಂಗ್ರೆಸ್‌ನ ಕುತಂತ್ರ ರಾಜಕಾರಣದ ಭಾಗ. ಸದ್ಯಕ್ಕೆ ಕಾಂಗ್ರೆಸ್‌ನಿಂದ ರಾಜ್ಯಸಭೆಗೆ ಒಬ್ಬರನ್ನು ಮಾತ್ರ ಕಳಿಸಬಹುದು. ಆದರೆ, ಮುಸ್ಲಿಮರಿಗೆ ಆದ್ಯತೆ ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳಲು ಈ ರೀತಿ ಮಾಡಿದ್ದಾರೆ’ ಎಂದು ಕುಟುಕಿದರು.

‘ಒಂದು ಕಡೆ ಜೆಡಿಎಸ್ ಮುಖಂಡರು ಬಿಜೆಪಿಗೆ ಬೆಂಬಲ ನೀಡಬಹುದು. ಮತ್ತೊಂದು ಕಡೆ ಕಾಂಗ್ರೆಸ್ ಪಕ್ಷದ ಅತೃಪ್ತರು ಬಿಜೆಪಿಯ ಮೂರನೇ ಅಭ್ಯರ್ಥಿಗೆ ಮತ ಹಾಕಿದರೂ ಆಶ್ಚರ್ಯವಿಲ್ಲ. ಹಾಗಾಗಿ ಬಿಜೆಪಿ ಮೂರು ಸ್ಥಾನಗಳನ್ನು ಗೆಲ್ಲುತ್ತದೆ’ ಎಂದು ಹೇಳಿದರು.

ಗುರುವಾರ, ಜೂನ್ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 152 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಸಿವಿಲ್ ಸರ್ವೀಸಸ್ ಪರೀಕ್ಷೆಗಳಲ್ಲಿ ನಿರ್ಣಾಯಕ ಹಂತ, ಸಂದರ್ಶನ. ಇದರಲ್ಲಿ ಅಭ್ಯರ್ಥಿಯ ವ್ಯಕ್ತಿತ್ವವನ್ನು ಪರೀಕ್ಷಿಸಲಾಗುತ್ತದೆ. ಈ ಪ್ರಕ್ರಿಯೆಗೆ ಹೇಗಿರುತ್ತದೆ?



ಆಳ-ಅಗಲ
ಡೀಸೆಲ್ ಬಳಕೆ ಕುಸಿತದ ಹಲವು ಮುಖಗಳು

ತಯಾರಿಕಾ ವಲಯದ ಬೆಳವಣಿಗೆ ಸ್ಥಿರ 9
ಕೆಕೆ ಸಾವು: ಟಿಎಂಸಿ, ಬಿಜೆಪಿ ಆರೋಪ-ಪ್ರತ್ಯಾರೋಪ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,381	16,522	₹52,420 (ಬೆಂಗಳೂರು)	₹62,300 (ಬೆಂಗಳೂರು)	77.50

ನ್ಯಾಷನಲ್ ಹೆರಾಲ್ಡ್ ಪ್ರಕರಣ: ವಿಚಾರಣೆಗೆ ಹಾಜರಾಗಲು ಇ.ಡಿ ಸೂಚನೆ

ಸೋನಿಯಾ, ರಾಹುಲ್‌ಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆಯಾಗಿದೆ ಎಂದು ಆರೋಪಿಸಿರುವ ಜಾರಿ ನಿರ್ದೇಶನಾಲಯವು (ಇ.ಡಿ.), ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಸಮನ್ಸ್ ನೀಡಿದೆ. ಇದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್, ಇಂತಹ ಒತ್ತಡಗಳಿಗೆ ಹೆದರುವುದಿಲ್ಲ ಎಂದಿದೆ.


ಸೋನಿಯಾ


ರಾಹುಲ್

ಜೂನ್ 8ರಂದು ವಿಚಾರಣೆಗೆ ಹಾಜರಾಗುವಂತೆ ಸೋನಿಯಾ ಗಾಂಧಿ ಅವರಿಗೆ ನೀಡಿರುವ ನೋಟಿಸ್‌ನಲ್ಲಿ ಸೂಚಿಸಲಾಗಿದೆ. ರಾಹುಲ್ ಗಾಂಧಿ ಅವರಿಗೆ ಜೂನ್ 2ರಂದು ಹಾಜರಾಗುವಂತೆ ತಿಳಿಸಿದೆ. ಆದರೆ ತಾವು ಈಗ ದೆಹಲಿಯಲ್ಲಿ ಇಲ್ಲ ಎಂದು ತಿಳಿಸಿರುವ ರಾಹುಲ್, ಜೂನ್ 5ವರೆಗೆ ಕಾಲಾವಕಾಶ ನೀಡುವಂತೆ ಕೇಳಿದ್ದಾರೆ ಎಂದು ಪಕ್ಷದ ಮೂಲಗಳು ಬುಧವಾರ ತಿಳಿಸಿವೆ.

‘ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಹರಿಯಾಣದ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಸೇರಿದಂತೆ ಪ್ರಕರಣದ ಆರೋಪಿಗಳು ಪಂಚಕುಲಾದಲ್ಲಿ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ಗೆ (ಎಜೆಎಲ್) ಅಕ್ರಮವಾಗಿ ಹಂಚಿಕೆಯಾದ ನಿವೇಶನದ ಜಾಗವನ್ನು ಬಳಸಿಕೊಂಡಿದ್ದಾರೆ. ಮುಂಬೈನ ಬಾಂದ್ರಾದಲ್ಲಿ ಕಟ್ಟಡ ನಿರ್ಮಿಸುವ ಉದ್ದೇಶದಿಂದ ಈ ಜಾಗವನ್ನು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಡಮಾನವಾಗಿ ಇರಿಸಲಾಗಿದೆ. ಈ ಆಸ್ತಿಯ ಮೌಲ್ಯ ₹16.38 ಕೋಟಿಯಷ್ಟಿದೆ’ ಎಂದು ಇ.ಡಿ. ಆರೋಪಿಸಿದೆ. ಈ ಸಂಬಂಧ ಸೋನಿಯಾ ಮತ್ತು ರಾಹುಲ್ ಅವರ ಹೇಳಿಕೆಗಳನ್ನು ದಾಖಲಿಸಲು ಈ ಸಮನ್ಸ್ ನೀಡಲಾಗಿದೆ ಎಂದು ಇ.ಡಿ. ಮೂಲಗಳು ಹೇಳಿವೆ.

4ನೇ ಪುಟ ನೋಡಿ

ಎಂಬೆಸ್ಸಿ ಸಮೂಹದ ಮೇಲೆ ಐ.ಟಿ ದಾಳಿ

ಬೆಂಗಳೂರು: ರಿಯಲ್ ಎಸ್ಟೇಟ್ ಮತ್ತು ಆತಿಥ್ಯ ಕ್ಷೇತ್ರದ ದೈತ್ಯ ಉದ್ಯಮ ಸಂಸ್ಥೆ ಎಂಬೆಸ್ಸಿ ಸಮೂಹದ ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರ ಮನೆಗಳು, ಕಾರ್ಪೊರೇಟ್ ಕಚೇರಿಗಳು ಸೇರಿದಂತೆ 30ಕ್ಕೂ ಹೆಚ್ಚು ಸ್ಥಳಗಳ ಮೇಲೆ ಬುಧವಾರ ದಾಳಿ ಮಾಡಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ತೆರಿಗೆ ವಂಚನೆ ಆರೋಪಕ್ಕೆ ಸಂಬಂಧಿಸಿದಂತೆ ಶೋಧ ನಡೆಸಿದರು.

ಎಂಬೆಸ್ಸಿ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಜೀತು ವಿರ್ವಾನಿ, ನಿರ್ದೇಶಕ ನರಪತ್ ಸಿಂಗ್ ಚೋರಾರಿಯಾ, ಕಾರ್ಪೊರೇಟ್ ವ್ಯವಹಾರಗಳ ವಿಭಾಗದ ನಿರ್ದೇಶಕ ಅಶೋಕ್ ಬಜಾಜ್, ಸಮೂಹದ ಪ್ರಮುಖರ ನಿಕಟವರ್ತಿಯಾಗಿರುವ ದೌಲತ್ ಸಿಂಗ್ ಎಂಬುವವರ ಮನೆಗಳಲ್ಲಿ ಶೋಧ ನಡೆಸಲಾಗಿದೆ. ಜೀತು ವೀರ್ವಾನಿ ಮತ್ತು ನರಪತ್ ಸಿಂಗ್ ಅವರ ಬೆಂಗಳೂರಿನ ಮನೆಗಳಲ್ಲಿ ಇಡೀ ದಿನ ಶೋಧ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಎಂಬೆಸ್ಸಿ ಸಮೂಹದ ಎಂಟು ಕಾರ್ಪೊರೇಟ್ ಕಚೇರಿಗಳು, ಸಮೂಹದ ಜತೆ ಆರ್ಥಿಕ ವಹಿವಾಟು ನಡೆಸುತ್ತಿರುವ ವ್ಯಕ್ತಿಗಳಿಗೆ ಸಂಬಂಧಿಸಿದ ಸ್ಥಳಗಳಲ್ಲೂ ಶೋಧ ನಡೆಸಲಾಗಿದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಈ ಸಮೂಹ ನಡೆಸಿರುವ ವಹಿವಾಟು, ತೆರಿಗೆ ಪಾವತಿ, ಹೂಡಿಕೆ ಪ್ರಮಾಣ, ಹೂಡಿಕೆದಾರರ ವಿವರ, ತೆರಿಗೆ ವಂಚನೆ ಮತ್ತಿತರ ಅಂಶಗಳ ಕುರಿತು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಬೆಂಗಳೂರು, ದೆಹಲಿ, ಗುರುಗ್ರಾಮ, ಮುಂಬೈನ ಹಲವು ಸ್ಥಳಗಳಲ್ಲಿ ಬುಧವಾರ ನಸುಕಿನಿಂದಲೇ ಆರಂಭವಾದ ಶೋಧ, ತಡರಾತ್ರಿಯವರೆಗೂ ನಡೆಯಿತು. ಬಿಗಿ ಪೊಲೀಸ್ ಭದ್ರತೆಯಲ್ಲಿ ಕಾರ್ಯಾಚರಣೆ ನಡೆಸಿರುವ ಆದಾಯ ತೆರಿಗೆ ಇಲಾಖೆಯ ಕರ್ನಾಟಕ ಮತ್ತು ಗೋವಾ ವಿಭಾಗದ ಅಧಿಕಾರಿಗಳು, ಬೃಹತ್ ಪ್ರಮಾಣದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

‘ಯಾವುದೇ ತಪ್ಪೆಸಗಿಲ್ಲ’: ಐ.ಟಿ ದಾಳಿ ಕುರಿತು ಪ್ರತಿಕ್ರಿಯೆ ನೀಡಿರುವ ಎಂಬೆಸ್ಸಿ ಸಮೂಹ, ‘ಇದು ಆದಾಯ ತೆರಿಗೆ ಪಾವತಿಗೆ ಸಂಬಂಧಿಸಿದ ಸಾಮಾನ್ಯ ಪರಿಶೀಲನೆ. ಎಂಬೆಸ್ಸಿ ಸಮೂಹವು ಕಾರ್ಪೊರೇಟ್ ಆಡಳಿತ ಅತ್ಯುತ್ತಮ ಗುಣಮಟ್ಟವನ್ನು ಕಾಯ್ದುಕೊಂಡಿದ್ದು, ಕಾನೂನಿನ ವ್ಯಾಪ್ತಿಯಲ್ಲೇ ವ್ಯವಹಾರ ನಡೆಸುತ್ತಿದೆ. ಸಂಬಂಧಿಸಿದ ಎಲ್ಲ ಪ್ರಾಧಿಕಾರಗಳ ಸೂಚನೆಯನ್ನು ಸಂಪೂರ್ಣವಾಗಿ ಪಾಲಿಸುತ್ತಿದ್ದು, ತೆರಿಗೆ ಪಾವತಿಯಲ್ಲೂ ಲೋಪ ಆಗಿಲ್ಲ. ಸಮೂಹದ ವಹಿವಾಟು ಎಂದಿನಂತೆ ಮುಂದುವರಿಯಲಿದ್ದು, ಪಾಲುದಾರರು ಆತಂಕಪಡುವ ಅಗತ್ಯವಿಲ್ಲ’ ಎಂದು ತಿಳಿಸಿದರು.

ಕಾಂಗ್ರೆಸ್ ಮನವೊಲಿಕೆಗೆ ಜೆಡಿಎಸ್ ಕಸರತ್ತು

ರಾಜ್ಯಸಭೆ ಚುನಾವಣೆ: ನಾಲ್ಕನೇ ಸ್ಥಾನಕ್ಕೆ ಪೈಪೋಟಿ ತೀವ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆಯ ನಾಲ್ಕನೇ ಸ್ಥಾನಕ್ಕೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಮನ್ಸೂರ್ ಖಾನ್ ನಾಮಪತ್ರ ಹಿಂದಕ್ಕೆ ಪಡೆಯಲು ಮನವೊಲಿಸುವ ಸಂಬಂಧ ಜೆಡಿಎಸ್ ಗಂಭೀರ ಪ್ರಯತ್ನಗಳನ್ನು ಆರಂಭಿಸಿದೆ. ಒಂದು ವೇಳೆ ಮನ್ಸೂರ್ ಖಾನ್ ಕಣದಿಂದ ಹಿಂದಕ್ಕೆ ಸರಿದರೆ ಜೆಡಿಎಸ್ ಅಭ್ಯರ್ಥಿಗೆ ಹಾದಿ ಸುಗಮವಾಗಲಿದೆ.

ಜೆಡಿಎಸ್ ಅಭ್ಯರ್ಥಿಯನ್ನು ಬೆಂಬಲಿಸಬೇಕು ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರು ಸೋನಿಯಾ ಗಾಂಧಿ ಮತ್ತು ಕಾಂಗ್ರೆಸ್‌ನ ದೆಹಲಿ ನಾಯಕರಿಗೆ ಮನವಿ ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

ಇದಕ್ಕೆ ಪೂರಕವಾಗಿ ಜೆಡಿಎಸ್ ಪ್ರಮುಖರಾದ ಟಿ.ಎ.ಶರವಣ, ಬಿ.ಎಂ.ಫಾರೂಕ್ ಮತ್ತು ಇತರರು ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿ ಮಾಡಿ ಜೆಡಿಎಸ್ ಅಭ್ಯರ್ಥಿಯನ್ನು ಬೆಂಬಲಿಸಬೇಕು ಮನವಿ ಮಾಡಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಶರವಣ, ‘ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಆದೇಶದ ಮೇರೆಗೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದೇವೆ. ರಾಜ್ಯಸಭೆ ಚುನಾವಣೆಯಲ್ಲಿ ಜಾತ್ಯತೀತರು ಒಗ್ಗಟ್ಟಿನ ಹೋರಾಟ ನಡೆಸಬೇಕು. ಯಾವುದೇ ಕಾರಣಕ್ಕೂ ಬಿಜೆಪಿಗೆ ಗೆಲ್ಲಲು ಅವಕಾಶ ನೀಡಬಾರದು’ ಎಂದರು.

4ನೇ ಪುಟ ನೋಡಿ

‘ಚರ್ಚಿಸಿಯೇ ನಾಮಪತ್ರ ಸಲ್ಲಿಕೆ’

‘ನಾಮಪತ್ರ ಸಲ್ಲಿಸುವುದಕ್ಕೆ ಮೊದಲೇ ಕಾಂಗ್ರೆಸ್ ಪಕ್ಷದ ಮುಖಂಡರ ಜತೆ ಚರ್ಚೆ ನಡೆಸಿದ್ದೆವು. ಆದರೆ, ಕಾಂಗ್ರೆಸ್ ಎರಡನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವ ವಿಷಯ ಗೊತ್ತಿರಲಿಲ್ಲ’ ಎಂದು ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಸುದ್ದಿಗಾರರಿಗೆ ತಿಳಿಸಿದರು.

ದೇವೇಗೌಡರು ಈ ವಿಚಾರವಾಗಿ ಕಾಂಗ್ರೆಸ್ ನಾಯಕರ ಜತೆ ಮಾತುಕತೆ ನಡೆಸಿದ್ದರು. ಅಲ್ಲಿ ತೀರ್ಮಾನ ಆದ ಬಳಿಕವೇ ನಾನು ನಾಮಪತ್ರ ಸಲ್ಲಿಸಿದೆ. ಕಾಂಗ್ರೆಸ್‌ನವರು ಮೊದಲೇ ಎರಡನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುತ್ತೇವೆ ಎಂದು ಹೇಳಿದ್ದರೆ, ಈ ಸ್ಥಿತಿ ಬರುತ್ತಿರಲಿಲ್ಲ. ಆದರೆ ಕಾಂಗ್ರೆಸ್‌ನವರು ಸಣ್ಣ ಸುಳಿವು ಕೊಡದೇ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದಾರೆ ಎಂದರು.

ಕಾಂಗ್ರೆಸ್ ನಡೆ ಬಂಡೆಪ್ಪ ಟೀಕೆ: ಬಿಜೆಪಿಯ ಮೂರನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಡಬೇಕು ಎಂಬ ಉದ್ದೇಶದಿಂದಲೇ ಕಾಂಗ್ರೆಸ್ ಎರಡನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದೆ. ಎರಡನೇ ಅಭ್ಯರ್ಥಿ ಗೆಲ್ಲಲು ಸಾಧ್ಯವಿಲ್ಲದಿದ್ದರೂ ನಾಮಪತ್ರ ಸಲ್ಲಿಸಿದ್ದು, ಇದರಿಂದ ಬಿಜೆಪಿಯ ಮೂರನೇ ಅಭ್ಯರ್ಥಿಗೆ ಸಹಕಾರವಾಗಲಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ಬಂಡೆಪ್ಪ ಕಾಶೆಂಪೂರ ಟೀಕಿಸಿದರು.

ದೇವೇಗೌಡರು ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ ಮತ್ತು ರಾಹುಲ್ ಗಾಂಧಿ ಜತೆ ಚರ್ಚಿಸಿದ ಬಳಿಕವೇ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸಲು ತೀರ್ಮಾನ ತೆಗೆದುಕೊಳ್ಳಲಾಯಿತು. ಅವರ ಬಳಿ ಗೆಲ್ಲಲು ಸಂಖ್ಯೆ ಇಲ್ಲದಿದ್ದರೂ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿ ಗೊಂದಲ ಸೃಷ್ಟಿಸಿದ್ದಾರೆ ಎಂದರು.

ಒಳ ಪುಟ
‘ಸಂತ್ರಸ್ತರ ರಕ್ಷಣೆಗೆ ಕಾನೂನು ರೂಪಿಸಿ’ 4

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪರಿಸರಕ್ಕೆ ಹಾನಿ: ಅದಾನಿ ಕಂಪನಿಗೆ ₹50 ಕೋಟಿ ದಂಡ



ಬೆಂಗಳೂರು: ಉಡುಪಿ ಸಮೀಪದ ನಂದಿಕೂರಿನಲ್ಲಿರುವ ಅದಾನಿ ಒಡೆತನದ ಯುಪಿಸಿಎಲ್ ಶಾಖೋತ್ಪನ್ನ ಘಟಕವು ಪರಿಸರ ಮತ್ತು ಸುತ್ತಮುತ್ತಲಿನ ಗ್ರಾಮಗಳ ಜನರ ಆರೋಗ್ಯಕ್ಕೂ ಹಾನಿ ಉಂಟು ಮಾಡಿರುವುದರಿಂದ ₹50.02 ಕೋಟಿ ಪರಿಹಾರ ನೀಡಬೇಕು ಎಂದು ದಕ್ಷಿಣ ವಲಯದ ರಾಷ್ಟ್ರೀಯ ಹಸಿರು ಪೀಠ (ಎನ್‌ಜಿಟಿ) ಆದೇಶ ನೀಡಿದೆ.

ಅಲ್ಲದೆ, ಮಾಲಿನ್ಯ ಉಸ್ತುವಾರಿ ವ್ಯವಸ್ಥೆಯನ್ನು ತಿದ್ದಿರುವುದರಿಂದ ಕಂಪನಿ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು ಎಂದೂ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿ ಕೆ.ರಾಮಕೃಷ್ಣನ್ ಮತ್ತು ಇಬ್ಬರು ತಜ್ಞರನ್ನು ಒಳಗೊಂಡಿದ್ದ ದಕ್ಷಿಣ ವಲಯ ಹಸಿರು ಪೀಠವು ಜನಜಾಗೃತಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಮೇ 31 ರಂದು ವಿಲೇವಾರಿ ಮಾಡಿತು.

ಪರಿಹಾರದ ಶೇ 50 ರಷ್ಟು ಮೊತ್ತವನ್ನು ಪರಿಸರ ಮೂಲಸೌಕರ್ಯ ಸುಧಾರಣೆಗೆ ಬಳಸಬೇಕು. ಮುಖ್ಯವಾಗಿ ನೀರು ಪೂರೈಕೆ, ಚರಂಡಿ, ಎಸ್‌ಟಿಪಿ, ಘನತ್ಯಾಜ್ಯ ವಿಲೇವಾರಿ ನಿರ್ವಹಣೆ, ಆರೋಗ್ಯ ಸೌಲಭ್ಯ ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಸಬೇಕು. ಮಧ್ಯಂತರ ಆದೇಶದ ಅನ್ವಯ ಯುಪಿಸಿಎಲ್ ಈಗಾಗಲೇ ₹5 ಕೋಟಿ ಠೇವಣಿ ಇರಿಸಿದೆ. ಉಳಿದ ಮೊತ್ತವನ್ನು ಮುಂದಿನ ಮೂರು ತಿಂಗಳಲ್ಲಿ ಪಾವತಿಸಬೇಕು ಎಂದು ಹಸಿರು ಪೀಠ ಸೂಚಿಸಿದೆ. ಉಷ್ಣ ವಿದ್ಯುತ್ ಸ್ಥಾವರದ 10 ಕಿ.ಮೀ ವ್ಯಾಪ್ತಿಯ ಕೃಷಿ ಭೂಮಿಯಲ್ಲಿ ಯುಪಿಸಿಎಲ್ ಚಟುವಟಿಕೆಯಿಂದ ಆಗಿರುವ ಹಾನಿಯ ಬಗ್ಗೆ ವಿಸ್ತೃತ ಅಧ್ಯಯನ ನಡೆಸಲು ನ್ಯಾಯಪೀಠ ಜಂಟಿ ಸಮಿತಿಯನ್ನೂ ನೇಮಿಸಿದೆ. ಅದರಲ್ಲಿ ಜಿಲ್ಲಾಧಿಕಾರಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆ ನಿರ್ದೇಶಕರು ಹಾಗೂ ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ವಿಜ್ಞಾನಿಯೊಬ್ಬರು ಇರಲಿದ್ದಾರೆ.

3 B ಪುಟ ನೋಡಿ

ಬಸವಣ್ಣಗೆ ಅಗೌರವ: ಮ್ಯೂಸಿಯಂ ಸಮಿತಿಗೆ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈಗಿನ ಸರ್ಕಾರ ಬಸವಣ್ಣನವರ ಬಗ್ಗೆ ಗೌರವವಾಗಿ ನಡೆದುಕೊಳ್ಳುತ್ತಿಲ್ಲ. ಅವರ ವಿಚಾರಗಳಿಗೆ ಅವಮಾನವಾಗುವ ರೀತಿಯಲ್ಲಿ ಪಠ್ಯದಲ್ಲಿ ಸುಳ್ಳುಗಳನ್ನು ಬರೆಸಿರುವುದನ್ನು ಪ್ರತಿಭಟಿಸುತ್ತೇವೆ’ ಎಂದು ಹೇಳಿರುವ ಕೂಡಲ ಸಂಗಮದ ಬಸವ ಅಂತಾರಾಷ್ಟ್ರೀಯ ಮ್ಯೂಸಿಯಂನ ತಜ್ಞರ ಸಮಿತಿಯ ಏಳು ಸದಸ್ಯರು ರಾಜೀನಾಮೆ ಸಲ್ಲಿಸಿದ್ದಾರೆ.

ತಜ್ಞರ ಸಮಿತಿ ಸದಸ್ಯರಾಗಿದ್ದ ನಿವೃತ್ತ ಪ್ರಾಧ್ಯಾಪಕ ಟಿ.ಆರ್. ಚಂದ್ರಶೇಖರ್, ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಂ. ಜಾಮದಾರ, ಲೇಖಕರಾದ ಗುರುಪಾದ ಮರಿಗುದ್ದಿ, ಹನುಮಾಕ್ಷಿ ಗೋಗಿ, ಬಸವರಾಜ ಸಬರದ, ರಂಜಾನ್ ದರ್ಗಾ, ಶಂಕರ ದೇವನೂರು ಅವರು ಕಂದಾಯ ಇಲಾಖೆಗೆ ಈ ಕುರಿತು ಪತ್ರ ಬರೆದಿದ್ದಾರೆ.

‘2022ರಲ್ಲಿ ಪರಿಷ್ಕರಿಸಲಾಗಿರುವ ಒಂಬತ್ತನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಬಸವಣ್ಣನವರ ಪರಿಚಯ ಹಾಗೂ ಅವರ ವಿಚಾರಗಳಿಗೆ ಅವಮಾನವಾಗುವ ರೀತಿಯಲ್ಲಿ ಸುಳ್ಳುಗಳನ್ನು ತುಂಬಿ ಬರೆಯಲಾಗಿದೆ. ಇದನ್ನು ನಾವು ಪ್ರತಿಭಟಿಸುತ್ತೇವೆ. ಈ ಸರ್ಕಾರಕ್ಕೆ ಬಸವಣ್ಣನವರ ಬಗ್ಗೆ ಗೌರವ ಇಲ್ಲದಿರುವಾಗ ಸದರಿ ಸಮಿತಿಯಲ್ಲಿ ಮುಂದುವರಿಯುವುದಕ್ಕೆ ಅರ್ಥವಿಲ್ಲ’ ಎಂದೂ ಅವರೆಲ್ಲರೂ ಪ್ರತಿಪಾದಿಸಿದ್ದಾರೆ.

‘ಇದುವರೆಗೂ ಮ್ಯೂಸಿಯಂನ ಕೆಲಸ ಏನಾಗಿದೆ ಎಂಬುದರ ಬಗ್ಗೆ ತಜ್ಞರ ಸಮಿತಿಗೆ ವಿವರ ನೀಡಿಲ್ಲ. ಸಭೆ ನಡೆದಂತೆ ಕಾಣುವುದಿಲ್ಲ ಅಥವಾ ಸದಸ್ಯರನ್ನು ಕರೆದಂತಿಲ್ಲ. ಮ್ಯೂಸಿಯಂನ ಕೆಲಸ ಮುಗಿದಿದೆ ಎಂದು ಜೂನ್ 1ರ ಸಭೆಗೆ ಮೌಖಿಕವಾಗಿ ಆಹ್ವಾನ ನೀಡುವಾಗ ರಘು ಎಂಬುವರು ತಿಳಿಸಿದ್ದಾರೆ. ಯಾವ ಸಿದ್ಧತೆ ಮಾಡಿಕೊಂಡು ಸಭೆಗೆ ಬರಬೇಕು ಎಂಬುದರ ಮಾಹಿತಿಯೂ ಇಲ್ಲ. ಮ್ಯೂಸಿಯಂ ಕುರಿತಾದ ಯಾವ ತೀರ್ಮಾನದ ಬಗ್ಗೆಯೂ ಜವಾಬ್ದಾರಿ ಹೊತ್ತುಕೊಳ್ಳಲು ನಾವು ಸಿದ್ಧರಿಲ್ಲ. ಈ ಕಾರಣದಿಂದಲೂ ರಾಜೀನಾಮೆ ಕೊಡುತ್ತಿದ್ದೇವೆ’ ಎಂದು ಅವರೆಲ್ಲ ಹೇಳಿದ್ದಾರೆ.

ದೆಹಲಿಯಲ್ಲಿರುವ ಸ್ವಾಮಿ ನಾರಾಯಣ ಅಕ್ಷರಧಾಮ ಮಾದರಿಯಲ್ಲಿ ಕೂಡಲಸಂಗಮದಲ್ಲಿ ಬಸವ ಮ್ಯೂಸಿಯಂ, ಚಿತ್ರಕಲೆ, ಶಿಲ್ಪಕಲೆ, 3 ಡಿ ತಂತ್ರಜ್ಞಾನ, ಶರಣ ಗ್ರಾಮ ನಿರ್ಮಾಣದ ಸಲುವಾಗಿ ಸರ್ಕಾರ ತಜ್ಞರ ಸಮಿತಿಯನ್ನು 2020ರ ಡಿಸೆಂಬರ್‌ನಲ್ಲಿ ರಚಿಸಿದೆ.

ಕರಕುಶಲ ಅಭಿವೃದ್ಧಿ ನಿಗಮ: ಪರಸ್ಪರ ಆರೋಪ: ಮುಖ್ಯ ಕಾರ್ಯದರ್ಶಿಗೆ ದೂರು

ವ್ಯವಸ್ಥಾಪಕ ನಿರ್ದೇಶಕಿ–ಅಧ್ಯಕ್ಷರ ಪತ್ರ ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ ಮತ್ತು ವ್ಯವಸ್ಥಾಪಕ ನಿರ್ದೇಶಕಿ ಡಿ. ರೂಪಾ ನಡುವೆ ‘ಪತ್ರ ಸಮರ’ ಆರಂಭವಾಗಿದೆ. ಭ್ರಷ್ಟಾಚಾರ, ಅಧಿಕಾರ ದುರ್ಬಳಕೆಯ ಆರೋಪದಡಿ ಇಬ್ಬರೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದಾರೆ.

ಇಬ್ಬರ ಮಧ್ಯೆ ಹಲವು ದಿನಗಳಿಂದ ಶೀತಲ ಸಮರ ನಡೆಯುತ್ತಿತ್ತು. ಕಾರ್ಯನಿರ್ವಹಣೆಗೆ ಸಹಕಾರ ನೀಡದ ಆರೋಪದಡಿ ನಿಗಮದ ಅಧ್ಯಕ್ಷರು ವ್ಯವಸ್ಥಾಪಕ ನಿರ್ದೇಶಕರಿಗೆ 76 ನೋಟಿಸ್ ನೀಡಿದ್ದರು. ಯಾವುದಕ್ಕೂ ಅವರು ಉತ್ತರ ನೀಡಿರಲಿಲ್ಲ. ನಿಗಮದ ಕೇಂದ್ರ ಕಚೇರಿಯ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳ ರೆಕಾರ್ಡಿಂಗ್ ಇರುವ ಡಿವಿಆರ್‌ನಲ್ಲಿ ಮಾಹಿತಿ ತಿರುಚಿರುವ ಆರೋಪದ ಮೇಲೆ ರೂಪಾ ಅವರು ರಾಘವೇಂದ್ರ ಶೆಟ್ಟಿ ವಿರುದ್ಧ ಮುಖ್ಯ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದರು.

ಭ್ರಷ್ಟಾಚಾರದ ಆರೋಪ: ಮಂಗಳವಾರ (ಮೇ 31) ಮುಖ್ಯ ಕಾರ್ಯದರ್ಶಿಯವರಿಗೆ ಆರು ಪುಟಗಳ ಪತ್ರ ಬರೆದಿರುವ ರಾಘವೇಂದ್ರ ಶೆಟ್ಟಿ, ‘ರೂಪಾ ನಿಗಮದಲ್ಲಿ ₹ 6 ಕೋಟಿಗೂ ಹೆಚ್ಚು ಮೊತ್ತದ ಭ್ರಷ್ಟಾಚಾರ ನಡೆಸಿದ್ದಾರೆ’ ಎಂದು ಆರೋಪಿಸಿದ್ದರು. ನಿಗಮದ ಕಡತಗಳನ್ನು ನೀಡುವಂತೆ ಪತ್ರ ಬರೆದರೂ ಸ್ಪಂದಿಸುತ್ತಿಲ್ಲ ಎಂದು ದೂರಿದ್ದರು.

‘ಶೋ ರೂಂನಲ್ಲಿ ಕ್ಯಾಶಿಯರ್ ಹುದ್ದೆಯಲ್ಲಿದ್ದ ಶ್ರೀಧರ್ ಎಂಬ ನೌಕರನನ್ನು ಹಣಕಾಸು ವಿಭಾಗದ ಪ್ರಧಾನ ವ್ಯವಸ್ಥಾಪಕ ಹುದ್ದೆಗೆ ನೇಮಿಸಿಕೊಂಡು ಅವರ ಮೂಲಕ ಅವ್ಯವಹಾರ ನಡೆಸುತ್ತಿದ್ದಾರೆ. ನಿಗಮದ ಮೂರು ಕಾರು ಮತ್ತು ಒಂದು ದ್ವಿಚಕ್ರ ವಾಹನವನ್ನು ರೂಪಾ ಹಾಗೂ ಅವರ ಕುಟುಂಬದವರು ಬಳಸುತ್ತಿದ್ದಾರೆ. ವೈಯಕ್ತಿಕ ಕೆಲಸಕ್ಕೆ ಹೋದಾಗಲೂ ನಿಗಮದಿಂದ ಲಕ್ಷಾಂತರ ರೂಪಾಯಿ ವಿಮಾನ ಪ್ರಯಾಣ ವೆಚ್ಚ, ಹೋಟೆಲ್ ವೆಚ್ಚವನ್ನು ಭರಿಸಲಾಗಿದೆ. ಅವರ ಮನೆಗೆಲಸದ ಸಿಬ್ಬಂದಿಗೂ ನಿಗಮದಿಂದಲೇ ವೇತನ ನೀಡಲಾಗುತ್ತಿದೆ. ವ್ಯವಸ್ಥಾಪಕ ನಿರ್ದೇಶಕರ ಸ್ನೇಹಿತರಿಗೆ ನಿಗಮದ ಮಳಿಗೆಗಳಲ್ಲಿ ಶೇಕಡ 30ರಷ್ಟು ರಿಯಾಯ್ತಿ ನೀಡಲಾಗುತ್ತಿ. ಈ ಎಲ್ಲ ವಿಷಯಗಳ ಬಗ್ಗೆಯೂ ತನಿಖೆಗೆ ಆದೇಶಿಸಬೇಕು’ ಎಂದು ಆಗ್ರಹಿಸಿದ್ದರು.

‘ರೂಪಾ ವಾರದಲ್ಲಿ ಎರಡು ದಿನ ಮಾತ್ರ ಕಚೇರಿಗೆ ಬರುತ್ತಾರೆ. ಉಳಿದ ಸಮಯದಲ್ಲಿ ಮನೆಯಿಂದಲೇ ಕೆಲಸ ಮಾಡುತ್ತಾರೆ. ಇದಕ್ಕೆ ಸಂಬಂಧಿಸಿದ ಸಿಸಿಟಿವಿ ದೃಶ್ಯಾವಳಿಯ ದಾಖಲೆ ನನ್ನ ಬಳಿ ಇದೆ’ ಎಂದು ದೂರಿನಲ್ಲಿ ತಿಳಿಸಿದ್ದರು.

ಎಂ.ಡಿಯಿಂದ ಪ್ರತಿ ದೂರು: ರಾಘವೇಂದ್ರ ಶೆಟ್ಟಿ ವಿರುದ್ಧ ಬುಧವಾರ ಪ್ರತಿ ದೂರು ಸಲ್ಲಿಸಿರುವ ರೂಪಾ, ‘ನಿಗಮದ ಅಧ್ಯಕ್ಷರು ಅಧಿಕಾರ ಇಲ್ಲದಿದ್ದರೂದೈನಂದಿನಆಡಳಿತದಲ್ಲಿಹಸ್ತಕ್ಷೇಪ ನಡೆಸುತ್ತಿದ್ದಾರೆ. ₹ 25 ಕೋಟಿ ಅಕ್ರಮ ನಡೆಸಿಪ್ರಧಾನವ್ಯವಸ್ಥಾಪಕವಜಾಗೊಂಡಿರುವ ಕಿಶೋರ್ ಕುಮಾರ್ ಎಂಬುವವರನ್ನು ಮರಳಿ ಅದೇ ಹುದ್ದೆಗೆ ನೇಮಕ ಮಾಡಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕಾಗಿ ₹ 5 ಕೋಟಿ ಹಣದ ವ್ಯವಹಾರದ ಮಾತುಕತೆ ನಡೆದಿರುವ ಮಾಹಿತಿ ಇದೆ’ ಎಂದು ಆರೋಪಿಸಿದ್ದಾರೆ.

3 B ಪುಟ ನೋಡಿ



ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಿ. ರೂಪಾ ಅವರು ಭ್ರಷ್ಟಾಚಾರ ನಡೆಸುತ್ತಿರುವುದಕ್ಕೆ ನನ್ನ ಬಳಿ ದಾಖಲೆಗಳಿವೆ. ಈ ಕುರಿತು ನಾನು ದೂರು ನೀಡಿದ ಬಳಿಕ ಅವರು ಸುಳ್ಳು ದೂರು ನೀಡಿದ್ದಾರೆ
ಬೇಳೂರು ರಾಘವೇಂದ್ರ ಶೆಟ್ಟಿ



ನಿಗಮದ ಅಧ್ಯಕ್ಷ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡು ಹಣ ಮಾಡಲು ರಾಘವೇಂದ್ರ ಶೆಟ್ಟಿ ಯತ್ನಿಸುತ್ತಿದ್ದಾರೆ ಎಂದು ಮುಖ್ಯ ಕಾರ್ಯ ದರ್ಶಿಯವರಿಗೆ ದೂರು ನೀಡಿದ್ದೇನೆ
ಡಿ. ರೂಪಾ

26ನೇ ರಾಷ್ಟ್ರಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ

ಬೆಂಗಳೂರು: 26ನೇ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆಯನ್ನು ವಿಶ್ವವಿದ್ಯಾಲಯದ ಕಾನೂನು ಕಾಲೇಜು ಜೂನ್ 2ರಿಂದ 4ರವರೆಗೆ ಆಯೋಜಿಸಿದೆ. 20ಕ್ಕೂ ಹೆಚ್ಚು ತಂಡಗಳು ಭಾಗವಹಿಸಲಿವೆ. ಅಡ್ವೋಕೇಟ್ ಜನರಲ್ ಪ್ರಭುಲಿಂಗ.ಕೆ. ನಾವದಗಿ ಉದ್ಘಾಟಿಸಲಿದ್ದು, ಬೆಂಗಳೂರು ವಿವಿ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಡಾ.ಎಂ.ಕೊಟ್ರೇಶ್, ಡಾ.ಸುರೇಶ್. ವಿ.ನಾಡಗೌಡರು, ವಿವೇಕ ಸುಬ್ಬಾರೆಡ್ಡಿ ಭಾಗವಹಿಸಲಿದ್ದಾರೆ.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ
ಎಸ್.ಎಸ್.ಘಾಟಿ, ದೊಡ್ಡಬಳ್ಳಾಪುರ ತಾಲ್ಲೂಕು-561203, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂ: 080-29550091. ಇ-ಮೇಲ್- shrighatisubrahmanyatempleeo@gmail.com

ಸಂಖ್ಯೆ: ಎಸ್‌ಜಿಎಸ್/ಡಿವಿಎಸ್/ಸಿಆರ್46/2022-23 ದಿನಾಂಕ:1-06-2022

:ಪತ್ರಿಕಾ ಪ್ರಕಟಣೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅನ್ನದಾಸೋಹದಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಬೆಲ್ಲವನ್ನು ದಿನಾಂಕ:16-06-2022 ರಂದು ಗುರುವಾರ ಬೆಳಗ್ಗೆ 11.00 ಘಂಟೆಗೆ ದೇವಾಲಯದ ಕಲ್ಯಾಣ ಮಂಟಪದಲ್ಲಿ ಬಹಿರಂಗ ಹರಾಜು ಮೂಲಕ ವಿಲೆ ಮಾಡಲಾಗುವುದು. ಆಸಕ್ತಿಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ದೇವಾಲಯದ ಕಛೇರಿಯಲ್ಲಿ ಸಂಪರ್ಕಿಸುವುದು.

ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ
ಎಸ್.ಎಸ್. ಘಾಟಿ.

ಕಾಂಗ್ರೆಸ್‌ಗೆ ಬ್ರಿಜೇಶ್ ಕಾಳಪ್ಪ ರಾಜೀನಾಮೆ



ಬೆಂಗಳೂರು: ಕಾಂಗ್ರೆಸ್ ಪಕ್ಷದ ವಕ್ತಾರರಾಗಿದ್ದ ಸುಪ್ರೀಂಕೋರ್ಟ್ ವಕೀಲ ಬ್ರಿಜೇಶ್ ಕಾಳಪ್ಪ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಎಐಸಿಸಿ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ರಾಜೀನಾಮೆ ಪತ್ರ ಕಳುಹಿಸಿರುವ ಕಾಳಪ್ಪ, ವೈಯಕ್ತಿಕ ಕಾರಣಗಳಿಂದ ಪಕ್ಷ ತೊರೆಯುವುದಾಗಿ ತಿಳಿಸಿದ್ದಾರೆ.

ಬ್ರಿಜೇಶ್ ಕಾಳಪ್ಪ ಕಾಂಗ್ರೆಸ್ ವಕ್ತಾರ ಹಾಗೂ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಈ ಹಿಂದೆ ಕೊಡಗು -ಮೈಸೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ಬಯಸಿದ್ದರು. ಈಗ ವಿಧಾನ ಪರಿಷತ್ ಚುನಾವಣೆಯ ಟಿಕೆಟ್ ಆಕಾಂಕ್ಷಿ ಆಗಿದ್ದರು. ಪಕ್ಷದಲ್ಲಿ ಸೂಕ್ತ ಸ್ಥಾನಮಾನ ಸಿಗಲಿಲ್ಲ ಎಂಬ ಅಸಮಾಧಾನವೇ ರಾಜೀನಾಮೆಗೆ ಕಾರಣ ಆಗಿರಬಹುದು ಎನ್ನಲಾಗುತ್ತಿದೆ.

‘ನನಗೆ ಹಲವು ಅವಕಾಶಗಳನ್ನು ನೀಡಿದ ಪಕ್ಷಕ್ಕೆ ಧನ್ಯವಾದ ಸಲ್ಲಿಸುತ್ತೇನೆ. 2013ರಿಂದ ರಾಷ್ಟ್ರೀಯ, ವಿವಿಧ ಮಾಧ್ಯಮಗಳಲ್ಲಿ ಕಾಂಗ್ರೆಸ್ ವಕ್ತಾರನಾಗಿ ಪಕ್ಷವನ್ನು ಸಮರ್ಥಿಸಿಕೊಂಡಿದ್ದೇನೆ. ಸುಮಾರು 6,497 ಮಾಧ್ಯಮ ಚರ್ಚೆಗಳಲ್ಲಿ ಭಾಗಿ ಯಾಗಿದ್ದೇನೆ. ಈ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ. ಆದರೆ, ಇತ್ತೀಚಿನ ದಿನಗಳಲ್ಲಿ ನಾನು ಈ ವಿಚಾರದಲ್ಲಿ ನಿರಾಸಕ್ತನಾಗಿದ್ದೇನೆ. ಹೀಗಾಗಿ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತೇನೆ ಎಂದಿದ್ದಾರೆ.

ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಅವರಿಂದ ಕೊಡುಗೆ

ಪೌಷ್ಟಿಕಾಂಶ ಕಿಟ್, ಸಮವಸ್ತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಅವರು ಗರ್ಭಿಣಿಯರಿಗೆ ಬಾಗಿನ, ಮಕ್ಕಳಿಗೆ ಪೌಷ್ಟಿಕ ಆಹಾರದ ಕಿಟ್, ಮೂರು ಸಾವಿರ ಮಹಿಳೆಯರಿಗೆ ಸೀರೆ, ಅಂಗವಿಕಲರಿಗೆ ಬಟ್ಟೆ, 65 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಆಟೊ ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ಸಮವಸ್ತ್ರ ಹಾಗೂ ದಿನಸಿ ಕಿಟ್‌ಗಳನ್ನು ವಿತರಿಸಿದರು.

‘ಸ್ಥಳೀಯರ ಬಹುದಿನದ ಬೇಡಿಕೆಯಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಕ್ಕೆ ಚಾಲನೆ ನೀಡಲಾಗುವುದು. ಉತ್ತರಹಳ್ಳಿ ವೃತ್ತದಲ್ಲಿ ವಯೋವೃದ್ಧರಿಗಾಗಿ ಮಧ್ಯಾಹ್ನ, ರಾತ್ರಿ ಉಚಿತ ಬಿಸಿಯೂಟ ನೀಡುವ ಕಟ್ಟಡವನ್ನೂ ಪ್ರಾರಂಭಿಸಲಾಗುವುದು. ನಿರಂತರವಾಗಿ ಭಾಗ್ಯಲಕ್ಷ್ಮಿ ಬಾಂಡ್ ಜೊತೆಗೆ ಪೌಷ್ಟಿಕಾಂಶದ ಕಿಟ್‌ಗಳನ್ನು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು’ ಎಂದು ಭರವಸೆ ನೀಡಿದರು.



ಎಸ್ಸೆಸ್ಸೆಲ್ಸಿಯಲ್ಲಿ ಅತೀ ಹೆಚ್ಚು ಅಂಕಪಡೆದು ಉತ್ತೀರ್ಣಗೊಂಡ 65 ವಿದ್ಯಾರ್ಥಿಗಳಿಗೆ ಶಾಸಕ ಎಂ.ಕೃಷ್ಣಪ್ಪ ಅವರು ಪ್ರತಿಭಾ ಪುರಸ್ಕಾರ ವಿತರಿಸಿದರು. ಗಾಯತ್ರಿ ಎಂ. ಕೃಷ್ಣಪ್ಪ, ಹನುಮಂತಯ್ಯ, ರಮೇಶ್ ರಾಜು ಹಾಗೂ ವಿಜಯ್ ಕುಮಾರ್ ಇದ್ದಾರೆ.

ಬಿಬಿಎಂಪಿ ಮಾಜಿ ಸದಸ್ಯ ಹನುಮಂತಯ್ಯ, ‘ಉತ್ತರಹಳ್ಳಿ ವ್ಯಾಪ್ತಿಯಲ್ಲಿ ಕಾವೇರಿ ಕುಡಿಯುವ ನೀರು, ರಸ್ತೆ ಅಭಿವೃದ್ಧಿ, ಸಮರ್ಪಕ ಒಳಚರಂಡಿ ವ್ಯವಸ್ಥೆ, ಕೆರೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಆದ್ಯತೆ ನೀಡಲಾಗಿದೆ. ಜನಸಾಮಾನ್ಯರ ಕುಂದು ಕೊರತೆಗಳನ್ನು ಆಲಿಸಿ, ಪರಿಹಾರ ಒದಗಿಸುವ ಮೂಲಕ ಎಂ. ಕೃಷ್ಣಪ್ಪ ಅವರು ಕ್ಷೇತ್ರದ ಜನರ ಕಷ್ಟಸುಖಗಳಿಗೆ ಧ್ವನಿಯಾಗಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪಾಲಿಕೆ ಮಾಜಿ ಸದಸ್ಯರಾದ ಎಂ.ರಮೇಶ್ ರಾಜು, ಲಲಿತಾ ಟಿ. ನಾರಾಯಣ್, ಮುಖಂಡರಾದ ವಿಜಯ್ ಕುಮಾರ್, ಆರ್. ಬಾಲಾಜಿ ಸಿಂಗ್, ಡಿ.ಪುರುಷೋತ್ತಮ್, ಪಾಲಿಕೆ ಮಾಜಿ ಸದಸ್ಯರಾದ ಶಶಿರೇಖಾ ಜಯರಾಮ್, ಸೋಮಶೇಖರ್ ಇದ್ದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 05/2022 ದಿನಾಂಕ : 27-05-2022

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು, ಕೆಳಗಿನ ಐಟಂಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮೂಲಕ ಮಾತ್ರ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ಮುಕ್ತಾಯದ ಸಮಯ : 14.00 ಗಂಟೆಗಳು

ಕ್ರ.	ಟೆಂಡರ್ ಸಂಖ್ಯೆ	ಸಂಕ್ಷಿಪ್ತ ವಿವರಣೆ	ಪ್ರಮಾಣ	ಟೆಂಡರ್ ಮುಕ್ತಾಯದ ದಿನಾಂಕ
1	38221183 ಎ	ಬ್ರೇಕ್ ಪೈಪ್‌ಗಾಗಿ ಏರ್ ಬ್ರೇಕ್ ಹೋಸ್ ಕಪ್ಲಿಂಗ್ ಕಂಪ್ಲೀಟ್	4761 ಸಂಖ್ಯೆಗಳು	07-06-2022
2	38221398	ಸ್ಲ್ಯಾಕ್ ಅಡ್ಜಸ್ಟರ್ ಕಂಪ್ಲೀಟ್ ಟೈಪ್ ಐಆರ್‌ಎಸ್‌ಎ 600	275 ಸಂಖ್ಯೆಗಳು	07-06-2022
3	33221076	ಎಫ್‌ಟಿಐಆರ್‌ಆರ್‌ಐಎಲ್ ಗೆ ಸ್ಪೀಡ್ ಸೆನ್ಸಾರ್	290 ಸಂಖ್ಯೆಗಳು	20-06-2022
4	45.22.1288 ಡಿ	ವಿಆರ್‌ಎಲ್‌ಎ ಬ್ಯಾಟರಿ 110 ವಿ 70 ಎಹೆಚ್ ನ ಸೆಟ್	42 ಸೆಟ್‌ಗಳು	13-06-2022
5	30221458	ಸೈಡ್ ಬಫರ್ ಫಿಕ್ಸಿಂಗ್ ಬೋಲ್ಟ್ ನಟ್ ಮತ್ತು ವಾಷರ್	21470 ಸಂಖ್ಯೆಗಳು	15-06-2022
6	30221100 ಎ	ಆಕ್ಸೆಲ್ ಬಾಕ್ಸ್ ಹೌಸಿಂಗ್ ಫಿನಿಶ್ಡ್	1800 ಸಂಖ್ಯೆಗಳು	20-06-2022
7	30221177	ಡಬಲ್ ಆಕ್ಟಿಂಗ್ ಹೈಡ್ರಾಲಿಕ್ ಶಾಕ್ ಅಬ್ಸಾರ್ಬರ್	817 ಸಂಖ್ಯೆಗಳು	17-06-2022
8	38221026	1500x850x5 ಎಂಎಂ ಅಳತೆಯ ಪ್ಯಾನೆಲ್ ಪ್ಯಾಚ್ ಪ್ಲೇಟ್	1055 ಸಂಖ್ಯೆಗಳು	22-06-2022
9	38221030	320x560x5 ಎಂಎಂ ಅಳತೆಯ ಪ್ಯಾನೆಲ್ ಪ್ಯಾಚ್ ಪ್ಲೇಟ್	5208 ಸಂಖ್ಯೆಗಳು	22-06-2022
10	33225008	ಮೂರನೇ ವರ್ಷದ ನಿರ್ವಹಣೆಗಾಗಿ ಮಸ್ಟ್ ಚೇಂಜ್ ಕಿಟ್	69 ಸೆಟ್‌ಗಳು	17-06-2022
11	33225009	ಮೂರನೇ ವರ್ಷದ ನಿರ್ವಹಣೆಗಾಗಿ ಮಸ್ಟ್ ಚೇಂಜ್ ಕಿಟ್	69 ಸೆಟ್‌ಗಳು	17-06-2022
12	77221024	ಸಾಮಾನ್ಯ ಉದ್ದೇಶಕ್ಕಾಗಿ ಪೇಯಿಂಟ್ ಅಲ್ಯುಮಿನಿಯಮ್ ಬ್ರಷಿಂಗ್	54150 ಲೀಟರ್	27-06-2022
13	30221329 ಎ	ಫುಟ್ ಸ್ಟೆಪ್ ಅರೇಂಜ್‌ಮೆಂಟ್ ಅಸೆಂಬ್ಲಿ ಕಂಪ್ಲೀಟ್	2820 ಸಂಖ್ಯೆಗಳು	27-06-2022

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/116/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23 ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways | sw_rly | SWRRLY | southwesternrailway | SWRRLY

ನಗರದಲ್ಲಿ ಇಂದು

ಬೆಂಗಳೂರು ಪುನಶ್ಚೇತನ ಯಾತ್ರೆಗೆ ಚಾಲನೆ: ಆಯೋಜಕರು: ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ. ಸ್ಥಳ: ಗವಿಗಂಗಾಧರೇಶ್ವರ ಸ್ವಾಮಿ ದೇವಸ್ಥಾನ ಬಸವನಗುಡಿ ಬೆಳಿಗ್ಗೆ 9:30

ಉಡುಪ ಸಂಗೀತೋತ್ಸವ: ಚೆಂಡೆ- ವಿದ್ವಾನ್ ಮಟ್ಟನೂರ್ ಶಂಕರನ್ ಕುಟ್ಟಿ ಮಾರರ್, ತಬಲ-ಪಂಡಿತ್ ಯೋಗೀಶ್ ಸಂಸಿ, ಖಂಜೀರ-ವಿದ್ವಾನ್ ಬೆಂಗಳೂರು ಅಮೃತ್, 2ನೇ ಕಛೇರಿ: ಸರೋದ್- ಉಸ್ತಾದ್ ಅಮ್ಜದ್ ಅಲಿ ಖಾನ್, ತಬಲ್-ಪಂಡಿತ್ ಕುಮಾರ್ ಬೋಸ್, ಆಯೋಜಕರು: ಉಡುಪ ಮ್ಯೂಸಿಕ್ ಫೆಸ್ಟಿವಲ್, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ರಾತ್ರಿ 7

ಡಾ.ಎಚ್. ನರಸಿಂಹಯ್ಯ ನೆನಪಿನ ಸಾಂಸ್ಕೃತಿಕ ಉತ್ಸವ: ಲಲಿತ ಸಂಗೀತ- ಪುತ್ತೂರು ನರಸಿಂಹ ನಾಯಕ್ ಮತ್ತು ಸಂಗಡಿಗರು, ಆಯೋಜಕರು: ಲಲಿತಕಲಾ ಪರಿಷತ್ ಮತ್ತು ರಾಮಸುಧಾ ಚಾರಿಟಬಲ್ ಟ್ರಸ್ಟ್, ಸ್ಥಳ: ಡಾ.ಎಚ್. ಎನ್. ಕಲಾಕ್ಷೇತ್ರ 7ನೇ ಬ್ಲಾಕ್ ಜಯನಗರ ಸಂಜೆ: 6.30

ನಡುರಾತ್ರಿಯ ಪುಳಕ ನಾಟಕ ಪ್ರದರ್ಶನ: ವಿನ್ಯಾಸ, ರಚನೆ ಮತ್ತು ನಿರ್ದೇಶನ: ಎಸ್. ಸುರೇಂದ್ರನಾಥ, ಪ್ರಧಾನ ಪಾತ್ರಗಳಲ್ಲಿ : ಸಿಹಿಕಹಿ ಚಂದ್ರು, ಹುಲುಗಪ್ಪ ಕಟ್ಟೀಮನಿ, ಸುಂದರರಾಜ್, ಸ್ಥಳ: ರಂಗಶಂಕರ, ರಾತ್ರಿ 7.30



ಅನುಕೂಲಕ್ಕೊಬ್ಬಣ್ಣ ಮತ್ತು ಅಮ್ಮಾವ್ರ ಗಂಡ ನಾಟಕ ಪ್ರದರ್ಶನ: ನಿರ್ದೇಶನ: ಜಸ್ಲೀನ್ ಋತ್ವೀಕ್ ಸಿಂಹ, ಆಯೋಜಕರು: ವೇದಿಕೆ ನಾಟಕಶಾಲೆ, ಸ್ಥಳ: ವ್ಯೋಮ ಥಿಯೇಟರ್, ರಾತ್ರಿ 7

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,



ಪ್ರಧಾನ ಕಛೇರಿ: ಸಂಖ್ಯೆ 14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು – 560104.
ದೂರವಾಣಿ: 080-23300497, 41159606, 23359600, 23402712
Email: vjn@jscbl.com, web: www.jscbl.com

ಗ್ರಾಹಕರಿಗೆ ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ಸಾಲ ಸೌಲಭ್ಯ

ಕ್ರ ಸಂ.	ಸಾಲದ ವಿವರಗಳು	ಸಾಲದ ಮಿತಿ	ಬಡ್ಡಿದರ
01	ಮನೆ ಕಟ್ಟಲು ಮತ್ತು ಕೊಳ್ಳಲು	ರೂ. 25.00 ಲಕ್ಷದವರೆಗೆ	ಶೇ. 7.00%
		ರೂ. 25.00 ರಿಂದ ರೂ. 70.00 ಲಕ್ಷದವರೆಗೆ	ಶೇ. 7.50%
02	ವ್ಯಾಪಾರಾಭಿವೃದ್ಧಿ ಸಾಲ*	ರೂ. 1200.00 ಲಕ್ಷದವರೆಗೆ	ಶೇ. 9.00% ರಿಂದ ಶೇ. 10.00%
03	ಅಡಮಾನ ಸಾಲ	ರೂ. 1200.00 ಲಕ್ಷದವರೆಗೆ	ಶೇ. 10.75%
04	ನಿವೇಶನ ಖರೀದಿಗಾಗಿ	ರೂ. 70.00 ಲಕ್ಷದವರೆಗೆ	ಶೇ. 9.00%
05	ಓ.ಡಿ ಸಾಲಕ್ಕೆ*	ರೂ. 500.00 ಲಕ್ಷದವರೆಗೆ	ಶೇ. 10.00% ರಿಂದ ಶೇ. 11.00%
06	ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕೆ	ರೂ. 200.00 ಲಕ್ಷದವರೆಗೆ ತಾಂತ್ರಿಕ ಶಿಕ್ಷಣಕ್ಕೆ	ಶೇ. 8.25%
		ರೂ. 50.00 ಲಕ್ಷದವರೆಗೆ ಎಂ.ಡಿ. ವಿದ್ಯಾಭ್ಯಾಸಕ್ಕೆ	ಶೇ. 8.75%
07	ಜನತಾ ಸೇವಾ ಬಾಡಿಗೆ ಲೋನ್	ರೂ. 500.00 ಲಕ್ಷದವರೆಗೆ	ಶೇ. 9.00%
08	ವಾಹನ ಸಾಲಗಳಿಗೆ*	ರೂ. 35.00 ಲಕ್ಷದವರೆಗೆ	ಶೇ. 8.00%
09	ಆಭರಣಗಳ ಮೇಲಿನ ಸಾಲಗಳಿಗೆ	ರೂ. 15.00 ಲಕ್ಷದವರೆಗೆ	ಶೇ. 9.50%
10	ಸದಸ್ಯರ ಮಕ್ಕಳ ಮದುವೆ ಉದ್ದೇಶಕ್ಕಾಗಿ	ರೂ. 15.00 ಲಕ್ಷದವರೆಗೆ	ಶೇ. 9.00%
11	ಜಾಮೀನು ಸಾಲ	ರೂ. 1,00,000/- ವರೆಗೆ	ಶೇ. 12.00%
12	ಬಿ-ಖಾತಾ (ಸ್ಥಿರಾಸ್ತಿ ಜೊತೆಗೆ ಕಟ್ಟಡದ ಗೈಡ್‌ಲೈನ್ ಬೆಲೆಯ ಶೇ.25% ರಷ್ಟು)	ರೂ. 100.00 ಲಕ್ಷದವರೆಗೆ (ಗರಿಷ್ಠ)	ಶೇ. 11.00%

*ಷರತ್ತುಗಳು ಮತ್ತು ನಿಬಂಧನೆಗೊಳಪಟ್ಟಿರುತ್ತದೆ.

ಬ್ಯಾಂಕಿನ ನಿವ್ವಳ ಎನ್.ಪಿ.ಎ 31.03.2022ಕ್ಕೆ 0.00% ಆಗಿರುತ್ತದೆ.

ಹೆಚ್ಚಿನ ವಿವರಗಳಿಗೆ ಹತ್ತಿರದ ಶಾಖೆಗಳನ್ನು ಸಂಪರ್ಕಿಸಿ.

ಶಾಖೆಗಳು	ದೂರವಾಣಿ ಸಂಖ್ಯೆಗಳು
ವಿಜಯನಗರ (ಕೇಂದ್ರ ಕಛೇರಿ)	080-23402712, 41159606, 23359600
ಮೂಡಲಪಾಳ್ಯ	080-23110019
ಮಹಾಲಕ್ಷ್ಮೀಪುರಂ	080-23592994, 23197492
ರಾಜರಾಜೇಶ್ವರಿನಗರ	080-28604162, 41259606
ಸುಂಕದಕಟ್ಟೆ	080-23586055

ಶ್ರೀ ಹೆಚ್.ಸಿ. ಗೋಪಾಲ್
ಅಧ್ಯಕ್ಷರು

ಶ್ರೀಮತಿ ಭಾಗ್ಯ. ಎಸ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ

PUBLIC NOTICE

Notice is hereby given that our client intends to purchase the property described in the Schedule hereunder from its lawful owner **M/s. NEHRU FOUNDATION FOR DEVELOPMENT – CENTRE FOR ENVIRONMENT EDUCATION SOCIETY**, a Society registered under the Gujarat Societies Registration Act, 1965 and having its head office at Thaltej Tekra, Ahmedabad – 380 054, Gujarat and Southern Regional Cell at No.76/8, Jarakabande Kaval, P.B No. 6404, Subedarplaya, Attur Post, Yelahanka, Bengaluru- 560064, who is the absolute owner of the Schedule Property. Any person or persons other than the Vendor having any claim or interest in or to the Schedule Property, or any part thereof in any manner is/are required to forward their claim on or to the property to the undersigned at their office along with the relevant documents thereof, within **Fifteen days** from the date of publication of this notice in this newspaper. In the absence of any claims within the above said period, it shall be deemed that there are no such claims or that if there are any claims and they have not been made it shall be deemed to have been waived and our client will proceed with the transaction without any further reference in this regard.

SCHEDULE

All that piece and parcel of immovable converted land bearing **Survey No.76/8** (formerly being a portion of Survey No.76/5), situated at **Jarakabande Kaval Village**, Yelahanka Hobli, Bangalore North Taluk, Bangalore District, **measuring 3 (Three) Acres** 15 (Fifteen) Guntas encompassed by compound walls, duly converted for Environmental Education purpose vide Official Memorandum bearing No. ALN(SAY) SR/140/15-16 dated 14.03.2016 and bound as follows:

EAST : Land bearing Survey No.76/5;
WEST : Road;
NORTH : Land bearing Survey No.74;
SOUTH : Land bearing Survey No.76/5.

HJK LAW PARTNERS, Advocates
No.1038, 1st Floor, Dr. Rajkumar Road
Rajajinagar 4th Block,
Bangalore - 560 010
L: 080 23151715; Mob : 9845364814
Email: rekha@hjklawpartners.com
Place : Bengaluru, Date : 01.06.2022

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to inform the general public that our client **Sri.Sadananda. R.Shervegar** is the joint owner of Industrial converted land bearing **Sy.No.58/1,59/3 and 60/16 and presently bearing CMC katha No.521/58/1, 59/3,60/16 totally measuring 7 acres 36 guntas excluding kharab situated at Hebbagodi Village, Attibele Hobli, Anekal Taluk, Bangalore Rural District** which property is morefully described in the schedule hereunder and hereinafter referred as the schedule property, In connection with the schedule property original suit in **O.S.No.366/2018** is pending before the Senior Civil Judge at Anekal between our client and **Smt.Latha Bhasakar W/o R.S. Bhaskar** for partition and declaration and in the said suit an order of temporary injunction is granted restraining the defendant i,e, Smt.Latha Bhaskar from alienating or creating any charge over the suit schedule property till the disposal of the suit suppressing the said fact it is learnt that Smt.Latha Bhasakar is trying to create third party interest and charges over the schedule property .
Our client hereby calls upon public not to deal with the schedule property during pendency of the above O.S.No.366/2018 and inspite of this public notice if anybody deals with the schedule property same may be at their risk and cost and it amounts to contempt of court.

SCHEDULE PROPERTY

All that piece and parcel of the land bearing Industrial converted land bearing Sy.No.58/1,59/3 and 60/16 and presently bearing CMC katha No.521/58/1, 59/3,60/16 totally measuring 7 acres 36 guntas excluding kharab situated at Hebbagodi Village, Attibele Hobli, Anekal Taluk, Bangalore Rural District, being a composite singe unit and bounded on
East by: Sy. No.60/7 & Veerasandra Road, **West by:** Veerasandra Village boundary and KSIDC Industrial Area **North by:** Lands bearing Sy.No.59/1, 59/2 & 60/8 **South by :** Lands bearing Sy.No. 58/2+ 60/7

Sd/- **K. B. Jagannathappa & Hanumanthe Gowda S, Advocates,**
Off: Srinivasa Building,
2nd Floor, 5th Main, 2nd Cross,
Gandhinagar, Bangalore-09
Mobile: 9448615560

CONNECT ಕ್ಲಾಸಿಫೈಡ್ಸ್

ವಿವಾಹ ವಾರ್ಷಿಕೋತ್ಸವದ ಬೆಳ್ಳಿಹಬ್ಬ



ಶ್ರೀಮತಿ ನೇತ್ರಾವತಿ ಎಸ್. ಮತ್ತು ಶ್ರೀ ಬಿ.ಉಮೇಶ್

ನಮ್ಮನ್ನು ಸನ್ಮಾರ್ಗದಲ್ಲಿ ಬೆಳೆಸಿರುವ ಆದರ್ಶ ತಾಯಿ ಹಾಗೂ ಸ್ವಾಭಿಮಾನಿ ತಂದೆಗೆ ಅಭಿನಂದನೆಗಳು.

ಯು. ಮಯೂರ, ಬಿ.ಇ (ಸಿವಿಲ್) ಯು. ಹೇಮಾ, ಬಿ.ಕಾಂ.

ADMISSION CORNER ಕ್ಲಾಸಿಫೈಡ್ಸ್

R.E.S. POLYTECHNIC
Recognised by Govt. of Karnataka & Approved by AICTE
Inst. Code: 450 Estd: 1986
ADMISSIONS STARTED FOR
10th PASS - 3 Yrs Diploma
PUC / ITI PASS - 2 Yrs Diploma
FREE In-plant training to all students
New NEP syllabus with industry interaction to all
CS | IS | EC | EE | Civil | Mech | Auto | CP | FT
5, Sunkadakatte, Magadi Main Road, Hegganahalli Cross, B'lore-91 Phone: 080-23484814, 99166 46466, 99166 39466
RES-22302

St. Joseph's Institute of Management
#28/1, Primrose Road, Off: M.G. Road, Bangalore 560 025
Ph D Admissions Open
SJIM invites applications for
Full-Time Ph D
(affiliated to University of Mysore) in
General Management/ OB/ HR/ Marketing
Stipend is available for full-time scholars.
Contact: info@sjim.edu.in
Website: www.sjim.edu.in
Last date: 20 June, 2022

ADMISSIONS OPEN 2022-2023
Govt. Recognised Diploma Courses
LABORATORY / RADIOLOGY
OPHTHALMIC / OPERATION THEATER
DIALYSIS TECHNICIAN COURSES
Eligibility & Duration: 3 years for SSLC & 2 years for PUC (Science)
SRI SAI INSTITUTE OF PARAMEDICAL SCIENCES
(Recognised by Ministry of Medical Education, Govt of Karnataka)
375.1st Main Road. Vidhanasowdha Layout, Laggere, Bengaluru-560058
Contact: 9844068838 / 9036181812
SAI-22301

JOB OPPORTUNITIES

Multiple Vacancy

REQUIRED TEAMLEADER, TELECALLER, & FIELD EXECUTIVE For Banking Loan collection (salary 20k). direct recruitment to company Contact:- 9620206756, 9620200756.

Wanted

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn upto 40,000/- Contact: 9741401834

URGENT FRESHER & experience DATA ENTRY OPERATOR Required in Koramangala, Banaswadi, Whitefield, near Vidhana Soudha & Nimhans. 9844863432, 9322928212, 9331124144. sultu1432@gmail.com

Part-Time Jobs

EXCELLENT OPPORTUNITY for Retired/ VRS Bank & Govt. Officers to Earn Huge Income With Possible Travel Abroad Age 50-70 Yrs. Call 9060033382

BUSINESS

Business Offers

Finance

WANTED BUSINESS Partner Non Veg Hotel 10 Lakhs Investment Monthly Income 1 Lakhs: 9606701007/ 8892501007

NRI'S INVESTMENT
And Finance Available
On Low Interest
Against Properties,
Land&
Building,Sites,Flats,
Converted&
Agriculture Lands Call:
7411265189

REAL ESTATE SELLING

House

Frazer Town

SALE- OLD House- 1050 sqft- Pottery Town Bangalore- No broker contact- 9535683238, 8050657994

PERSONAL

Change of Name

I, SMT. GANGA W/o Sri. Nizamuddin, aged 29 years, R/at No.863, 1st Main,4th Cross, Manorayanapalya, R.T.Nagar Post, Bangalore North, Bengaluru- 560032, have changed my name from GANGA to TABASSUM FATHIMA vide affidavit dated: 05-03-2022, before Notary FAHIM UNNISA, Bangalore

I, SAANCHI S. Bhandarkar W/o. Sri Sumukha S.B. aged 26 years, #705, Dr.M.C. Modi Road, West of Chord Road, Mahalakshmipuram, Bangalore-86 have changed my name from Divya Nayak to Saanchi S. Bhandarkar vide Affidavit dated 25-05-2022 sworn before Notary Manohar Jeerige, Bangalore.

I, HULI SUMANTHKUMAR PRAKASH R/at No. 595/26, 3rd main road, Sharada Colony Basaveshwaranagar, Bengaluru- 560079, have changed my name to SUMANTH KUMAR vide affidavit dated: 30/5/2022 Before Notary M.K.Devaki Bangalore.

I, SHIVA KUMARA.A, S/O.LATE M ARJUN RAO, at SIDDHI B303 AVANI HILLS APTS GATTIGERE EXTN RAJARAJESWARI NAGAR BANGALORE-560098 has changed my name as SHINDHE SHIVA KUMARA.A with effect from 16.02.2022 vide affidavit no.33 vol.1 page 5 dated 16.02.2022 for the purpose of renewal of my passport.

I, S.JEELANI, D/of Mr. S.NAJEER and Smt. S.RAZIYA, resident of No. 210/221, VP Road, Old Madiwala, BTM Layout, 1st Stage, Bangalore-560068. have changed my name to S.SIRISHA vide affidavit dated 01-06-2022 sworn to before Advocate & Notary L.Shankaranarayana, Bangalore.

I, DATTATREYA JEEVAJI KULKARNI S/o Jeevaji Govind Kulkarni R/a #16/10, 1st Main 2nd Cross Gupta Layout South End Road, South End Circle, Near Surana College, Basavanagudi Bangalore-560004 Have Changed My Name to DATTATRAYA JEEVAJI KULKARNI vide Affidavit Dated 01-06-2022 Before Notary B.Rajashekhara Bangalore

I, SANTOSH R Revankar Residing at #970, 2-F Cross, 3rd Block, 3rd Stage, 4th Main, Basaveshwarnagar, Bangalore-560079. Have Changed my Minor Daughter Name SAANVI to VEDHA (DOB 13-12-2016) vide affidavit Dated 01/06/2022 Sworn to before Notary Shreeshail B Gobbani, Bangalore.

I, RAKSHA RAGHAVENDRA PAI Residng at 55, G101, Cedar Grove Apt, 2nd Main, 3rd Cross, Dena Bank Colony, Ganganagar, Bengaluru- 560032, have changed my name to RAKSHA HARISH PANDIT vide affidavit dated 01.06.2022 before notary H.H. Nagaraj Bengaluru. Henceforth I shall be known as RAKSHA HARISH PANDIT only.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD ಪ್ರಜಾವಾಣಿ
Classifieds
EDUCATION SPECIAL
SPECIAL RATES FOR • Admission Notice, • Education Success • Congratulation Ads
For More Details Contact:
Santhosh Kumar : 9880856233
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಮೇ ತಿಂಗಳಲ್ಲಿ ಮಳೆಯಾದ್ದರಿಂದ ಕಾಮಗಾರಿ ವಿಳಂಬ ● ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಭರವಸೆ

ವಾರದಲ್ಲಿ ನಗರದ ರಸ್ತೆಗಳು ಗುಂಡಿ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ರಸ್ತೆಗಳನ್ನು ಜೂನ್ 6ರೊಳಗೆ ಗುಂಡಿ ಮುಕ್ತ ಮಾಡಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಮೇ ತಿಂಗಳಿನಲ್ಲಿ ಮಳೆ ಹೆಚ್ಚಾಗಿದ್ದರಿಂದ 25 ದಿನಗಳಿಂದ ರಸ್ತೆ ಗುಂಡಿ ಮುಚ್ಚುವ ಕೆಲಸ ಸ್ಥಗಿತಗೊಂಡಿತ್ತು. ಈಗ ಮತ್ತೆ ಆರಂಭಿಸಲಾಗಿದೆ. ಬಾಕಿ 5,500 ಗುಂಡಿಗಳನ್ನು ವೇಗವಾಗಿ ಮುಚ್ಚಲಾಗುತ್ತಿದೆ' ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

'ಒಂದು ಚದರ ಮೀಟರ್ ಗುಂಡಿ ಇದೆ ಎಂದುಕೊಂಡು ಸ್ಥಳಕ್ಕೆ ಹೋದಾಗ ಕೆಲವೆಡೆ ಐದು ಚದರ ಮೀಟರ್‌ನಷ್ಟು ಅಗಲ ಇರುವ ಗುಂಡಿಗಳೂ ಸಿಕ್ಕಿವೆ. ದಿನಕ್ಕೆ 60 ಲಾರಿ ಲೋಡ್ ಬಿಸಿ ಡಾಂಬರ್ ಮಿಶ್ರಿತ ಜಲ್ಲಿ ಖರ್ಚಾಗುವ ಜಾಗದಲ್ಲಿ 250 ಲಾರಿ ಲೋಡ್ ಬೇಕಾಗುತ್ತಿದೆ. ಆದ್ದರಿಂದ ಸ್ವಲ್ಪ ವಿಳಂಬವಾಗುತ್ತಿದೆ. ಗುಂಡಿ ಮುಚ್ಚಲು ಕಚ್ಚಾ ವಸ್ತುಗಳ ಕೊರತೆ ಇದೆ ಎಂಬುದು ಸುಳ್ಳು' ಎಂದು ಹೇಳಿದರು.

ತನಿಖೆಗೆ ಆದೇಶ: 'ರಸ್ತೆ ಗುಂಡಿ ಮುಚ್ಚಲು ಪೈಥಾನ್ ಯಂತ್ರ ಪೂರೈಸಿರುವ ಅಮೆರಿಕ್ ರೋಡ್ ಟೆಕ್ನಾಲಜೀಸ್ ಸಲ್ಯೂಷನ್ಸ್(ಎಆರ್‌ಟಿಸಿ) ಕಂಪನಿಯು ಬಿಬಿಎಂಪಿ ಮುಖ್ಯ ಎಂಜಿನಿಯರ್(ರಸ್ತೆ ಮೂಲಸೌಕರ್ಯ) ಬಿ.ಎಸ್. ಪ್ರಹ್ಲಾದ್ ವಿರುದ್ಧ ನೀಡಿರುವ ದೂರಿನ ಬಗ್ಗೆ ತನಿಖೆ ನಡೆಸಲು ಆದೇಶಿಸಲಾಗಿದೆ. ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿರುವ ಪಾಲಿಕೆ ವಿಶೇಷ ಆಯುಕ್ತ(ಯೋಜನೆ) ಎನ್.ಬಿ. ರವೀಂದ್ರ ಅವರಿಗೆ ತನಿಖೆಯ ಜವಾಬ್ದಾರಿ ನೀಡಲಾಗಿದೆ. ವರದಿ ನೀಡಿದ ಕೂಡಲೇ ಹೈಕೋರ್ಟ್‌ಗೆ ಸಲ್ಲಿಸಲಾಗುವುದು' ಎಂದು ತಿಳಿಸಿದರು.

'ಹಳೇ ಬಿಲ್ ಪಾವತಿ ಮತ್ತು ಹೊಸ ಕೆಲಸಕ್ಕೆ ದರ ಹೆಚ್ಚಳ ಮಾಡಬೇಕು ಎಂಬುದು ಎಆರ್‌ಟಿಸಿ ಬೇಡಿಕೆ. ಈ ಸಂಬಂಧ ಪ್ರಹ್ಲಾದ್ ಅವರು ಹಲವು ಬಾರಿ ಸಭೆ ನಡೆಸಿದ್ದರು. ಅವರ ವಿರುದ್ಧವೇ ದೂರು ನೀಡಿರುವುದರಿಂದ ಬಾಕಿ ಬಿಲ್ ಪಾವತಿ ಪ್ರಕ್ರಿಯೆ ಮುಂದುವರಿಸುವ ಜವಾಬ್ದಾರಿಯನ್ನು ಮುಖ್ಯ ಎಂಜಿನಿಯರ್(ಯೋಜನೆ) ಎಂ. ಲೋಕೇಶ್‌ಗೆ ನೀಡಲಾಗಿದೆ' ಎಂದು ವಿವರಿಸಿದರು.

ರಾಜಕಾಲುವೆಗಳಲ್ಲಿ ಒಳಚರಂಡಿ ಅಥವಾ ಇನ್ನಿತರ ಕಾಮಗಾರಿಗಳನ್ನು ಮಳೆಗಾಲದಲ್ಲಿ ನಿರ್ವಹಿಸಿದರೆ ನೀರು ಸರಾಗವಾಗಿ ಹರಿದು ಹೋಗಲು ಅಡ್ಡಿಯಾಗಲಿದೆ. ಆದ್ದರಿಂದ ಯಾವುದೇ ಕಾಮಗಾರಿಯನ್ನು ಈಗ ಕೈಗೊಳ್ಳದಂತೆ ಜಲಮಂಡಳಿಗೆ ತಿಳಿಸಲಾಗಿದೆ. ಪ್ರಗತಿಯಲ್ಲಿರುವ ಕಾಮಗಾರಿ ಪೂರ್ಣಗೊಳಿಸಿ ರಾಜಕಾಲುವೆಯಲ್ಲಿ ಇರುವ ಯಂತ್ರಗಳನ್ನು ಹೊರಕ್ಕೆ ತೆಗೆಯಲು ಜೂನ್ 1ರ ತನಕ ಸಮಯ ನೀಡಲಾಗಿತ್ತು. ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಮೇಲ್ಸೇತುವೆಗಳ ನಿರ್ವಹಣೆ: ನಗರದ ಮೇಲ್ಸೇತುವೆಗಳ ನಿರ್ವಹಣೆ ಕುಂಠಿತ ಆಗಿರುವುದು ಗಮನಕ್ಕೆ ಬಂದಿದೆ. ಈ ವರ್ಷ ಅಮೃತ ನಗರೋತ್ಥಾನ ಯೋಜನೆಯ ಅನುದಾನದಲ್ಲಿ ನಿರ್ವಹಣೆ ಮಾಡಲಾಗುವುದು. ಪ್ರತಿವರ್ಷ ಈ ಅನುದಾನ ಇರುವುದಿಲ್ಲ. ಆದ್ದರಿಂದ ಮುಂದಿನ ವರ್ಷದಿಂದ ಮೇಲ್ಸೇತುವೆಗಳ ನಿರ್ವಹಣೆಗೆ ಅನುದಾನ ಮೀಸಲಿಡಲಾಗುವುದು ಎಂದು ತಿಳಿಸಿದರು.

ವಾರ್ಡ್ ಮರುವಿಂಗಡಣೆ: ಶೀಘ್ರ ವರದಿ ಸಲ್ಲಿಕೆ

ಬಿಬಿಎಂಪಿ ವಾರ್ಡ್‌ಗಳ ಮರು ವಿಂಗಡಣೆ ಕರಡು ಬಹುತೇಕ ಸಿದ್ಧವಿದ್ದು, ಎರಡು– ಮೂರು ದಿನಗಳಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತುಷಾರ್ ಗಿರಿನಾಥ್ ತಿಳಿಸಿದರು.

2011ರ ಜನಗಣತಿ ಪ್ರಕಾರ 84.65 ಲಕ್ಷ ಮತದಾರರು ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ಅದನ್ನು ಆಧರಿಸಿ 243 ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ. ಪ್ರತಿ ವಾರ್ಡ್‌ಗೆ ಸರಾಸರಿ 34,750 ಮತದಾರರು ಇರಲಿದ್ದಾರೆ. ರೈಲು ಹಳಿ, ರಸ್ತೆಗಳ ವಿಭಜನೆ ಆಗುವ ಕಡೆ ಶೇ 10ರಷ್ಟು ಕಡಿಮೆ ಅಥವಾ ಹೆಚ್ಚು ಆಗಲಿದೆ ಎಂದರು.



ತುಷಾರ್ ಗಿರಿನಾಥ್

ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಕರಡು ಸಿದ್ಧವಾಗಿದ್ದು, ಒಂದು ಸಾವಿರ ಪುಟಕ್ಕೂ ಅಧಿಕ ಇದೆ. ಆದ್ದರಿಂದ ಸಂಕ್ಷಿಪ್ತಗೊಳಿಸಿ ಸಲ್ಲಿಕೆಯಾಗಿದೆ. ಸುಪ್ರೀಂ ಕೋರ್ಟ್ ನೀಡಿರುವ ಸಮಯದಲ್ಲಿ ಎಲ್ಲಾ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ಹೇಳಿದರು.

ವಾರ್ಡ್ ವಾರು ಮೀಸಲಾತಿ ವಿಷಯದಲ್ಲಿ ಬಿಬಿಎಂಪಿ ಪಾತ್ರ ಇರುವುದಿಲ್ಲ. 1992ರಿಂದ ಈವರೆಗೆ ವಾರ್ಡ್‌ಗಳನ್ನು ಪ್ರತಿನಿಧಿಸಿರುವ ಪಾಲಿಕೆ ಸದಸ್ಯರಿಗೆ ಸಂಬಂಧಿಸಿದ ವಿವರವನ್ನು ಸರ್ಕಾರ ಕೇಳಿತ್ತು. ಅದನ್ನು ಒದಗಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ವಲಯ ಕಚೇರಿಗಳಲ್ಲೇ ಆಯುಕ್ತರು ಲಭ್ಯ

'ಬಿಬಿಎಂಪಿ ವಲಯ ಕಚೇರಿಗಳಲ್ಲಿ ಮುಂದಿನ ವಾರದಿಂದ ವಲಯ ಆಯುಕ್ತರು ಕುಳಿತುಕೊಳ್ಳಲಿದ್ದು, ಜನರು ತಮ್ಮ ಸಮಸ್ಯೆಗಳನ್ನು ಹೊತ್ತು ಬಿಬಿಎಂಪಿ ಕೇಂದ್ರ ಕಚೇರಿಗೆ ಬರುವುದು ತಪ್ಪಲಿದೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

'ವಲಯ ಕಚೇರಿಗಳಲ್ಲಿ ಮೂಲ ಸೌಕರ್ಯ ಹೆಚ್ಚಿಸುವ ಕೆಲಸವನ್ನು ಮಾಡಲಾಗುತ್ತಿದೆ. ಸ್ವಂತ ಕಚೇರಿ ಇಲ್ಲದಿದ್ದರೆ ಬಾಡಿಗೆ ಪಡೆಯಲು ಅವಕಾಶ ನೀಡಲಾಗುವುದು. ಆಯಾ ವಲಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ವಲಯ ಕಚೇರಿಗಳಲ್ಲೇ ಆಯುಕ್ತರು ಸಭೆ ನಡೆಸಲಿದ್ದಾರೆ. ಐಎಎಸ್ ಅಧಿಕಾರಿಯೊಬ್ಬರು ವಲಯ ಕಚೇರಿಯಲ್ಲಿ ಸಿಗಲಿದ್ದಾರೆ ಎಂಬುದು ಜನರಿಗೆ ಗೊತ್ತಾದರೆ ಅಲ್ಲಿಯೇ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದಾರೆ' ಎಂದರು.



ಡಾ.ಸಿ.ಎನ್. ಮಂಜುನಾಥ್ ಹಾಗೂ ಡಾ.ಎಂ.ಕೆ. ರಮೇಶ್ ಚರ್ಚಿಸಿದರು – ಪ್ರಜಾವಾಣಿ ಚಿತ್ರ

'ನೀಟ್‌ನಿಂದ ಗ್ರಾಮೀಣ ಭಾಗದವರಿಗೆ ಅವಕಾಶ ವಂಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ನಾತಕೋತ್ತರ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿನ (ನೀಟ್) ಲೋಪದಿಂದ ಗ್ರಾಮೀಣ ಭಾಗದ ಅಭ್ಯರ್ಥಿಗಳು ಅವಕಾಶ ವಂಚಿತರಾಗುತ್ತಿದ್ದಾರೆ' ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಕಳವಳ ವ್ಯಕ್ತಪಡಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ನಗರದಲ್ಲಿ ಬುಧವಾರ ಹಮ್ಮಿಕೊಂಡ 27ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. 'ನೀಟ್ ವ್ಯವಸ್ಥೆಯಲ್ಲಿನ ಲೋಪ ಸರಿಪಡಿಸಲು ವೈದ್ಯಕೀಯ ಮತ್ತು ಆರೋಗ್ಯ ವಿಶ್ವವಿದ್ಯಾಲಯಗಳ ಕುಲಪತಿಗಳು ಹಾಗೂ ಕುಲಸಚಿವರು ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ ಪತ್ರ ಬರೆಯಬೇಕು' ಎಂದು ಆಗ್ರಹಿಸಿದರು.

'ಗ್ರಾಮೀಣ ಮತ್ತು ಉಪನಗರ ಪ್ರದೇಶಗಳ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಶೇ 99ರಷ್ಟು ಅಂಕ ಗಳಿಸಿರುತ್ತಾರೆ. ಆದರೆ, ನೀಟ್ ಪರೀಕ್ಷೆಯಲ್ಲಿ ಕಡಿಮೆ ಅಂಕಗಳಿಸಿದರೆ ಅವಕಾಶ ವಂಚಿತರಾಗುತ್ತಾರೆ. ಆದ್ದರಿಂದ, ಈಗಿರುವ ವ್ಯವಸ್ಥೆ ಸರಿಪಡಿಸಬೇಕಾಗಿದೆ' ಎಂದರು.

ಪ್ರೋತ್ಸಾಹಧನ ನೀಡಿ: 'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದಲ್ಲಿ ಕಾರ್ಯನಿರ್ವಹಿಸುವ ವೈದ್ಯರಿಗೆ ಪ್ರೋತ್ಸಾಹಧನ ನೀಡಬೇಕು. ಜಯದೇವ ಸಂಸ್ಥೆಯಲ್ಲಿ ಸಿಬ್ಬಂದಿಗೆ ಆಂತರಿಕ ಸಂಪನ್ಮೂಲದಿಂದಲೇ ಪ್ರೋತ್ಸಾಹಧನ ನೀಡಲಾಗುತ್ತಿದೆ' ಎಂದು ಡಾ.ಸಿ.ಎನ್. ಮಂಜುನಾಥ್ ಹೇಳಿದರು.

'ಒಂದೂವರೆ ದಶಕದಲ್ಲಿ ಜಯದೇವ ಹೃದ್ರೋಗ ಸಂಸ್ಥೆ ಶೇ 500 ರಷ್ಟು ಪ್ರಗತಿ ಸಾಧಿಸಿದೆ. ಸಂಸ್ಥೆಯಲ್ಲಿ 105 ಹೃದ್ರೋಗ ತಜ್ಞರು ಹಾಗೂ 50 ಹೃದಯ ಶಸ್ತ್ರಚಿಕಿತ್ಸಕರಿದ್ದು, ಇಷ್ಟೊಂದು ತಜ್ಞರಿರುವ ಜಗತ್ತಿನ ಏಕೈಕ ಸಂಸ್ಥೆ ಇದಾಗಿದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಕೆ. ರಮೇಶ್, ಮಾಜಿ ಕುಲಪತಿ ಡಾ. ಸಚ್ಚಿದಾನಂದ, ಕುಲಸಚಿವರಾದ ಡಾ.ಎನ್. ರಾಮಕೃಷ್ಣ ರೆಡ್ಡಿ, ಎಂ.ಆರ್. ರವಿಕುಮಾರ್ ಇದ್ದರು.



ಅದ್ವೈಕ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ವತಿಯಿಂದ ಆಯೋಜಿಸಿದ್ದ ಬಿಎಸ್ಸಿ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಸೈನ್ಸ್ ವಿದ್ಯಾರ್ಥಿಗಳ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ಪಶುವೈದ್ಯ ಇಲಾಖೆಯ ಆಯುಕ್ತ ಎಚ್. ಬಸವರಾಜೇಂದ್ರ ಉದ್ಘಾಟಿಸಿದರು. ಒಕ್ಕಲಿಗರ ಸಂಘದ ನಿರ್ದೇಶಕ ಡಾ. ಟಿ.ಎಂ. ಆಂಜನಪ್ಪ, ಬೆಳಗಾವಿ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ಜಿನೇಂದ್ರ ಕಣವಿ,ಆರ್ಯವರ್ಧನ್ ಗುರೂಜಿ, ಸಂಸ್ಥೆಯ ಅಧ್ಯಕ್ಷ ಕೆ.ಸತೀಶ್, ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ಕರೀಗೌಡ ಇದ್ದರು

ವಿಧಾನಮಂಡಲ ಸಮಿತಿ ಸಭೆಗೆ ಗೈರಾಗಲು ಪ್ರಿಯಾಂಕ್ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆ ಅನುಷ್ಠಾನದಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತು ಚರ್ಚೆ ನಡೆಸಲು ಆಸಕ್ತಿ ತೋರದೇ ಇರುವುದನ್ನು ಪ್ರತಿಭಟಿಸಿ ವಿಧಾನಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ ಸಭೆಗಳಿಗೆ ಗೈರಾಗಲು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ನಿರ್ಧರಿಸಿದ್ದಾರೆ.

ಈ ಕುರಿತು ಸಮಿತಿಯ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ ಅವರಿಗೆ ಬುಧವಾರ ಪತ್ರ ಬರೆದಿರುವ ಪ್ರಿಯಾಂಕ್, 'ಸುಳ್ಳು ಜಾತಿ ಪ್ರಮಾಣಪತ್ರಗಳು ಸೇರಿದಂತೆ ಅನೇಕ ವಿಚಾರಗಳ ಕುರಿತು ಸಮಿತಿಯ ಸಭೆಗಳಲ್ಲಿ ಚರ್ಚೆ ನಡೆಯುತ್ತಿದೆ. ಸಮಿತಿಯ ಅಧ್ಯಕ್ಷರಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಯ ವಿಚಾರದಲ್ಲಿ ನ್ಯಾಯ ದೊರಕಿಸುತ್ತೀರಿ ಎಂಬ ನಂಬಿಕೆ ನಮ್ಮದು. ಗಂಗಾ ಕಲ್ಯಾಣ ಯೋಜನೆಯಲ್ಲಿನ ಭ್ರಷ್ಟಾಚಾರದ ಕುರಿತು ಚರ್ಚೆ ನಡೆಸುವಂತೆ ಅನೇಕ ಬಾರಿ ನಾನು ನಿಮ್ಮನ್ನು ಕೋರಿದ್ದರೂ ಚರ್ಚೆ ಆರಂಭಿಸಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಗಂಗಾ ಕಲ್ಯಾಣ ಯೋಜನೆ ಅನುಷ್ಠಾನದಲ್ಲಿ ₹ 431 ಕೋಟಿಯಷ್ಟು ಅಕ್ರಮ ನಡೆದಿರುವುದು ತನಿಖಾ ಸಮಿತಿಯ ಮಧ್ಯಂತರ ವರದಿಯಲ್ಲಿ ಉಲ್ಲೇಖವಾಗಿದೆ ಎಂಬ ಮಾಹಿತಿ ಇದೆ. ಇಂತಹ ಗಂಭೀರ ವಿಷಯದ ಕುರಿತು ಚರ್ಚಿಸಿ, ನಿರ್ಣಯ ಕೈಗೊಳ್ಳಲಾಗದ ಸಮಿತಿಯ ಸಭೆಗೆ ಹಾಜರಾಗುವುದು ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ. ಆದ್ದರಿಂದ ಇನ್ನು ಮುಂದೆ ಸಮಿತಿಯ ಸಭೆಗೆ ಹಾಜರಾಗಬಾರದೆಂದು ತೀರ್ಮಾನಿಸಿದ್ದೇನೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮೀಸಲಾತಿ: ಅಹವಾಲು ಸ್ವೀಕಾರ

ಬೆಂಗಳೂರು: ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸುವ ಸಂಬಂಧ ರಚಿಸಿರುವ ನ್ಯಾಯಮೂರ್ತಿ ಕೆ. ಭಕ್ತವತ್ಸಲ ವಿಚಾರಣಾ ಆಯೋಗ ಸಾರ್ವಜನಿಕರಿಂದ ಅಹವಾಲು ಮತ್ತು ಸಲಹೆಗಳನ್ನು ಸ್ವೀಕರಿಸುತ್ತಿದೆ.

ಮೂರು ತಿಂಗಳಲ್ಲಿ ವರದಿ ಸಲ್ಲಿಸಲು ಸರ್ಕಾರ ಆಯೋಗಕ್ಕೆ ತಿಳಿಸಿದ್ದು, ಆದ್ದರಿಂದ ಜೂನ್ 8 ರೊಳಗೆ ಅಹವಾಲುಗಳನ್ನು ಸಾರ್ವಜನಿಕರು ಸಲ್ಲಿಸಬಹುದು ಎಂದು ಆಯೋಗ ತಿಳಿಸಿದೆ.

ವಿಕಾಸಸೌಧದ ಮೊದಲನೇ ಮಹಡಿಯಲ್ಲಿನ 133 ಮತ್ತು 134 ಕೊಠಡಿಯಲ್ಲಿನ ಆಯೋಗದ ಕಚೇರಿಗೆ ಲಿಖಿತ ರೂಪದಲ್ಲಿ ಸಲಹೆಗಳನ್ನು ನೀಡಬಹುದು. ಹೆಚ್ಚಿನ ಮಾಹಿತಿಗೆ ಆಯೋಗದ ಕಾರ್ಯದರ್ಶಿ ಅವರನ್ನು ದೂರವಾಣಿ ಸಂಖ್ಯೆ 080–2235 2152, 2203 4004 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಉಪಾಸನಾ ಮೋಹನ್‌ಗೆ 'ಗೌರಿಸುಂದರ್ ಪ್ರಶಸ್ತಿ

ಬೆಂಗಳೂರು: ಸುಂದರ ಪ್ರಕಾಶನ ನೀಡುವ 2022ನೇ ಸಾಲಿನ 'ಗೌರಿಸುಂದರ್" ವಾರ್ಷಿಕ ಪ್ರಶಸ್ತಿಗೆ ಸುಗಮ ಸಂಗೀತ ಕಲಾವಿದ ಉಪಾಸನಾ ಮೋಹನ್ ಆಯ್ಕೆ ಆಗಿದ್ದಾರೆ.



ಉಪಾಸನಾ ಮೋಹನ್

ಪ್ರಶಸ್ತಿಯು ₹ 10 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಕವಿಗಳಾದ ಎಚ್.ಎಸ್. ವೆಂಕಟೇಶಮೂರ್ತಿ, ಬಿ.ಆರ್. ಲಕ್ಷ್ಮಣರಾವ್ ಮತ್ತು ಗಾಯಕಿ ಕಸ್ತೂರಿ ಶಂಕರ್ ಅವರು ಆಯ್ಕೆ ಸಮಿತಿಯಲ್ಲಿದ್ದರು. ಇದೇ 19ರಂದು ನಗರದ ಬಿ.ಪಿ ವಾಡಿಯಾ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಇಂದಿರಾ ಸುಂದರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಕ್ರತೀರ್ಥ ಅಪರಾಧ ಮಾಡಿಲ್ಲ: ಆರಗ

ತುಮಕೂರು: 'ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರನ್ನು ಗಡಿಪಾರು ಮಾಡುವಷ್ಟು ಅಪರಾಧ ನಡೆದಿದೆ ಎನ್ನುವುದು ನನ್ನ ಗಮನದಲ್ಲಿ ಇಲ್ಲ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಇಲ್ಲಿ ಬುಧವಾರ ಹೇಳಿದರು.

'ಗಡಿಪಾರು ಮಾಡಲು ಸುಮಾರು ನಿಯಮಗಳಿವೆ. ಇಂತಹ ಹೇಳಿಕೆ ಕೊಡುವವರಿಗೆ ಈ ಬಗ್ಗೆ ಗೊತ್ತಿಲ್ಲ' ಎಂದರು.

ಬೆಸ್ಕಾಂ ವಾಟ್ಸ್‌ಆ್ಯಪ್ ಸಹಾಯವಾಣಿಗೆ ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸಂಬಂಧಿತ ಸಾರ್ವಜನಿಕರ ಕುಂದು ಕೊರತೆಗಳ ಪರಿಹಾರಕ್ಕೆ ಬಿಡುಗಡೆಗೊಂಡ ಬೆಸ್ಕಾಂನ 8 ಜಿಲ್ಲೆಗಳ 11 ವ್ಯಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆಗಳಿಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ವಾಟ್ಸ್ ಆ್ಯಪ್ ಸಹಾಯವಾಣಿ ಬಿಡುಗಡೆಗೊಂಡ ಕೇವಲ ಒಂದು ವಾರದಲ್ಲಿ 736 ದೂರಗಳನ್ನು ಸ್ವೀಕರಿಸಿದ್ದು, 628 ದೂರುಗಳನ್ನು ಬಗೆಹರಿಸಲಾಗಿದೆ.

ಗ್ರಾಹಕರ ವಿದ್ಯುತ್ ಸಮಸ್ಯೆಗಳ ತುರ್ತು ಪರಿಹಾರಕ್ಕೆ ಬಿಡುಗೊಂಡ ವಾಟ್ಸ್ ಆ್ಯಪ್ ಸಹಾಯವಾಣಿ ಸಂಖ್ಯೆಗಳಿಗೆ ಗ್ರಾಹಕರು ಕೇವಲ ಸಂದೇಶ ಕಳುಹಿಸಲು ಕೋರಲಾಗಿತ್ತು. ಆದರೆ ಇದೀಗ ಗ್ರಾಹಕರು ತಮ್ಮ ವ್ಯಾಪ್ತಿಯಲ್ಲಿನ ವಿದ್ಯುತ್ ಸಮಸ್ಯೆಗಳ ಕುರಿತು ಫೋಟೊ, ವಿಡಿಯೊ ತುಣುಕುಗಳನ್ನು ವ್ಯಾಟ್ಸ್‌ಆ್ಯಪ್ ಸಹಾಯವಾಣಿಗೆ ಕಳುಹಿಸುತ್ತಿದ್ದಾರೆ.

ವಿದ್ಯುತ್ ಸಮಸ್ಯೆಗಳ ಫೋಟೊಗಳನ್ನು ಕಳುಹಿಸುವುದರಿಂದ ವಿದ್ಯುತ್ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಸಹಕಾರಿಯಾಗುತ್ತಿದೆ. 1912 ಸಹಾಯವಾಣಿ ಕೇಂದ್ರದ ವ್ಯಾಟ್ಸ್‌ಆ್ಯಪ್ ಸಹಾಯವಾಣಿ ಸಿಬ್ಬಂದಿ ತಕ್ಷಣವೇ ದೂರು ಸ್ವೀಕರಿಸಿ, ಗ್ರಾಹಕರಿಗೆ ಸ್ವೀಕೃತಿ ಸಂಖ್ಯೆ ಕಳುಹಿಸಿ, ದೂರುಗಳನ್ನು ಸಂಬಂಧಿಸಿದ ಬೆಸ್ಕಾಂ ಜಿಲ್ಲೆಗಳಿಗೆ ಕಳುಹಿಸಿ ಪರಿಹಾರಕ್ಕೆ ಸೂಚಿಸುತ್ತಾರೆ. ಸಚಿತ್ರ ಸಮೇತ ದೂರುಗಳನ್ನು ಆಯಾ ಜಿಲ್ಲೆಗಳ ಬೆಸ್ಕಾಂ ಅಧಿಕಾರಿಗಳಿಗೆ ಕಳುಹಿಸುವುದರಿಂದ ದೂರುಗಳ ಶೀಘ್ರ ಪರಿಹಾರ ಆಗುತ್ತಿದೆ ಎಂದು ಬೆಸ್ಕಾಂ ನ ಗ್ರಾಹಕ ಸಂಬಂಧಗಳ ವ್ಯವಸ್ಥಾಪಕ ಎಸ್. ಆರ್. ನಾಗರಾಜ್ ತಿಳಿಸಿದರು.

ಪರಿವರ್ತನಾ ಸಮಾವೇಶ 4ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮತಾ ಸೈನಿಕ ದಳದಿಂದ ಇದೇ 4 ರಂದು 'ಪರಿವರ್ತನಾ ಸಮಾವೇಶ'ವನ್ನು ವಸಂತನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

'ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜಯಂತಿ ಮತ್ತು ಡಾ.ಎಂ. ವೆಂಕಟಸ್ವಾಮಿ' ಅವರ 68ನೇ ಹುಟ್ಟು ಹಬ್ಬದ ಪ್ರಯುಕ್ತ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಮಾವೇಶದ ಆಯೋಜಕ ಡಾ.ಆರ್. ಚಂದ್ರಶೇಖರ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಈ ವರ್ಷದ 'ನಾಲ್ವಡಿ ಕೃಷ್ಣರಾಜ ಒಡೆಯರ್' ಪ್ರಶಸ್ತಿಗೆಯನ್ನು ಸಾಹಿತಿ ಬಿ.ಟಿ. ಲಲಿತಾನಾಯಕ್ ಅವರಿಗೆ ನೀಡಲು ಆಯ್ಕೆ ಸಮಿತಿ ನಿರ್ಧರಿಸಿದೆ. ಪ್ರಶಸ್ತಿಯು ₹25 ಸಾವಿರ ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದ್ದು, ಪರಿವರ್ತನಾ ಸಮಾವೇಶದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಬೆಂಗಳೂರು ವಿ.ವಿ ಶಿಕ್ಷಕೇತರ ನೌಕರರ ಸಂಘದ ವತಿಯಿಂದ ವೇಣುಗೋಪಾಲ್ ಅವರಿಗೆ ಅಭಿನಂದನೆ

'ಅಧಿಕಾರ ದುರುಪಯೋಗ ಮಾಡಿಲ್ಲ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲ ಆಡಳಿತಾತ್ಮಕ ನಿರ್ಧಾರಗಳನ್ನು ಕಾನೂನು ಚೌಕಟ್ಟಿನಲ್ಲಿಯೇ ತೆಗೆದುಕೊಂಡಿದ್ದೇನೆ. ವಿಶ್ವವಿದ್ಯಾಲಯ ಜತೆಗಿನ 47 ವರ್ಷಗಳ ಸುದೀರ್ಘ ಒಡನಾಟದಲ್ಲಿ ಯಾವುದೇ ಕಾನೂನು ಬಾಹಿರ ಕೆಲಸ ಕಾರ್ಯಗಳನ್ನು ಮಾಡಿಲ್ಲ' ಎಂದು ಕುಲಪತಿ ಪ್ರೊ. ಕೆ.ಆರ್.ವೇಣುಗೋಪಾಲ್ ಸ್ಪಷ್ಟಪಡಿಸಿದರು.

ಇದೇ ಜೂನ್ 10ರಂದು ನಿವೃತ್ತರಾಗುತ್ತಿರುವುದರಿಂದ ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಕೇತರ ನೌಕರರ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಗೌರವ ಸ್ವೀಕರಿಸಿ ಅವರು ಮಾತನಾಡಿದರು.

'ನಾನು ನುಡಿದಂತೆಯೇ ನಡೆದಿದ್ದೇನೆ. ವೈಯಕ್ತಿ ಲಾಭಕ್ಕಾಗಿ ಎಂದಿಗೂ ಅಧಿಕಾರ ದುರುಪಯೋಗಪಡಿಸಿಕೊಂಡಿಲ್ಲ. 49ನೇ ವಯಸ್ಸಿನಲ್ಲೇ ದೊರೆಯಬೇಕಿದ್ದ ಕುಲಪತಿ ಹುದ್ದೆ 63ನೇ ವಯಸ್ಸಿನಲ್ಲಿ ಒಲಿದು ಬಂತು. ಕೆಲವರ ಚಿತಾವಣೆಯಿಂದ ನಿವೃತ್ತಿಗೆ ಹತ್ತು ದಿನ ಬಾಕಿ ಉಳಿದಿರುವಾಗಲೂ ಕೋರ್ಟ್ ವ್ಯಾಜ್ಯದಲ್ಲಿ ತೊಡಗುವಂತಾಗಿದೆ. ನಾನು ಕಾನೂನು ಹೋರಾಟದಲ್ಲಿ ಸೋಲಬಹುದು. ಆದರೆ, ಎಲ್ಲ ಸಿಬ್ಬಂದಿಯ ಪ್ರೀತಿ ಅಭಿನಂದನೆ ಪಡೆಯುವ ಮೂಲಕ ಜಯಗಳಿಸಿದ್ದೇನೆ' ಎಂದರು.



ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಕೇತರ ನೌಕರರ ಸಂಘದ ವತಿಯಿಂದ ಕುಲಪತಿ ಪ್ರೊ. ಕೆ.ಆರ್.ವೇಣುಗೋಪಾಲ್ ಅವರನ್ನು ಸನ್ಮಾನಿಸಲಾಯಿತು. ಕುಲಸಚಿವ ಪ್ರೊ.ಕೊಟ್ರೇಶ್, ಕುಲಸಚಿವ (ಮೌಲ್ಯಮಾಪನ) ದೇವರಾಜ್ ಮತ್ತು ಸಂಘದ ಅಧ್ಯಕ್ಷ ಶಿವಪ್ಪ, ರಂಗಧಾಮಯ್ಯ ಮತ್ತಿತರರು ಇದ್ದಾರೆ

'ಹಲವು ಸಾಧನೆಗಳ ಬಳಿಕವೂ ಮುಂಬರುವ ಕುಲಪತಿಗಳ ಅವಧಿಯಲ್ಲಿ ಮಾತ್ರ ವಿಶ್ವವಿದ್ಯಾಲಯ ಅಭಿವೃದ್ಧಿಯತ್ತ ಸಾಗಲು ಸಾಧ್ಯ ಎಂಬ ಆಶಯ ಕೆಲವರಲ್ಲಿದೆ. ಅವರ ಇಚ್ಛೆ ಈಡೇರಲಿ" ಎಂದು ಕುಟುಕಿದರು.

'ವಿಶ್ವವಿದ್ಯಾಲಯ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಸಹಕಾರದಿಂದ ನೌಕರರ ಕಾಯಂಗೊಳಿಸುವುದು ಸೇರಿದಂತೆ 250ಕ್ಕೂ ಹೆಚ್ಚು ಪ್ರಾಧ್ಯಾಪಕರಿಗೆ ಮುಂಬಡ್ತಿ, ವಿದ್ಯಾರ್ಥಿ ವೇತನ ಹೆಚ್ಚಳ, ಮಹಿಳಾ ಕೊಠಡಿ ನಿರ್ಮಾಣ, 11 ಹಾಸ್ಟೆಲ್ ನಿರ್ಮಾಣ ಸೇರಿದಂತೆ ಹಲವು ಕಾರ್ಯಗಳನ್ನು ಸಾಧಿಸಲು ಸಾಧ್ಯವಾಯಿತು. ಕರಾರುವಕ್ಕಾದ ಕಾರ್ಯವೈಖರಿ ಹಾಗೂ ಇಚ್ಛಾಶಕ್ತಿ ಇದ್ದಾಗ ಎಲ್ಲ ಕಾರ್ಯಗಳು ವೇಗವಾಗಿ ಪೂರ್ಣಗೊಳ್ಳುತ್ತವೆ' ಎಂದರು.

ಕುಲಸಚಿವ ಪ್ರೊ.ಕೊಟ್ರೇಶ್ ಮಾತನಾಡಿ, 'ಪ್ರೊ. ಕೆ.ಆರ್.ವೇಣುಗೋಪಾಲ್ ಅವರು ಎಂದಿಗೂ ಕಾನೂನು ಚೌಕಟ್ಟು ಮೀರಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಕಾನೂನಿನ ಅಡಿ ದೊರೆಯುವ ಅವಕಾಶಗಳನ್ನು ಬಳಸಿಕೊಂಡು ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿದ್ದರು. ನಿರಾಧಾರ ಆರೋಪಗಳು ಎಂದಿಗೂ ಸತ್ಯವಾಗುವುದಿಲ್ಲ. ಅತ್ಯಂತ ಸಂಯಮದಿಂದ ನಿಷ್ಕಲ್ಮಷವಾಗಿ ಸೇವೆ ಸಲ್ಲಿಸಿದ ಪ್ರೊ.ಕೆ.ಆರ್. ವೇಣುಗೋಪಾಲ್ ಎಲ್ಲರಿಗೂ ಮಾದರಿಯಾಗಲಿದ್ದಾರೆ' ಎಂದರು.

ಕುಲಸಚಿವ (ಮೌಲ್ಯಮಾಪನ) ದೇವರಾಜ್ ಇದ್ದರು

ದಿನಗೂಲಿ ನೌಕರರ ಕಾಯಂಗೆ ಮನವಿ

'2019ರಲ್ಲಿ 100 ದಿನಗೂಲಿ ನೌಕರರ ಕಾಯಂಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಗಮನ ಸೆಳೆದಿದ್ದೆ. 10 ವರ್ಷಗಳ ಕಾಲ ಸತತವಾಗಿ ಸೇವೆ ಸಲ್ಲಿಸಿದ ನೌಕರರನ್ನು ಪರಿಗಣಿಸುವಂತೆ ಕೋರ್ಟ್ ಸರ್ಕಾರಕ್ಕೆ ಸೂಚನೆ ನೀಡಿದೆ. ಮುಂದಿನ ದಿನಗಳಲ್ಲಿ ಈ ಆದೇಶ ಎಲ್ಲ ವಿಶ್ವ ವಿದ್ಯಾಲಯದ ದಿನಗೂಲಿ ನೌಕರರಿಗೆ ವರದಾನವಾಗಲಿದೆ' ಎಂದು ಕುಲಪತಿ ತಿಳಿಸಿದರು.

ಸುದ್ದಿ 2 ನಿಮಿಷ

700 ಗ್ರಾಂ ಅಫೀಮ್ ಸಹಿತ ಬಂಧನ

ಬೆಂಗಳೂರು: ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಅಂತರರಾಜ್ಯ ಆರೋಪಿಯೊಬ್ಬನನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿ 700 ಗ್ರಾಂ ಅಫೀಮ್ ವಶಪಡಿಸಿಕೊಂಡಿದ್ದಾರೆ.

ರಾಜಸ್ಥಾನದ ಆರೋಪಿಯು ಐದು ವರ್ಷಗಳ ಹಿಂದೆ ಉದ್ಯೋಗ ಅರಸಿಕೊಂಡು ಬೆಂಗಳೂರಿಗೆ ಬಂದು, ಎಲೆಕ್ಟ್ರಿಕಲ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ. ನಂತರದ ದಿನಗಳಲ್ಲಿ ಮಾದಕ ವಸ್ತು ಮಾರಾಟದಲ್ಲಿ ತೊಡಗಿರುವುದು ತನಿಖೆಯಿಂದ ಗೊತ್ತಾಗಿದೆ.

ಮೇ 29ರಂದು ಬೆಳಿಗ್ಗೆ 11 ಗಂಟೆ ಸುಮಾರಿನಲ್ಲಿ ಇನ್‌ಸ್ಪೆಕ್ಟರ್ ಚಂದ್ರಶೇಖರ್ ಗಸ್ತಿನಲ್ಲಿದ್ದಾಗ ಮಲ್ಲೇಶ್ವರದ 18ನೇ ಅಡ್ಡರಸ್ತೆಯ ಆಟದ ಮೈದಾನದ ಬಳಿ ವ್ಯಕ್ತಿಯೊಬ್ಬ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಮಾಹಿತಿ ಲಭಿಸಿದೆ. ತಕ್ಷಣ ಸಿಬ್ಬಂದಿ ಜೊತೆ ಸ್ಥಳಕ್ಕೆ ತೆರಳಿದ ಸಬ್ ಇನ್‌ಸ್ಪೆಕ್ಟರ್, ಆರೋಪಿಯನ್ನು ಬಂಧಿಸಿ 200 ಗ್ರಾಂ ಅಫೀಮ್ ವಶಪಡಿಸಿಕೊಂಡಿದ್ದರು.

ಬಂಧಿತನನ್ನು ಹೆಚ್ಚಿನ ವಿಚಾರಣೆಗೆ ನಡೆಸಿದಾಗ ಆತನ ಮನೆಯಲ್ಲಿ ಇನ್ನೂ ಹೆಚ್ಚಿನ ಮಾದಕವಸ್ತು ಇಟ್ಟಿರುವುದಾಗಿ ತಿಳಿಸಿದ್ದ. ಅದರಂತೆ ಆರೋಪಿಯ ಮನೆ ಪರಿಶೀಲಿಸಿ ಮತ್ತೆ 500 ಗ್ರಾಂ ವಶಪಡಿಸಿಕೊಳ್ಳಲಾಗಿದೆ. ರಾಜಸ್ಥಾನಕ್ಕೆ ಹೋದಾಗ ರೈಲಿನ ಮೂಲಕ ಅಫೀಮ್ ತಂದು ಮಾರಾಟ ಮಾಡುತ್ತಿದ್ದುದು ಗೊತ್ತಾಗಿದೆ.

ಬೆಂಗಳೂರಿನ ಐವರು ದರೋಡೆಕೋರರ ಬಂಧನ



ಕನಕಪುರ: ರಾತ್ರಿ ಕಾರು ಅಡ್ಡಗಟ್ಟಿ ಹಲ್ಲೆ ನಡೆಸಿ, ಸುಲಿಗೆ ಮಾಡಿ ಪರಾರಿಯಾಗಿದ್ದ ಆರೋಪಿಗಳನ್ನು ಕಗ್ಗಲಿಪುರ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬೆಂಗಳೂರು ಹೊಸಕೆರೆಹಳ್ಳಿ ನಿವಾಸಿಗಳಾದ ಶೇಷಾದ್ರಿ (25), ಪಿಇಎಸ್ ಕಾಲೇಜ್ ಸಮೀಪದ ದೀಕ್ಷಿತ್ (18), ದತ್ತಾತ್ರಯನಗರದ ಅರುಣ್‌ಕುಮಾರ್ (21), ಆವಲಳ್ಳಿ ಬಿಡಿಎ ಹತ್ತಿರದ ಶ್ರೀನಾಥ್ (23), ಟಿಂಬರ್ ಯಾರ್ಡ್ ಲೇಔಟ್ ಕಸ್ತೂರಿನಗರದ ನಿಖಿಲ್ (24) ಬಂಧಿತ ಆರೋಪಿಗಳು.

ಮೇ 29ರಂದು ರಾತ್ರಿ 12-30ಕ್ಕೆ ನೈಸ್ ರಸ್ತೆಗೆ ಸಂಪರ್ಕಿಸುವ ಅಗರ ಕೆರೆಯ ಬಳಿ ಕಾರು ಅಡ್ಡಗಟ್ಟಿದ್ದ ಆರೋಪಿಗಳು ಕಾರು ಮತ್ತು ಮೊಬೈಲ್ ಹಾಗೂ ₹750 ನಗದನ್ನು ಸುಲಿಗೆ ಮಾಡಿ ಪರಾರಿಯಾಗಿದ್ದರು.

ಹಲ್ಲೆಗೊಳಗಾಗಿ ಕಾರು ಕಳೆದುಕೊಂಡಿದ್ದ ಸಂತ್ರಸ್ತ ನಿಶ್ಚಲ್ ಅವರು ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆರೋಪಿಗಳನ್ನು ಪತ್ತೆಹಚ್ಚಿದ ಪೊಲೀಸರು ಕಾರು, ಎರಡು ಸ್ಕೂಟರ್ ಹಾಗೂ ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಕೋಡಿಹಳ್ಳಿ ವಿರುದ್ಧ ಸಿಬಿಐ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧದ ಭ್ರಷ್ಟಾಚಾರದ ಆರೋಪದ ಬಗ್ಗೆ ತನಿಖೆಯನ್ನು ಸಿಬಿಐಗೆ ವಹಿಸಬೇಕು' ಎಂದು ಪ್ರೊ. ನಂಜುಂಡಸ್ವಾಮಿ ಸ್ಥಾಪಿತ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಅರಳಾಪುರ ಮಂಜೇಗೌಡ್ರು ಆಗ್ರಹಿಸಿದರು.

'ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನೌಕರರ ಹೋರಾಟದಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದಲ್ಲಿ ಯಾರು ಹಣ ನೀಡಿದ್ದಾರೆ. ಅದನ್ನು ಪಡೆದವರು ಯಾರು? ಹಣ ಯಾರ ಪಾಲಾಯಿತು ಎನ್ನುವುದು ಬಹಿರಂಗವಾಗಬೇಕಾಗಿದೆ. ರಾಜ್ಯ ರೈತ ಸಂಘದ ಮೇಲಿರುವ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು. ರೈತರಿಗೆ ನ್ಯಾಯ ಒದಗಿಸಬೇಕು' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'15 ದಿನಗಳ ಒಳಗೆ ಸರ್ಕಾರ ಈ ಪ್ರಕರಣವನ್ನು ಸಿಬಿಐಗೆ ವಹಿಸಿ ಸೂಕ್ತ ತನಿಖೆ ನಡೆಸಿ ತಪ್ಪಿಸ್ಥರನ್ನು ಬಂಧಿಸಿ ರಾಜ್ಯದಿಂದ ಗಡಿ ಪಾರು ಮಾಡಬೇಕು' ಎಂದು ಆಗ್ರಹಿಸಿದರು.

'ರಾಷ್ಟ್ರೀಯ ರೈತ ನಾಯಕರು ಗಾಂಧಿಭವನದಲ್ಲಿ ಸುದ್ದಿಗೋಷ್ಠಿ ನಡೆಸುತ್ತಿದ್ದ ಸಂದರ್ಭದಲ್ಲಿ ರಾಷ್ಟ್ರೀಯ ರೈತ ನಾಯಕ ರಾಕೇಶ್ ಟಿಕಾಯತ್ ಅವರ ಮೇಲೆ ಹಲ್ಲೆ ಮಾಡಿ ಮಸಿ ಎರಚಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಕೈಗೊಂಡು ಶಿಕ್ಷೆ ನೀಡಬೇಕು' ಎಂದು ಒತ್ತಾಯಿಸಿದರು.

ಅನಂತರಾಜು ಆತ್ಮಹತ್ಯೆ ಪ್ರಕರಣ • ಮತ್ತೊಂದು ಆಡಿಯೊ ವೈರಲ್

ಆರೋಪಿ ರೇಖಾ ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆರೋಹಳ್ಳಿ ವಾರ್ಡ್‌ನ ಬಿಜೆಪಿ ಮುಖಂಡ ಬಿ.ಪಿ. ಅನಂತರಾಜು (46) ಆತ್ಮಹತ್ಯೆ ಪ್ರಕರಣದಲ್ಲಿ ಆರೋಪಿಯಾಗಿರುವ ರೇಖಾ, ಈ ಪ್ರಕರಣದಲ್ಲಿ ತನಗೆ ನ್ಯಾಯ ಸಿಗುವುದಿಲ್ಲ ಎಂದು ಬ್ಯಾಡರಹಳ್ಳಿ ಪೊಲೀಸ್ ಠಾಣೆ ಮುಂಭಾಗದಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಅನಂತರಾಜು ಮೇ 12ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. 'ನನ್ನ ಗಂಡನ ಪ್ರೇಯಸಿ ಮತ್ತು ಆಕೆಯ ಸಹಚರರ ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿ ಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿ ಸುಮಾ ದೂರು ನೀಡಿದ್ದರು.

ದೂರಿನ ಮೇಲೆ ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುವ ವೇಳೆ, ರೇಖಾ ಮತ್ತು ಸುಮಾ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಕರೆಗಳ ಸಂಭಾಷಣೆ ಬಹಿರಂಗವಾಗಿತ್ತು. ಅದರ ಆಧಾರದಲ್ಲಿ ರೇಖಾ ಅವರನ್ನು ಬಂಧಿಸಿದ್ದ ಪೊಲೀಸರು, ಸುಮಾ ಅವರನ್ನು ಎರಡು ಬಾರಿ ವಿಚಾರಣೆ ನಡೆಸಿದ್ದರು. ಬಳಿಕ ರೇಖಾ ಜಾಮೀನಿನಲ್ಲಿ ಬಿಡುಗಡೆಯಾಗಿದ್ದರು.

ಇದೀಗ ಪೊಲೀಸರಿಗೆ ದೂರು ನೀಡಿರುವ ರೇಖಾ, 'ನನ್ನ ಮತ್ತು ಮಕ್ಕಳಿಗೆ ಜೀವಬೆದರಿಕೆ ಇದೆ. ಅನಂತರಾಜು ಆತ್ಮಹತ್ಯೆ ನೋವು ತಂದಿದೆ. ನಾನು ಹನಿಟ್ರ್ಯಾಪ್ ಮಾಡಿಲ್ಲ. ಹಣಕ್ಕೆ ಬೇಡಿಕೆ ಇಟ್ಟಿಲ್ಲ. ಆರು ವರ್ಷದಿಂದ ನಾನು ಮತ್ತು ಅನಂತರಾಜು ಪರಸ್ಪರ ಇಚ್ಛೆಯಿಂದ ಜೊತೆಗಿದ್ದೆವು. ಸುಮಾಳ ಕಿರುಕುಳದಿಂದಲೇ ಅನಂತರಾಜು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಈ ಹಿಂದೆಯೂ ಆತ್ಮಹತ್ಯೆಗೆ ಯತ್ನಿಸಿದ್ದರು. ಈ ವೇಳೆ ಬಲವಂತವಾಗಿ ಮರಣಪತ್ರ ಬರೆಸಿಕೊಂಡಿದ್ದಾರೆ' ಎಂದು ರೇಖಾ ದೂರಿದ್ದಾರೆ.

'ನಾನು ಸಾಮಾನ್ಯ ಮಹಿಳೆ. ನನಗೆ ದಿನೇ ದಿನೇ ಕಿರುಕುಳ ಹೆಚ್ಚುತ್ತಿದೆ. ನಾನು ಸುಮಾ ವಿರುದ್ಧ ದೂರು ನೀಡುತ್ತೇನೆ. ನಾನು ಯಾವುದೇ ತನಿಖೆಗೂ ಸಿದ್ಧ. ಮುಖ್ಯಮಂತ್ರಿ, ಗೃಹಸಚಿವರು ನನಗೆ ನ್ಯಾಯ ಕೊಡಿಸಬೇಕು. ನನ್ನಲ್ಲಿರುವ ಎಲ್ಲ ಆಡಿಯೊಗಳನ್ನು ಪೊಲೀಸರಿಗೆ ಕೊಟ್ಟಿದ್ದೇನೆ' ಎಂದಿದ್ದಾರೆ.

ಮತ್ತೊಂದು ಆಡಿಯೊ ಬಹಿರಂಗ

ಅನಂತರಾಜು ಪತ್ನಿ ಸುಮಾ ಮತ್ತು ಗೆಳತಿ ಕೆ.ಆರ್. ಪುರದ ರೇಖಾ ನಡುವೆ ನಡೆದ ಮಾತುಕತೆಯ ಮತ್ತೊಂದು ಆಡಿಯೊ ಬಹಿರಂಗವಾಗಿದೆ. 'ಮನೆಯಲ್ಲಿ ನಿನ್ನ ಮೇಲೆ ಬರೆದಿರುವ ಮರಣಪತ್ರ ಇದೆ. ಯಾವಾಗ ಬೇಕಾದರೂ ಕೇಸ್ ಮಾಡಬಹುದು' ಎಂದು ಮರಣಪತ್ರ ಇಟ್ಟುಕೊಂಡು ರೇಖಾ ಅವರಿಗೆ ಸುಮಾ ಬೆದರಿಕೆ ಒಡ್ಡಿರುವುದು ಆಡಿಯೊದಲ್ಲಿದೆ ಎನ್ನಲಾಗಿದೆ.

ಅಪರಾಧ ಸುದ್ದಿ

'ಅತ್ಯಾಚಾರ ಪ್ರಕರಣದಲ್ಲೂ ರಾಜಿ ಮಾನ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತ್ಯಾಚಾರ ಆರೋಪ ಪ್ರಕರಣದಲ್ಲಿ ದೂರುದಾರ ಮಹಿಳೆ ಮತ್ತು ಆರೋಪಿಗಳ ನಡುವೆ ರಾಜಿಯಾದರೆ ವಿಚಾರಣೆ ಮುಕ್ತಾಯಗೊಳಿಸಬಹುದು' ಎಂದು ಹೈಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.



ತಮ್ಮ ಕುಟುಂಬದ ಸದಸ್ಯರ ವಿರುದ್ಧ ಮಹಿಳೆಯೊಬ್ಬರು ದಾಖಲಿಸಿದ್ದ ಅತ್ಯಾಚಾರ ಆರೋಪ ಪ್ರಕರಣವನ್ನು ರದ್ದುಪಡಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ದೂರುದಾರಳು ವಿವಾಹಿತೆಯಾಗಿದ್ದು, ಗಂಡನ ಜೊತೆಗೆ ದಾಂಪತ್ಯ ಜೀವನ ನಡೆಸುತ್ತಿದ್ದಾರೆ. ಆರೋಪಿಗಳು ದೂರುದಾರಳ ಕುಟುಂಬದ ಸದಸ್ಯರೇ ಆಗಿದ್ದು, ಆರೋಪಿಗಳು ಮತ್ತು ದೂರುದಾರರು ರಾಜಿಯಾಗಲು ಸಲ್ಲಿಸಿರುವ ಜ್ಞಾಪನಾ ಪತ್ರವನ್ನು (ಮೆಮೊ) ಪರಿಗಣಿಸಬಹುದಾಗಿದೆ' ಎಂದು ಹೇಳಿದೆ.

'ಅತ್ಯಾಚಾರ ಪ್ರಕರಣದಲ್ಲಿ ಉಭಯ ಪಕ್ಷದವರು ರಾಜಿಯಾಗಲು ಒಪ್ಪಿದ ಸಂದರ್ಭದಲ್ಲಿ ಆ ಪ್ರಕರಣವನ್ನು ನ್ಯಾಯಾಲಯ ಮುಕ್ತಾಯಗೊಳಿಸಲು ಕಾನೂನಿನಲ್ಲಿ ಅವಕಾಶವಿದೆ. ಆದ್ದರಿಂದ, ಅರ್ಜಿದಾರರ ವಿರುದ್ಧದ ಪ್ರಕರಣವನ್ನು ರದ್ದುಪಡಿಸಲಾಗಿದೆ' ಎಂದು ನ್ಯಾಯಪೀಠ ಆದೇಶಿಸಿದೆ.

'ನನ್ನ ಮೇಲೆ ಅತ್ಯಾಚಾರ ನಡೆಸಲಾಗಿದೆ, ಜೀವಕ್ಕೆ ಬೆದರಿಕೆ ಉಂಟು ಮಾಡಿ ಅವಮಾನ ಪಡಿಸಲಾಗಿದೆ ಮತ್ತು ಹಣ ವಸೂಲಿ ಮಾಡಲಾಗಿದೆ' ಎಂದು ಆರೋಪಿಸಿ ನಗರದ 34 ವರ್ಷದ ಮಹಿಳೆಯೊಬ್ಬರು ತಮ್ಮ ಕುಟುಂಬದ ಇಬ್ಬರು ಪುರುಷರು ಹಾಗೂ ಇಬ್ಬರು ಮಹಿಳೆಯರ ವಿರುದ್ಧ 2022ರ ಫೆಬ್ರುವರಿ 16ರಂದು ಪೊಲೀಸರಿಗೆ ದೂರು ನೀಡಿದ್ದರು. ಈ ದೂರಿನ ಅನುಸಾರ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಆರೋಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ವಿಚಾರಣೆ ವೇಳೆ ಎಲ್ಲ ಆರೋಪಿಗಳು ಮತ್ತು ದೂರುದಾರ ಮಹಿಳೆ ಹೈಕೋರ್ಟ್‌ಗೆ ಹಾಜರಾಗಿ, 'ಪ್ರಕರಣವನ್ನು ರಾಜಿ ಮೂಲಕ ಮುಕ್ತಾಯಗೊಳಿಸಲು ಉದ್ದೇಶಿಸಿದ್ದೇವೆ' ಎಂಬ ಜಂಟಿ ಮೆಮೊ ಸಲ್ಲಿಸಿದರು. ಅದನ್ನು ಮಾನ್ಯ ಮಾಡಿದ ನ್ಯಾಯಪೀಠ ಪ್ರಕರಣವನ್ನು ವಿಲೇವಾರಿ ಮಾಡಿದೆ. ಆರೋಪಿಗಳ ಪರ ಡಿ.ಮೋಹನಕುಮಾರ್ ಹಾಗೂ ದೂರುದಾರ ಮಹಿಳೆಯ ಪರ ಕೆ.ರಾಘವೇಂದ್ರಗೌಡ ಹಾಜರಾಗಿದ್ದರು.

ಅಂತರರಾಷ್ಟ್ರೀಯ ಕರೆ ಸ್ಥಳೀಯ ಕರೆಯಾಗಿ ಪರಿವರ್ತಿಸಿ ವಂಚನೆ

ಆರು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಕರೆಗಳನ್ನು ಸ್ಥಳೀಯ ಕರೆಗಳನ್ನಾಗಿ ಪರಿವರ್ತಿಸಿ ದೂರ ಸಂಪರ್ಕ ಇಲಾಖೆಗೆ ಮತ್ತು ಸರ್ಕಾರಕ್ಕೆ ಲಕ್ಷಾಂತರ ವಂಚಿಸಿದ ಮತ್ತು ಮಧ್ಯಪ್ರಾಚ್ಯ ದೇಶಗಳಿಂದ ಅನಾಮಧೇಯ ಕರೆ ಮಾಡಿ ಜೀವ ಬೆದರಿಕೆವೊಡ್ಡಿದ ಆರೋಪದಲ್ಲಿ ಆರು ಮಂದಿಯನ್ನು ಸಿಸಿಬಿ ಆರ್ಥಿಕ ಅಪರಾಧ ದಳದ ಪೊಲೀಸರು ಬಂಧಿಸಿದ್ದಾರೆ.

ಕೇರಳದ ದುಬೇರ್, ಮನು, ಇಸ್ಮಾಯಿಲ್ ಅಬ್ದುಲ್ಲ, ಜೋಹಾರ್ ಶರೀಫ್, ಸಾಹಿರ್ ಮತ್ತು ಬೆಂಗಳೂರಿನ ರವಿ ಚಂದ್ರನ್ ಬಂಧಿತರು. ಆರೋಪಿಗಳಿಂದ ಕರೆ ಪರಿವರ್ತನೆಗೆ ಬಳಸುವ ಅತ್ಯಾಧುನಿಕ ಸಾಧನಗಳಾದ 16 ಸಿಮ್‌ಬಾಕ್ಸ್, 2 ಎಸ್‌ಐಪಿ ಟ್ರಂಕ್‌ಕಾಲ್ ಡಿವೈಸ್, 9 ಪ್ರೈಮರಿ ರೇಟ್ ಇಂಟರ್‌ಫೇಸ್, 5 ಲ್ಯಾಪ್‌ಟಾಪ್, 2 ಡೆಸ್ಕ್‌ಟಾಪ್, 9 ಮೊಬೈಲ್, 6 ವೈ-ಫೈ ರೂಟರ್, ಬಿಎಸ್‌ಎನ್‌ಎಲ್‌ಗೆ ಸೇರಿದ 205 ಸಿಮ್ ಕಾರ್ಡ್ ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳಲ್ಲಿ ಪ್ರಮುಖರು ಕೇರಳದವರಾಗಿದ್ದು, ಸ್ಥಳೀಯರ ಸಹಕಾರ ಪಡೆದು ಬೆಂಗಳೂರಿನ ಚಿಕ್ಕಸಂದ್ರ, ಹೆಸರಘಟ್ಟ ಮುಖ್ಯರಸ್ತೆ ಬಳಿ ಬಾಡಿಗೆ ಮನೆ ಪಡೆದು ಕಾರ್ಯಾಚರಣೆ ನಡೆಸುತ್ತಿದ್ದರು. ಬೆಂಗಳೂರು ಮತ್ತು ಕೇರಳ ರಾಜ್ಯದ ವಿವಿಧೆಡೆ ಸೇರಿ ಐದು ಕಡೆಗಳಲ್ಲಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಕೇರಳ ಮೂಲದ ಆರೋಪಿಗಳು ಸ್ಥಳೀಯ ವ್ಯಕ್ತಿಗಳ ಜತೆ ಸೇರಿಕೊಂಡು ಮಹಾದೇವಪುರದಲ್ಲಿ ಕಾಲ್‌ಸೆಂಟರ್‌ಗಳಿಗೆ ನೀಡಲಾಗುವ ಏರ್‌ಟೆಲ್‌ನ ಎಸ್‌ಐಪಿ ಟ್ರಂಕ್‌ಕಾಲ್ ಡಿವೈಸ್‌ಗಳನ್ನು ಪಡೆದುಕೊಂಡಿದ್ದರು. ಐಕಾನ್ ಟೂರ್ಸ್ ಆ್ಯಂಡ್ ಟ್ರಾವೆಲ್ಸ್ ಕಂಪನಿ ಹೆಸರಿನಲ್ಲಿ ದಾಖಲೆಗಳನ್ನು ಸೃಷ್ಟಿಸಿ, ಏರ್‌ಟೆಲ್ ಕಂಪನಿಯ 180 ಪೋರ್ಟ್‌ಗಳಿರುವ ಸ್ಥಿರ ದೂರವಾಣಿ ಪಡೆದುಕೊಂಡು ವಾಯ್ಸ್ ಓವರ್ ಇಂಟರ್‌ನೆಟ್ ಪ್ರೊಟೋಕಾಲ್ ಕರೆಗಳನ್ನು ಜಿಎಸ್‌ಎಂ ಕರೆಗಳನ್ನಾಗಿ ಪರಿವರ್ತಿಸುತ್ತಿದ್ದರು.

ಮಧ್ಯಪ್ರಾಚ್ಯ ದೇಶಗಳಿಂದ ಬರುವ ಟೆಲಿಫೋನ್ ಕರೆಗಳನ್ನು ಸಿಮ್‌ಬಾಕ್ಸ್ ಡಿವೈಸ್, ಪಿಆರ್‌ಐ ಮತ್ತು ಎಸ್‌ಐಪಿ ಟ್ರಂಕ್‌ಕಾಲ್ ಸಾಧನಗಳನ್ನು ಬಳಸಿ ಆರೋಪಿಗಳು ಸ್ಥಳೀಯ ಕರೆಗಳನ್ನಾಗಿ ಪರಿವರ್ತಿಸುತ್ತಿದ್ದರು. ಅತ್ಯಾಧುನಿಕ ವ್ಯವಸ್ಥೆಯಾಗಿದ್ದರಿಂದ ಕರೆಗಳು ಎಲ್ಲಿಂದ ಬರುತ್ತವೆ ಎಂಬುದನ್ನು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ಆರೋಪಿಗಳು ಉತ್ತರಪ್ರದೇಶ, ಮಧ್ಯಪ್ರದೇಶ, ಪಶ್ಚಿಮಬಂಗಾಳ ಸೇರಿದಂತೆ ವಿವಿಧ ರಾಜ್ಯಗಳಿಂದ ಬಿಎಸ್‌ಎನ್‌ಎಲ್ ಸಿಮ್ ಕಾರ್ಡ್ ಖರೀದಿಸಿದ್ದರು. ಸಿಮ್‌ಬಾಕ್ಸ್ ಉಪಕರಣಗಳಿಗೆ ಅದನ್ನು ಅಳವಡಿಸಿ ಎಕ್ಸಿಟೆಲ್ ಕಂಪನಿಯ ಇಂಟರ್‌ನೆಟ್ ಬಳಸಿ ಕರೆಗಳನ್ನು ಅಕ್ರಮವಾಗಿ ಪರಿವರ್ತಿಸಲಾಗುತ್ತಿತ್ತು. ಹೀಗಾಗಿ, ಆರೋಪಿಗಳ ಕೃತ್ಯವನ್ನು ಪತ್ತೆ ಮಾಡುವುದೂ ಸವಾಲಿನ ಕೆಲಸವಾಗಿತ್ತು.

'ವಾಯ್ಸ್ ಓವರ್ ಇಂಟರ್‌ನೆಟ್ ಪ್ರೊಟೋಕಾಲ್ ಮೂಲಕ ಬರುವ ಅಂತರರಾಷ್ಟ್ರೀಯ ಕರೆಗಳ ಸಂಖ್ಯೆಗಳನ್ನು ಪತ್ತೆ ಮಾಡುವುದು ಮತ್ತು ಸ್ಥಳ ಗುರುತಿಸುವುದು ಕಷ್ಟದ ಕೆಲಸವಾಗಿದೆ. ಕರೆ ಸ್ವೀಕರಿಸಿದವರಿಗೆ ಸ್ಥಳೀಯ ಮೊಬೈಲ್ ನಂಬರ್ ಕಾಣುತ್ತವೆ. ಆದರೆ, ಅವುಗಳ ನಿರ್ದಿಷ್ಟ ವಿಳಾಸ ಮತ್ತು ಕರಾರುವಕ್ಕಾದ ಸ್ಥಳ ಲಭ್ಯವಾಗುವುದಿಲ್ಲ. ಈ ಕರೆಗಳು ಯಾವುದೇ ನಿಯಂತ್ರಣಕ್ಕೂ ಒಳಪಟ್ಟಿರುವುದಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಗಳಿಂದ ಬೆದರಿಕೆ

ಮಧ್ಯಪ್ರಾಚ್ಯ ದೇಶಗಳಿಂದ ಅನಾಮಧೇಯ ವ್ಯಕ್ತಿಯ ಹೆಸರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ನೆಟ್ಟಣಿಗೆಮಡ್ನೂರು ಗ್ರಾಮದ ಎಂ. ಚಂದ್ರಹಾಸ ಎಂಬುವವರಿಗೆ ಕರೆ ಮಾಡಿದ್ದ ಆರೋಪಿಗಳು, 'ಶರತ್ ಮಡಿವಾಳನ ಹೆಣ ಬಿದ್ದ ಹಾಗೆ ನಾಳೆ ಸಂಜೆಯೊಳಗೆ ನಿನ್ನ ಹೆಣವೂ ಬೀಳಲಿದೆ ಎಂದು ಬೆದರಿಕೆ ಹಾಕಿದ್ದರು. ಈ ಬಗ್ಗೆ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಕ್ರಮ ಕರೆಗಳ ಜಾಲ ಭೇದಿಸಿರುವ ಪೊಲೀಸರು, ಈ ಅನಾಮಧೇಯ ಕರೆಯ ಮೂಲದ ತನಿಖೆ ಮುಂದುವರಿಸಿದ್ದಾರೆ.

ಶಾಸಕ ಗೌರಿಶಂಕರ್ ವಿರುದ್ಧದ ಅರ್ಜಿ ವಿಚಾರಣೆ ಆರಂಭ

ಬೆಂಗಳೂರು: ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಶಾಸಕ ಡಿ.ಸಿ. ಗೌರಿಶಂಕರ್ ಆಯ್ಕೆಯನ್ನು ಅಸಿಂಧುಗೊಳಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಆರಂಭಿಸಿದೆ.

ಈ ಸಂಬಂಧ ಪರಾಜಿತ ಅಭ್ಯರ್ಥಿ ಬಿ.ಸುರೇಶ್ ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆಗೆ ಕೈಗೆತ್ತಿಕೊಂಡಿದೆ. ಸುರೇಶ್ ಗೌಡ ಪರ ಹಿರಿಯ ವಕೀಲೆ ನಳಿನಾ ಮಾಯೇಗೌಡ ವಾದ ಮಂಡನೆ ಆರಂಭಿಸಿದ್ದು, ಮುಂದಿನ ವಿಚಾರಣೆಯನ್ನು ಇದೇ 6ಕ್ಕೆ ನಿಗದಿಗೊಳಿಸಲಾಗಿದೆ.

ಕೋರಿಕೆ ಏನು?: '2018ರ ಸಾರ್ವತ್ರಿಕ ಚುನಾವಣೆಯಲ್ಲಿ ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಗೌರಿಶಂಕರ್ ವ್ಯಾಪಕ ಚುನಾವಣಾ ಅಕ್ರಮ ಎಸಗಿ ಆಯ್ಕೆಯಾಗಿದ್ದಾರೆ. ಪ್ರಜಾಪ್ರತಿನಿಧಿ ಕಾಯ್ದೆ 123 ಅನ್ನು ಉಲ್ಲಂಘಿಸಿದ್ದಾರೆ. ನಾಮಪತ್ರ ಸಲ್ಲಿಕೆ ನಂತರ ಮತದಾರರಿಗೆ ಮತಯಾಚನೆ ಪತ್ರದ ಜೊತೆ ಗುಂಪು ಆರೋಗ್ಯ ವಿಮಾ ಪಾಲಿಸಿಯ ಆಮಿಷವೊಡ್ಡಿ ಅವರಿಂದ ಮತಗಳನ್ನು ಪಡೆದು ಆರಿಸಿ ಬಂದಿದ್ದಾರೆ. ಹಾಗಾಗಿ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಆಸ್ಪತ್ರೆಯ ಚಾವಣಿ ಕುಸಿತ: ಮುಂದುವರಿದ ವಿಚಾರಣೆ

ಬೆಂಗಳೂರು: ನೃಪತುಂಗ ರಸ್ತೆಯಲ್ಲಿರುವ ಸೇಂಟ್ ಮಾರ್ಥಾಸ್ ಆಸ್ಪತ್ರೆಯ ಹಳೆ ಕಟ್ಟಡಕ್ಕೆ ಹೊಂದಿಕೊಂಡು ನಿರ್ಮಿಸಲಾಗುತ್ತಿದ್ದ ಸೇತುವೆ (ಚಾವಣಿ) ಕುಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಾಮಗಾರಿ ಉಸ್ತುವಾರಿ ವಹಿಸಿದ್ದ ಎಂಜಿನಿಯರ್, ಆಸ್ಪತ್ರೆಯ ಆಡಳಿತ ಮಂಡಳಿಯ ಅಧಿಕಾರಿಗಳನ್ನು ಹಲಸೂರು ಗೇಟ್ ಠಾಣೆ ಪೊಲೀಸರು ವಿಚಾರಣೆ ನಡೆಸಿದರು.

ಚಾವಣಿ ವಿನ್ಯಾಸ ಮಾಡಿದ್ದ ಎಂಜಿನಿಯರ್, ಆಸ್ಪತ್ರೆಯ ಆಡಳಿತ ಮಂಡಳಿಯ ಅಧಿಕಾರಿಗಳು ಮತ್ತು ಘಟನೆ ವೇಳೆ ಸ್ಥಳದಲ್ಲಿದ್ದ ಭದ್ರತಾ ಸಿಬ್ಬಂದಿಯನ್ನು ಪೊಲೀಸರು ವಿಚಾರಣೆ ನಡೆಸಿ ಮಾಹಿತಿ ಕಲೆ ಹಾಕಿದರು. ಅಲ್ಲದೆ, ಘಟನೆಯಲ್ಲಿ ಗಾಯಗೊಂಡವರ ಹೇಳಿಕೆಯನ್ನೂ ದಾಖಲಿಸಿಕೊಂಡರು.

ನಿರ್ಮಾಣಕ್ಕೆ ಬಳಸಿದ್ದ ಸಾಮಗ್ರಿಗಳು, ಯಾವ ಗುಣಮಟ್ಟದ ಸಿಮೆಂಟ್ ಬಳಸಲಾಗಿದೆ? ಮುಂತಾದ ವಿಚಾರಗಳ ಕುರಿತು ಕೂಡಾ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

ಅಶ್ಲೀಲ ಫೋಟೊ, ವಿಡಿಯೊ: ಒಬ್ಬನ ಬಂಧನ

ಬೆಂಗಳೂರು: ಫೇಸ್‌ಬುಕ್ ಮೂಲಕ ಅಶ್ಲೀಲ ಫೋಟೊ, ವಿಡಿಯೊಗಳನ್ನು ಕಳುಹಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಆಗ್ನೇಯ ವಿಭಾಗದ ಸಿಇಎನ್ (ಸೈಬರ್, ಎಕನಾಮಿಕ್ಸ್ ಆ್ಯಂಡ್ ನಾರ್ಕೋಟಿಕ್) ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಡಿವಾಳದ ಜೈಭೀಮ್‌ನಗರ ನಿವಾಸಿ 40 ವರ್ಷದ ಫುಡ್ ಡೆಲಿವರಿ ಬಾಯ್‌ನನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ ಮೊಬೈಲ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಆರೋಪಿ ತನ್ನ ಫೇಸ್‌ಬುಕ್ ಖಾತೆಯಿಂದ ದೇಶ ಹಾಗೂ ವಿದೇಶದ ಮಹಿಳೆಯರಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿ, ಬಳಿಕ ಲೈಂಗಿಕ ಉತ್ತೇಜನ ನೀಡುವ ಫೋಟೊ, ವಿಡಿಯೊ ಕಳುಹಿಸಿದ್ದ ವಿಚಾರ ವಿಚಾರಣೆ ವೇಳೆ ಗೊತ್ತಾಗಿದೆ. ಆಗ್ನೇಯ ವಿಭಾಗದ ಸಿಇಎನ್ ಠಾಣೆ ಇನ್‌ಸ್ಪೆಕ್ಟರ್ ಯೋಗೇಶ್ ನೇತೃತ್ವದ ತಂಡ ಆರೋಪಿಯನ್ನು ಬಂಧಿಸಿ, ತನಿಖೆ ಕೈಗೊಂಡಿದೆ.

ಕ್ರಮ: ಫೇಸ್‌ಬುಕ್, ಇನ್ಸ್ಟಾಗ್ರಾಂ, ಟ್ವಿಟರ್ ಮತ್ತು ಇತರ ಸಾಮಾಜಿಕ ಜಾಲತಾಣಗಳಲ್ಲಿ ನಗ್ನ ಫೋಟೊ ಮತ್ತು ವಿಡಿಯೊಗಳನ್ನು ಕಳುಹಿಸುವ ವ್ಯಕ್ತಿಗಳ ವಿರುದ್ಧ ಕಾನೂನು ರೀತಿ ಕ್ರಮಕ್ಕೆ ಗೊಳ್ಳಲಾಗುವುದು ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಕ್ಯಾನ್ಸರ್ ತಜ್ಞ ಡಾ. ರಮೇಶ್ ಬಿಳಿಮಗ್ಗ ಆಗ್ರಹ • ವಿಶ್ವ ತಂಬಾಕು ರಹಿತ ದಿನ ಆಚರಣೆ

'ತಂಬಾಕು ಉತ್ಪನ್ನ: ಕೋಟ್ಪಾ ಕಾಯ್ದೆ ಬಲಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂಬಾಕು ಉತ್ಪನ್ನಗಳ ಸೇವನೆಗೆ ಕಡಿವಾಣ ಹಾಕಲು ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ (ಕೋಟ್ಪಾ) ಕಾಯ್ದೆಯನ್ನು ಬಲಪಡಿಸಿ, ದಂಡ ಹೆಚ್ಚಿಸಬೇಕು. ಸಾರ್ವಜನಿಕ ಸ್ಥಳಗಳನ್ನು ಧೂಮಪಾನ ಮುಕ್ತಗೊಳಿಸಬೇಕು' ಎಂದು ಕ್ಯಾನ್ಸರ್ ತಜ್ಞ ಡಾ. ರಮೇಶ್ ಬಿಳಿಮಗ್ಗ ಆಗ್ರಹಿಸಿದರು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಸಹಯೋಗದಲ್ಲಿ ತಂಬಾಕು ಮುಕ್ತ ಕರ್ನಾಟಕ ವೇದಿಕೆ ನಗರದಲ್ಲಿ ಮಂಗಳವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಸಿಗರೇಟ್ ಮತ್ತು ಬೀಡಿ ತುಂಡುಗಳನ್ನು ಪ್ರದರ್ಶಿಸಿ, ವಿಶ್ವ ತಂಬಾಕು ರಹಿತ ದಿನ ಆಚರಿಸಲಾಯಿತು.

'ಪ್ರಸ್ತುತ ಕೋಟ್ಪಾ ಕಾಯ್ದೆಯಡಿ ವಿಧಿಸುತ್ತಿರುವ ದಂಡ ತೀರಾ ಕಡಿಮೆ. ಈ ಕಾಯ್ದೆಯು ಕಠಿಣವಾಗಿಲ್ಲ. ತಂಬಾಕು ನಿಯಂತ್ರಣಕ್ಕೆ ಸಂಬಂಧಿಸಿದ ಎಲ್ಲ ಆಯಾಮಗಳನ್ನು ಒಳಗೊಂಡಿಲ್ಲ. ಸಾರ್ವಜನಿಕ ಸ್ಥಳಗಳು ಧೂಮಪಾನದ ಹೊಗೆಯಿಂದ ಶೇ 100 ರಷ್ಟು ಮುಕ್ತವಾಗಬೇಕು. ಸದ್ಯ ಸಾರ್ವಜನಿಕ ಸ್ಥಳಗಳಲ್ಲಿ ವ್ಯಾಪಕವಾಗಿ ಧೂಮಪಾನ ಮಾಡಲಾಗುತ್ತಿದೆ. ಕೋಟ್ಪಾ ಕಾಯ್ದೆಯನ್ನು ಬಲಪಡಿಸಲು ರಾಜ್ಯದ ಎಲ್ಲ ಸಂಸದರು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಬೇಕು' ಎಂದು ತಿಳಿಸಿದರು.



ಸಂಗ್ರಹಿಸಿದ ಸಿಗರೇಟ್ ಮತ್ತು ಬೀಡಿ ತುಂಡುಗಳನ್ನು ವೈದ್ಯಕೀಯ ವಿದ್ಯಾರ್ಥಿಗಳು ವೀಕ್ಷಿಸಿದರು

'ಪರೋಕ್ಷ ಧೂಮಪಾನವೂ ನೇರ ಧೂಮಪಾನಕ್ಕೆ ಸಮಾನ. ಮಕ್ಕಳು, ಮಹಿಳೆಯರು ಮತ್ತು ವೃದ್ಧರು ಪರೋಕ್ಷ ಧೂಮಪಾನದಿಂದ ಹೆಚ್ಚಿನ ಸಮಸ್ಯೆ ಎದುರಿಸುತ್ತಿದ್ದಾರೆ. ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿ, ಧೂಮಪಾನಕ್ಕೆ ಕಡಿವಾಣ ಹಾಕಬೇಕು' ಎಂದು ಆಗ್ರಹಿಸಿದರು.

ಸಂಸದ ಪಿ.ಸಿ.ಮೋಹನ್,'ಆರೋಗ್ಯಕ್ಕೆ ಹಾನಿಕಾರಕವಾದ ತಂಬಾಕು ಉತ್ಪನ್ನಗಳಿಂದ ಯುವಜನರು ದೂರ ಇರಬೇಕು. ಪರೋಕ್ಷ ಧೂಮಪಾನ ತಗ್ಗಿಸುವುದು ನಮ್ಮೆಲ್ಲರ ಹೊಣೆ. ಸಮಾಜದ ಹಿತದೃಷ್ಟಿಯಿಂದ ಕೋಟ್ಪಾ ಕಾಯ್ದೆಗೆ ತಿದ್ದುಪಡಿ ತರಬೇಕು' ಎಂದು ತಿಳಿಸಿದರು.

ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯ ಕಾರ್ಯಕಾರಿ ಅಧ್ಯಕ್ಷ ಡಾ.ಬಿ.ಎಸ್. ಅಜಯ್‌ಕುಮಾರ್, 'ತಂಬಾಕು ನಿರ್ಮೂಲನೆಯಿಂದ ಶೇ 30ರಿಂದ ಶೇ 35 ರಷ್ಟು ಕ್ಯಾನ್ಸರ್ ನಿಯಂತ್ರಣ ಸಾಧ್ಯ. ಇಡೀ ಸಮಾಜ ಒಗ್ಗೂಡಿ, ತಂಬಾಕು ಉತ್ಪನ್ನಗಳ ಬಳಕೆ ನಿಲ್ಲಿಸುವಂತೆ ಹೋರಾಟ ನಡೆಸಬೇಕು. ತಂಬಾಕು ಬೆಳೆಗಾರರಿಗೆ ಪರ್ಯಾಯ ಬೇಸಾಯ ಮಾಡಲು ಪ್ರೋತ್ಸಾಹಿಸಬೇಕು. ಎಚ್‌ಸಿಜಿ ಹುಣಸೂರಿನಲ್ಲಿ ಈ ಪ್ರಯತ್ನ ಪ್ರಾರಂಭಿಸಿದೆ' ಎಂದು ಹೇಳಿದರು.

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಶಾಸಕಿ ಸೌಮ್ಯಾ ರೆಡ್ಡಿ ಇದ್ದರು.

ಸಿಗರೇಟ್, ಬೀಡಿ ತುಂಡುಗಳ ಸಂಗ್ರಹ

ಧೂಮಪಾನದ ಅಪಾಯದ ಬಗ್ಗೆ ಜಾಗೃತಿ ಮೂಡಿಸಲು ತಂಬಾಕು ಮುಕ್ತ ಕರ್ನಾಟಕ ವೇದಿಕೆಯ ನೇತೃತ್ವದಲ್ಲಿ ವಿವಿಧ ಸಂಸ್ಥೆಗಳ ಸದಸ್ಯರು ಸಾವಿರಕ್ಕೂ ಅಧಿಕ ಸಿಗರೇಟ್ ಹಾಗೂ ಬೀಡಿ ತುಂಡುಗಳನ್ನು ಸಂಗ್ರಹಿಸಿದ್ದಾರೆ. ನಗರದ ವಿವಿಧ ಬಸ್ ನಿಲ್ದಾಣಗಳು, ಶಿಕ್ಷಣ ಸಂಸ್ಥೆಗಳು, ಉದ್ಯಾನಗಳು, ಸರ್ಕಾರಿ ಸಂಸ್ಥೆಗಳು, ಆಸ್ಪತ್ರೆಗಳು ಸೇರಿದಂತೆ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಈ ಸಿಗರೇಟ್ ಮತ್ತು ಬೀಡಿ ತುಂಡುಗಳು ಲಭ್ಯವಾಗಿವೆ. ಇವುಗಳ ಸುರಕ್ಷಿತ ವಿಲೇವಾರಿಗೆ ಸರ್ಕಾರೇತರ ಸಂಸ್ಥೆಯೊಂದಕ್ಕೆ ಕಾರ್ಯಕ್ರಮದಲ್ಲಿ ಹಸ್ತಾಂತರಿಸಲಾಯಿತು.

'ಏರೋಕಾನ್–2022'ಕ್ಕೆ ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ವೈಮಾಂತರಿಕ್ಷ ಸಮ್ಮೇಳನದ ಎರಡನೇ ಆವೃತ್ತಿ 'ಏರೋಕಾನ್–2022' ನಗರದಲ್ಲಿ ಜೂನ್ 2 ಮತ್ತು 3ರಂದು ನಡೆಯಲಿದೆ.

ಸೊಸೈಟಿ ಆಫ್ ಆಟೋಮೋಟಿವ್ ಎಂಜಿನಿಯರ್ಸ್ ಇಂಡಿಯಾ(ಎಸ್‌ಎಇ-ಇಂಡಿಯಾ) ಮತ್ತು ಎಸ್‌ಎಇ ಇಂಟರ್‌ನ್ಯಾಷನಲ್ ಸಹಯೋಗದಲ್ಲಿ ಈ ಸಮ್ಮೇಳನ ಆಯೋಜಿಸಲಾಗಿದೆ.

ವೈಮಾಂತರಿಕ್ಷ ಕ್ಷೇತ್ರದಲ್ಲಿನ ಸವಾಲುಗಳು, ಸಂಶೋಧನೆಗಳು ಮತ್ತು ಅವಕಾಶಗಳು ಕುರಿತು ತಜ್ಞರು ಸಮ್ಮೇಳನದಲ್ಲಿ ಚರ್ಚಿಸಲಿದ್ದಾರೆ. ವೈಮಾಂತರಿಕ್ಷ ವಲಯ ಮತ್ತು ರಕ್ಷಣಾ ಕ್ಷೇತ್ರದ ಭವಿಷ್ಯಕ್ಕಾಗಿ ಮಾರ್ಗಸೂಚಿಯನ್ನು ರೂಪಿಸಲು ಈ ಸಮ್ಮೇಳನ ವೇದಿಕೆಯಾಗಲಿದೆ. ಈ ಸಮ್ಮೇಳನದಲ್ಲಿ ಅತ್ಯುತ್ತಮ ಕೈಗಾರಿಕೆ, ಶೈಕ್ಷಣಿಕ ಮತ್ತು ಸಂಶೋಧನೆಯನ್ನು ಒಟ್ಟುಗೂಡಿಸುತ್ತದೆ.

ಮಾರತಹಳ್ಳಿಯ ದೊಡ್ಡನೆಕ್ಕುಂದಿ ಮುಖ್ಯ ರಸ್ತೆಯಲ್ಲಿರುವ ಎಚ್‌ಎಎಲ್ ಮ್ಯಾನೇಜ್‌ಮೆಂಟ್ ಅಕಾಡೆಮಿಯಲ್ಲಿ ಸಮ್ಮೇಳನ ನಡೆಯಲಿದೆ.

ಚಿತ್ರಾವಳಿ



ಆಡಳಿತದಲ್ಲಿ ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಬಳಸುತ್ತಿರುವ ಬಿಎಂಟಿಸಿ ಉಪಮುಖ್ಯ ಸಂಚಾರ ವ್ಯವಸ್ಥಾಪಕ(ಆಚರಣೆ) ವಿ.ನಾಗರಾಜ್ ಅವರಿಗೆ ಬಿಎಂಟಿಸಿ ಪ್ರಶಂಸನಾ ಪತ್ರ ನೀಡಿ ಗೌರವಿಸಿತು. ಬಿಎಂಟಿಸಿ ಉಪಾಧ್ಯಕ್ಷ ಎಂ.ಆರ್.ವೆಂಕಟೇಶ್, ಭದ್ರತಾ ಮತ್ತು ಜಾಗೃತ ವಿಭಾಗದ ನಿರ್ದೇಶಕಿ ರಾಧಿಕಾ ಅವರು ಪ್ರಶಂಸನಾ ಪತ್ರ ನೀಡಿದರು



ಭ್ರಷ್ಟರನ್ನು ತೊಲಗಿಸುವಂತೆ ಆಗ್ರಹಿಸಿ ಹಮ್ಮಿಕೊಂಡಿರುವ ಅಭಿಯಾನವನ್ನು ಬೆಂಬಲಿಸುವಂತೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ರಾಜ್ಯ ಘಟಕದ ಅಧ್ಯಕ್ಷ ರವಿಕೃಷ್ಣರೆಡ್ಡಿ ಅವರು ಬಿಬಿಎಂಪಿ ಆವರಣದಲ್ಲಿ ಸಾರ್ವಜನಿಕರಿಗೆ ಬುಧವಾರ ಕರಪತ್ರ ವಿತರಿಸಿದರು
–ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಶಾಸಕರು ಉದಯಪುರ ಹೋಟೆಲ್‌ಗೆ

ಜೈಪುರ (ಪಿಟಿಐ): ಇದೇ 10ರಂದು ನಡೆಯಲಿರುವ ರಾಜ್ಯಸಭೆ ಚುನಾವಣೆ ಹಿನ್ನೆಲೆಯಲ್ಲಿ ರಾಜಸ್ಥಾನದ ಪ್ರದೇಶ ಕಾಂಗ್ರೆಸ್ ಸಮಿತಿಯು ತನ್ನ ಶಾಸಕರನ್ನು ಉದಯಪುರದ ಹೋಟೆಲ್‌ಗೆ ಸ್ಥಳಾಂತರಿಸಲು ನಿರ್ಧರಿಸಿದೆ. ತನ್ನ ಶಾಸಕರನ್ನು ಬಿಜೆಪಿ ಅಪಹರಿಸಬಹುದು ಎಂಬ ಆತಂಕದಿಂದ ಈ ಕ್ರಮಕ್ಕೆ ಮುಂದಾಗಿರಬಹುದಾಗಿ ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಶಾಸಕರಿಗೆ ಉದಯಪುರಕ್ಕೆ ತಲುಪಲು ಸೂಚಿಸಲಾಗಿದೆ. ಕೆಲವರು ಗುರುವಾರ ಅಲ್ಲಿಗೆ ತಲುಪಲಿದ್ದಾರೆ. ಕಾಂಗ್ರೆಸ್ ಶಾಸಕರು ಅಲ್ಲದೆ, ಪಕ್ಷೇತರ ಶಾಸಕರು ಮತ್ತು ಇತರ ಪಕ್ಷಗಳಿಗೆ ಸೇರಿದವರು ಹಾಗೂ ಆಡಳಿತ ಪಕ್ಷವನ್ನು ಬೆಂಬಲಿಸುವವರನ್ನೂ ಉದಯಪುರದ ಹೋಟೆಲ್‌ಗೆ ಸ್ಥಳಾಂತರಿಸಲಾಗುವುದು ಎಂದು ಮೂಲಗಳು ಹೇಳಿವೆ. ಕಳೆದ ತಿಂಗಳು ಕಾಂಗ್ರೆಸ್ ಪಕ್ಷದ ಚಿಂತನಾ ಶಿಬಿರ ನಡೆಸಿದ್ದ ಹೋಟೆಲ್‌ನಲ್ಲಿಯೇ ಈ ಎಲ್ಲ ಶಾಸಕರು ತಂಗಲಿದ್ದಾರೆ.

ಬಾಬಾ ಬುಡನ್‌ಗಿರಿ ವಿವಾದ: ಸರ್ಕಾರದ ಹೇಳಿಕೆ

‘ಆರು ವಾರಗಳಲ್ಲಿ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗುವುದು’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಬಾಬಾಬುಡನ್ ಗಿರಿ ದತ್ತಾತ್ರೇಯ ಪೀಠದ ವಿವಾದಕ್ಕೆ ಸಂಬಂಧಿಸಿದಂತೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಆರು ವಾರಗಳ ಒಳಗೆ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಏಕಸದಸ್ಯ ನ್ಯಾಯಪೀಠದ ತೀರ್ಪು ಪ್ರಶ್ನಿಸಿ ಸೈಯದ್ ಗೌಸ್ ಮೊಹಿಯುದ್ದೀನ್ ಷಾ ಖಾದ್ರಿ ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ಮತ್ತು ನ್ಯಾಯಮೂರ್ತಿ ಜೆ.ಎಂ. ಖಾಜಿ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, ‘ಏಕಸದಸ್ಯ ನ್ಯಾಯಪೀಠದ ಆದೇಶದಂತೆ ರಾಜ್ಯ ಸರ್ಕಾರ ಮೂವರು ಸಚಿವರನ್ನು ಒಳಗೊಂಡ ಸಚಿವ ಸಂಪುಟದ ಉಪ ಸಮಿತಿ ರಚಿಸಿದೆ. ಈ ಉಪ ಸಮಿತಿಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರ, ಗೃಹ ಹಾಗೂ ಮುಜರಾಯಿ ಇಲಾಖೆ ಸಚಿವರಿದ್ದಾರೆ. ಈ ಸಮಿತಿಯು ಈಗಾಗಲೇ ಸ್ಥಳಕ್ಕೆ ಭೇಟಿ ನೀಡಿದ್ದು ಸಂಬಂಧಿಸಿದ ಪ್ರಮುಖರ ಜೊತೆ ಸಮಾಲೋಚನೆ ನಡೆಸಿದೆ’ ಎಂದರು.

‘ಏತನ್ಮಧ್ಯೆ ಮೇಲ್ಮನವಿದಾರರ ಪರ ವಕೀಲರು, ‘ಸ್ಥಳದಲ್ಲಿ ಯಥಾರೀತಿ ಜಾತ್ಯತೀತ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಅನುಮತಿಸಬೇಕು’ ಎಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿ ನಾವದಗಿ ಅವರು, ‘ಸಚಿವ ಸಂಪುಟದ ಉಪ ಸಮಿತಿಯ ನಿರ್ಣಯ ಸಲ್ಲಿಕೆಯಾಗುವ ತನಕ ವಿವಾದ ಪೂಜಾ ಸ್ಥಳದ ಧಾರ್ಮಿಕ ಚಟುವಟಿಕೆಗಳ ವಿಚಾರದಲ್ಲಿ ಸರ್ಕಾರ ಹಸ್ತಕ್ಷೇಪವೂ ಮಾಡುವುದಿಲ್ಲ. ಈಗಿರುವುದನ್ನು ಬದಲಿಸುವುದೂ ಇಲ್ಲ. ವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಆರು ವಾರಗಳಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು. ಆದ್ದರಿಂದ ವಿಚಾರಣೆಯನ್ನು ಆರು ವಾರಗಳ ಕಾಲ ಮುಂದೂಡಬೇಕು’ ಎಂದು ಮನವಿ ಮಾಡಿದರು.

‘ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಆರು ವಾರಗಳ ಕಾಲ ಮುಂದೂಡಿದೆ. ‘ರಾಜ್ಯ ಸರ್ಕಾರ ಸಲ್ಲಿಸುವ ನಿರ್ಣಯವು ಮೇಲ್ಮನವಿಯ ಅಂತಿಮ ಫಲಿತಾಂಶಕ್ಕೆ ಒಳಪಡಲಿದೆ. ಸರ್ಕಾರದ ನಿರ್ಣಯದ ಬಗ್ಗೆ ಆಕ್ಷೇಪ ಎತ್ತಲು ಉಭಯ ಪಕ್ಷಕಾರರು ಮುಕ್ತರಾಗಿರುತ್ತಾರೆ. ವಿವಾದಿತ ಸ್ಥಳದಲ್ಲಿ ಈಗಿರುವ ಸ್ಥಿತಿಯಲ್ಲಿ ಏನಾದರೂ ಬದಲಾವಣೆಯಾದರೆ ಆ ಬಗ್ಗೆ ಸೂಕ್ತ ಮನವಿ ಸಲ್ಲಿಸಲು ಪಕ್ಷಕಾರರು ಸ್ವತಂತ್ರರಿದ್ದಾರೆ’ ಎಂದೂ ನ್ಯಾಯಪೀಠ ಹೇಳಿದೆ.

ಬಾಬಾಬುಡನ್ ಗಿರಿ ‘ಇನಾಂ ದತ್ತಾತ್ರೇಯ ಪೀಠದ ಪೂಜಾ ಕೈಂಕರ್ಯ ನೆರವೇರಿಸಲು ಮುಜಾವರ್ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶ ರದ್ದುಪಡಿಸಿ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿದೆ.

ಡಾ. ಎಂ.ಆರ್. ಜಯರಾಮ್‌ಗೆ ಅಮೆರಿಕದ ಇಲಿನಾಯ್ಸ್ ವಿ.ವಿ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಡಾ. ಎಂ.ಆರ್. ಜಯರಾಮ್ ಅವರಿಗೆ ಅಮೆರಿಕದ ಷಿಕಾಗೋದ ಇಲಿನಾಯ್ಸ್ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಅಮೆರಿಕದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಇಲಿನಾಯ್ಸ್ ವಿಶ್ವವಿದ್ಯಾಲಯದ ಅಧ್ಯಕ್ಷ ಡಾ. ತಿಮೋತಿ ಕಿಲ್ಲೀನ್ ಅವರು ಜಯರಾಮ್ ಅವರಿಗೆ ‘ಡಾಕ್ಟರ್ ಆಫ್ ಹ್ಯೂಮನ್ ಲೆಟರ್ಸ್’ ಪದವಿ ಪ್ರದಾನ ಮಾಡಿದರು. ಈ ಮೂಲಕ ಜಯರಾಮ್ ಅವರು ಈ ಪದವಿ ಸ್ವೀಕರಿಸಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಭಾಜನರಾಗಿದ್ದಾರೆ.

ಈ ಕುರಿತು ಮಾಧ್ಯಮಗಳ ಜೊತೆ ಅನಿಸಿಕೆ ಹಂಚಿಕೊಂಡ ಜಯರಾಮ್, ‘ಉನ್ನತ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಪರಿಗಣಿಸಿ ಇಲಿನಾಯ್ಸ್ ವಿಶ್ವವಿದ್ಯಾಲಯವು ತನ್ನ ಪ್ರತಿಷ್ಠಿತ ಗೌರವ ಡಾಕ್ಟರೇಟ್ ಪದವಿ ನೀಡಿದೆ’ ಎಂದರು.

‘ದೇಶದ ಅತ್ಯುತ್ತಮ ನೂರು ವಿಶ್ವವಿದ್ಯಾಲಯಗಳಲ್ಲಿ ಮತ್ತು ಕರ್ನಾಟಕದ ಅಗ್ರಶ್ರೇಣಿಯ ಐದು ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ನಮ್ಮ ವಿಶ್ವವಿದ್ಯಾಲಯ ಕೂಡಾ ಸ್ಥಾನ ಪಡೆದಿದೆ. ಮುಂದಿನ ದಿನಗಳಲ್ಲಿ ಜಾಗತಿಕಮಟ್ಟದಲ್ಲಿ ರಾಮಯ್ಯ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್ ಅತ್ಯುತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಸ್ಥಾನ ಪಡೆಯುವ ಗುರಿ ಹೊಂದಲಾಗಿದೆ’ ಎಂದರು.

‘ಪ್ರತಿಷ್ಠಿತ ಕಂಪನಿಗಳ ಜೊತೆ ಒಡಂಬಡಿಕೆಯಿಂದ ಗುಣಮಟ್ಟದ ಸಂಶೋಧನೆ, ನಾವೀನ್ಯತೆ ಮತ್ತು ಉದ್ಯಮಶೀಲತೆ, ಇಂಟರ್ನ್‌ಶಿಪ್ ಉದ್ಯೋಗ ಅವಕಾಶ ಮತ್ತಿತರ ಶೈಕ್ಷಣಿಕ ಚಟುವಟಿಕೆಗೆ ಸಹಾಯವಾಗಿದೆ. ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ಹಲವು ವಿದ್ಯಾರ್ಥಿಗಳು ಉತ್ತಮ ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ’ ಎಂದರು.

ಯುದ್ಧಪೀಡಿತ ಉಕ್ರೇನ್‌ನಿಂದ ಸ್ವದೇಶಕ್ಕೆ ಮರಳಿದ ವೈದ್ಯಕೀಯ ವಿದ್ಯಾರ್ಥಿಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಇದೊಂದು ಸರ್ಕಾರಿ ವಿಚಾರ. ವೈದ್ಯಕೀಯ ಶಿಕ್ಷಣಕ್ಕೆ ವಿದ್ಯಾರ್ಥಿಗಳಿಗೆ ಹೆಚ್ಚಿನ ನೆರವು ನೀಡಬೇಕು. ಈ ಬಗ್ಗೆ ಸರ್ಕಾರ, ಸಮುದಾಯ, ಶಿಕ್ಷಣ ಸಂಸ್ಥೆಗಳು ಮತ್ತು ಪರಿಣತರು ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಬೇಕು’ ಎಂದು ಸಲಹೆ ನೀಡಿದರು.



ಎಂ.ಆರ್.ಜಯರಾಮ್ ಅವರಿಗೆ ‘ಡಾಕ್ಟರ್ ಆಫ್ ಹ್ಯೂಮನ್ ಲೆಟರ್ಸ್’ ಪದವಿ ಪ್ರದಾನ ಮಾಡಲಾಯಿತು



ಮೊಗೀಸ್ ಟೇಲ್ಸ್

ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿರುವ ‘ಮೊಗೀಸ್ ಟೇಲ್ಸ್’ ವನ್ಯಜೀವಿ ಛಾಯಾಚಿತ್ರ ಪ್ರದರ್ಶನದಲ್ಲಿ ಛಾಯಾಗ್ರಾಹಕ ಅಮೋಘವರ್ಷ ಪಿ.ಎಚ್. (ಎಡಗಡೆಯವರು) ತಮ್ಮ ಛಾಯಾಚಿತ್ರಗಳ ಬಗ್ಗೆ ಕಲಾಸಕ್ತರಿಗೆ ಮಾಹಿತಿ ನೀಡಿದರು. ಈ ಛಾಯಾಚಿತ್ರ ಪ್ರದರ್ಶನ ಇದೇ 5 ರವರೆಗೆ ನಡೆಯಲಿದೆ - ಪ್ರಜಾವಾಣಿ ಚಿತ್ರ

ಚೆಕ್ ಬೌನ್ಸ್ ಪ್ರಕರಣ: ಕಾಯ್ದೆ ತಿದ್ದುಪಡಿಗೆ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚೆಕ್ ಬೌನ್ಸ್ ಪ್ರಕರಣಗಳಲ್ಲಿ ಆರೋಪಿಯ ಗೈರುಹಾಜರಿಯಲ್ಲಿ ವಿಚಾರಣೆ ಮುಂದುವರಿಸಲು ಅನುವಾಗುವಂತೆ, ಅಪರಾಧ ದಂಡ ಸಂಹಿತೆ ಅಥವಾ ನೆಗೋಷಿಯೆಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆ–1881ಕ್ಕೆ ಸೂಕ್ತ ತಿದ್ದುಪಡಿ ತಂದರೆ ಈ ಕುರಿತ ಪ್ರಕರಣಗಳ ವಿಲೇವಾರಿಗೆ ಸಹಾಯಕವಾಗುತ್ತದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ನನ್ನ ಅನುಪಸ್ಥಿತಿಯಲ್ಲಿ ಸೆಷನ್ಸ್ ನ್ಯಾಯಾಲಯ ನನ್ನನ್ನು ಅಪರಾಧಿ ಎಂದು ನಿರ್ಧರಿಸಿದೆ’ ಎಂದು ಆಕ್ಷೇಪಿಸಿ ಶಿವಮೊಗ್ಗದ ಜಿ.ಎಚ್.ಅಬ್ದುಲ್ ಖಾದ್ರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ವಿಶೇಷ ಕಾಯ್ದೆಗಳಲ್ಲಿ ಆರೋಪಿಯ ಹಾಜರಿ ಇಲ್ಲದೆಯೇ ವಿಚಾರಣೆ ನಡೆಸಲು ಅನುಕೂಲವಾಗುವಂತೆ ಕೆಲವು ಕಾಯ್ದೆಗಳಿಗೆ ಸೂಕ್ತ ತಿದ್ದುಪಡಿ ತರುವ ಬಗ್ಗೆ ಶಾಸಕಾಂಗ ಆಲೋಚಿಸಬೇಕು. ತಿದ್ದುಪಡಿ ತಂದರೆ, ಆರೋಪಿ ಸಮನ್ಸ್ ಜಾರಿಯಿಂದ ತಪ್ಪಿಸಿಕೊಳ್ಳುವ ಅಥವಾ ಆತನ ವಿರುದ್ಧ ವಾರಂಟ್ ಜಾರಿಗೊಳಿಸುವ ಪ್ರಕ್ರಿಯೆಯನ್ನು ತಡೆಯಲು ನೆರವಾಗುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಇದೇ ವೇಳೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮ್ಯಾಜಿಸ್ಟ್ರೇಟ್ ಮತ್ತು ಸೆಷನ್ಸ್ ಕೋರ್ಟ್ ನೀಡಿದ್ದ ಎರಡು ಪ್ರತ್ಯೇಕ ತೀರ್ಪುಗಳನ್ನು ರದ್ದುಪಡಿಸಿರುವ ನ್ಯಾಯಪೀಠ, ಪ್ರಕರಣವನ್ನು ಪುನರ್ ವಿಚಾರಣೆ ನಡೆಸಲು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಸೂಚಿಸಿದೆ. ಆರೋಪಿ ಮತ್ತು ದೂರುದಾರರನ್ನು ವಿಚಾರಣೆಗೆ ಹಾಜರಾಗುವಂತೆಯೂ ನಿರ್ದೇಶಿಸಿದೆ.

ನ್ಯಾಯಾಂಗ ನಿಂದನೆ: ರಾಕೇಶ್ ಸಿಂಗ್, ಅರ್ಚನಾ ಖುದ್ದು ಹಾಜರಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ವಿವಿಧ ಪೌರಾಡಳಿತ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್–ಸಿ ಸಿಬ್ಬಂದಿಯನ್ನು ಗ್ರೂಪ್–ಬಿಗೆ ವಿಲೀನಗೊಳಿಸುವ ವಿಚಾರದಲ್ಲಿ ಕರಡು ನಿಯಮಗಳನ್ನು ಪ್ರಕಟಿಸದೇ ಇರುವ ಬಗ್ಗೆ ವಿವರಣೆ ನೀಡಲು ಇದೇ 6ರಂದು ವಿಚಾರಣೆಗೆ ಖುದ್ದು ಹಾಜರಾಗಬೇಕು’ ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ, ‘ಕರ್ನಾಟಕ ನಗರಪಾಲಿಕೆ ಉದ್ಯೋಗಿಗಳ ಸಂಘ’ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

‘ಗ್ರೂಪ್–ಸಿ ಉದ್ಯೋಗಿಗಳನ್ನು ಗ್ರೂಪ್–ಬಿಗೆ ವಿಲೀನಗೊಳಿಸುವ ನಿಟ್ಟಿನಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಬೇಕು. ಈ ಕುರಿತು ಎರಡು ತಿಂಗಳಲ್ಲಿ ಕರಡು ನಿಯಮಗಳನ್ನು ಪ್ರಕಟಿಸುವಂತೆ 2021ರ ಜುಲೈ 19ರಂದು ಹೈಕೋರ್ಟ್ ಏಕ ಸದಸ್ಯ ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿದೆ. ಆದರೆ, ಈವರೆಗೂ ಕರಡು ನಿಯಮಗಳನ್ನು ಪ್ರಕಟಿಸಿಲ್ಲ. ಇದರಿಂದ ಕೋರ್ಟ್ ಆದೇಶ ಉಲ್ಲಂಘನೆ ಆಗಿರುವುದು ಮೇಲ್ನೋಟಕ್ಕೆ ದೃಢಪಟ್ಟಿದೆ’ ಎಂದು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಪ್ರಕರಣದ ಕುರಿತಂತೆ ವಿವರಿಸಲು ಇದೇ 6ರಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಮತ್ತು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕಿ ಎಂ.ಎಸ್. ಅರ್ಚನಾ ವಿಚಾರಣೆಗೆ ಖುದ್ದು ಹಾಜರಾಗಬೇಕು’ ಎಂದು ನಿರ್ದೇಶಿಸಿದ ನ್ಯಾಯಪೀಠ ಈ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಯನ್ನು ಮುಂದೂಡಿದೆ.

ಚಿತ್ರಕಲಾ ಪರಿಷತ್‌ನಿಂದ ‘ಪರಿಸರ ಮನನ’ ಕಾರ್ಯಾಗಾರ

ಬೆಂಗಳೂರು: ಪರಿಸರದ ಮೇಲಿನ ಮಾನವನ ಹಸ್ತಕ್ಷೇಪ ತಡೆ ಮತ್ತು ಮಾಲಿನ್ಯ ನಿಯಂತ್ರಣ ಕುರಿತು ನಗರದ ಪದವಿ ಕಾಲೇಜುಗಳ ಭಾಷಾ ವಿಷಯಗಳ ಬೋಧಕರಿಗೆ ಚಿತ್ರಕಲಾ ಪರಿಷತ್ ಜೂನ್ 9 ಮತ್ತು ಜೂನ್ 17ರಂದು ತಲಾ ಮೂರು ದಿನಗಳ ‘ಪರಿಸರ ಮನನ–2022’ ಕಾರ್ಯಾಗಾರ ಹಮ್ಮಿಕೊಂಡಿದೆ.

‘ಜಾಗತಿಕ ಪರಿಸರ ದಿನ, ಸಾಗರ ದಿನ ಮತ್ತು ಮರುಭೂಮಿ ನಿರೋಧಕ ದಿನಗಳಿಗೆ ಪೂರಕವಾಗಿ ಈ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಪ್ಲಾಸ್ಟಿಕ್ ಬಳಕೆ ತಡೆ, ನವೀಕರಿಸಬಹುದಾದ ಇಂಧನಗಳ ಬಳಕೆ ಸೇರಿದಂತೆ ಹಲವು ವಿಷಯಗಳ ಕುರಿತು ತರಬೇತಿ ನೀಡಲಾಗುವುದು. ಪರಿಸರ ನಾಯಕತ್ವ ತರಬೇತಿಯನ್ನೂ ಒದಗಿಸಲಾಗುವುದು’ ಎಂದು ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದ್ದಾರೆ.

ಈ ಕಾರ್ಯಾಗಾರದಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಬೋಧಕರು ಇದೇ 6ರೊಳಗೆ parisara2022@gmail.com ಮೂಲಕ ನೋಂದಣಿ ಮಾಡಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9448077019 ಸಂಪರ್ಕಿಸಬಹುದು.

ಪರಿಸರಕ್ಕೆ ಹಾನಿ: ಅದಾನಿ ಕಂಪನಿಗೆ ₹50 ಕೋಟಿ ದಂಡ

ಒಂದನೇ ಪುಟದಿಂದ

ಮಾಲಿನ್ಯ ಉಸ್ತುವಾರಿ ವ್ಯವಸ್ಥೆಯನ್ನು ತಿದ್ದಿರುವುದರಿಂದ ರಾಜ್ಯ ಮತ್ತು ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗಳು ಯುಪಿಸಿಎಲ್‌ಗೆ ಹೆಚ್ಚುವರಿ ದಂಡ ವಿಧಿಸಬೇಕು ಅಥವಾ ಕಾನೂನು ಕ್ರಮ ಜರುಗಿಸಬೇಕು. ಕಡಲ ಪರಿಸರವನ್ನು ರಕ್ಷಿಸಲು ದ್ರವರೂಪದ ತ್ಯಾಜ್ಯವನ್ನು ಹೊರ ಬಿಡದಂತೆ ಯುಪಿಸಿಎಲ್‌ಗೆ ಸೂಚಿಸುವಂತೆ ಎರಡೂ ಮಂಡಳಿಗೆ ಹಸಿರು ಪೀಠ ಸೂಚಿಸಿದೆ.

ವ್ಯವಸ್ಥಾಪಕ ನಿರ್ದೇಶಕಿ – ಅಧ್ಯಕ್ಷರ ಪತ್ರ ಸಮರ

ಒಂದನೇ ಪುಟದಿಂದ

‘ನಿಗಮದ ಅಧ್ಯಕ್ಷರಿಗೆ ನೀಡಿದ್ದ ಕಾರನ್ನು ಅವರೇ ಅಪಘಾತ ಮಾಡಿ, ಚಾಲಕನ ಮೇಲೆ ಹೊರಿಸಿದ್ದರು. ಕಾರಿನ ದುರಸ್ತಿಗೆ ₹10.84 ಲಕ್ಷ ವೆಚ್ಚವಾಗಿದೆ. ಅಧ್ಯಕ್ಷರ ಕಚೇರಿ ಸಿಬ್ಬಂದಿಯ ಹಾಜರಾತಿ ವಿವರ ಒದಗಿಸದೇ ಮಾಸಿಕ ₹5 ಲಕ್ಷದಷ್ಟು ವೇತನ ಮತ್ತು ಇತರ ವೆಚ್ಚ ಪಡೆಯಲಾಗುತ್ತಿದೆ. ನಿಗಮದ ಅಧಿಕಾರಿಗಳಿಂದ ಬಲವಂತವಾಗಿ ಊಟ ತರಿಸಿಕೊಂಡು ಬಳಸಿದ್ದಾರೆ. ಮಹಿಳಾ ಆಪ್ತ ಸಹಾಯಕಿಯೇ ಬೇಕು ಎಂಬ ಬೇಡಿಕೆಯನ್ನು ಅಧ್ಯಕ್ಷರು ಇರಿಸಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ತನಿಖೆಗೆ ಆಗ್ರಹ

‘ಬೇಳೂರು ರಾಘವೇಂದ್ರ ಶೆಟ್ಟಿ ತಮ್ಮ ಹೆಸರಿನ ಮುಂದೆ ‘ಡಾಕ್ಟರ್’ ಎಂದೇ ಬಳಸುವಂತೆ ಒತ್ತಾಯಿಸುತ್ತಿದ್ದಾರೆ. ಅವರು ಈ ಪದವಿ ಎಲ್ಲಿಂದ ಪಡೆದರು ಎಂಬುದರ ಕುರಿತು ತನಿಖೆ ನಡೆಸಬೇಕು. ಅವರ ಆಪ್ತ ಕಾರ್ಯದರ್ಶಿ ಹುದ್ದೆಯಲ್ಲಿದ್ದ ಶ್ರೀಕಾಂತ ಚೌರಿ ಎಂಬಾತ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪರೀಕ್ಷಾ ಅಕ್ರಮದಲ್ಲಿ ಬಂಧಿತನಾಗಿದ್ದಾನೆ. ರಾಘವೇಂದ್ರ ಶೆಟ್ಟಿ ಕೂಡ ಈ ಅಕ್ರಮದಲ್ಲಿ ಭಾಗಿಯಾಗಿರುವ ಸಾಧ್ಯತೆ ಇದ್ದು, ಈ ಬಗ್ಗೆಯೂ ತನಿಖೆ ನಡೆಸಬೇಕು’ ಎಂದು ಡಿ. ರೂಪಾ ಮುಖ್ಯ ಕಾರ್ಯದರ್ಶಿಯವರನ್ನು ಒತ್ತಾಯಿಸಿದ್ದಾರೆ.

ಅಧ್ಯಕ್ಷರಿಗೆ ನೋಟಿಸ್

ಕರಕುಶಲ ಅಭಿವೃದ್ಧಿ ನಿಗಮದ ಮಳಿಗೆಗಳಿಂದ ಹಣ ಪಾವತಿಸದೇ ವಿವಿಧ ವಸ್ತುಗಳನ್ನು ತೆಗೆದುಕೊಂಡು ಹೋಗಿರುವ ಆರೋಪದಡಿ ನಿಗಮದ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ ಅವರಿಗೆ ಬುಧವಾರ ನೋಟಿಸ್ ನೀಡಿರುವ ವ್ಯವಸ್ಥಾಪಕ ನಿರ್ದೇಶಕಿ ಡಿ. ರೂಪಾ, ಈ ಬಾಬ್ತು ₹ 3.10 ಲಕ್ಷ ಪಾವತಿಸುವಂತೆ ಸೂಚಿಸಿದ್ದಾರೆ.

ಜುಲೈ 2ರಿಂದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ

ನವದೆಹಲಿ: ಬಿಜೆಪಿಯ ಎರಡು ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಜುಲೈ 2ರಿಂದ ಹೈದರಾಬಾದ್‌ನಲ್ಲಿ ನಡೆಯಲಿದೆ ಎಂದು ಪಕ್ಷದ ಮೂಲಗಳು ಬುಧವಾರ ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಸಭೆಯಲ್ಲಿ ಪಾಲ್ಗೊಳ್ಳುವರು.

ತೆಲಂಗಾಣದಲ್ಲಿ ಟಿಆರ್‌ಎಸ್‌ಗೆ ಸವಾಲೊಡ್ಡಲು ಬಿಜೆಪಿ ಪ್ರಯತ್ನಿಸುತ್ತಿದ್ದು, ಈ ನಿಟ್ಟಿನಲ್ಲಿ ಹೈದರಾಬಾದ್‌ನಲ್ಲಿ ಸಭೆಯನ್ನು ಆಯೋಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ಜ್ಯೋತಿಷದಿಂದ ವ್ಯಕ್ತಿಯ ಭವಿಷ್ಯ ವಿಶ್ಲೇಷಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜ್ಯೋತಿಷವು ವೈಜ್ಞಾನಿಕ ತಳಹದಿ ಹೊಂದಿರುವ ವಿಶೇಷ ವಿಷಯ. ಇದು ವ್ಯಕ್ತಿಯ ಭವಿಷ್ಯ ವಿಶ್ಲೇಷಿಸಲು ಸಹಕಾರಿ’ ಎಂದು ಗೋಲ್ಡ್ ಟ್ರೀ ಆಸ್ಟ್ರೋ ಇಂಡಿಯಾ ಸಂಸ್ಥೆಯ ಸಂಸ್ಥಾಪಕ ದಿನೇಶ್ ಗುರೂಜಿ ತಿಳಿಸಿದರುಅ.

ಸಂಸ್ಥೆಯು ನಗರದಲ್ಲಿ ಹಮ್ಮಿಕೊಂಡು ಪದವಿ ಪ್ರದಾನ ಕಾರ್ಯಕ್ರಮದಲ್ಲಿ 155 ವಿದ್ಯಾರ್ಥಿಗಳಿಗೆ ವೇದ ಡಾಕ್ಟರೇಟ್ ಮತ್ತು 125 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಡಿಪ್ಲೊಮಾ ಪದವಿ ವಿತರಿಸಲಾಯಿತು. ‘ವಿಜ್ಞಾನವು ಗ್ರಹಗಳ ಬಗ್ಗೆ ಮತ್ತು ನಮ್ಮ ಮೇಲೆ ಅವುಗಳ ಪ್ರಭಾವದ ಬಗ್ಗೆ ಹೇಳುತ್ತದೆ. ಜ್ಯೋತಿಷವು ಗ್ರಹಗಳ ಚಲನೆಯ ಪರಿಣಾಮ ಮತ್ತು ನಮ್ಮ ಮೇಲೆ ಅವುಗಳ ಪರಿಣಾಮ ವಿಶ್ಲೇಷಿಸಲು ಸಹಕಾರಿಯಾಗಿದೆ. ಯಂತ್ರಗಳ ಆವಿಷ್ಕಾರದಿಂದ ಸಾಧ್ಯವಾಗದ್ದನ್ನು ಜ್ಯೋತಿಷ ಸಾಕಾರ ಮಾಡುತ್ತದೆ. ನಮ್ಮ ಪ್ರಾಚೀನ ಹಿಂದೂ ಧರ್ಮದ ಅಗಾಧ ಜ್ಞಾನವನ್ನು ಉತ್ತೇಜಿಸಲು ಜ್ಯೋತಿಷ ಕಲಿಸಲಾಗುತ್ತಿದೆ’ ಎಂದು ಹೇಳಿದರು.

ಹೈಕೋರ್ಟ್ ವಕೀಲ ಟಿ. ಸೋಮಶೇಖರಯ್ಯ, ‘ಜ್ಯೋತಿಷ ತರಬೇತಿಯು ಜನರನ್ನು ಕತ್ತಲಿನಿಂದ ಬೆಳಕಿನೆಡೆಗೆ ತರಲಿದೆ. ಜ್ಞಾನ ವೃದ್ಧಿಗೂ ಸಹಕಾರಿಯಾಗಿದೆ’ ಎಂದು ಹೇಳಿದರು.

ದೂರದರ್ಶನದ ಕಾರ್ಯಕ್ರಮ ಮುಖ್ಯಸ್ಥೆ ನಿರ್ಮಲಾ ಯಲಿಗಾರ್, ‘ಜ್ಞಾನಾಧಾರಿತ ಸಮಾಜದ ನಿರ್ಮಾಣಕ್ಕೆ ಜ್ಯೋತಿಷ ಶಾಸ್ತ್ರ ಸಹಾಯ ಮಾಡುತ್ತದೆ’ ಎಂದರು.

ಜೆಡಿಎಸ್ ವಕ್ತಾರ ತನ್ವೀರ್ ಅಹಮ್ಮದುಲ್ಲಾ ಇದ್ದರು.

ವ್ಯವಸ್ಥಿತ ದಾಳಿಯ ಪ್ರಯತ್ನ: ಆರಗ

ಪ್ರಜಾವಾಣಿ ವಾರ್ತೆ

ತಿಪಟೂರು: ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮನೆಯ ಮೇಲೆ ವ್ಯವಸ್ಥಿತವಾಗಿ ದಾಳಿ ನಡೆಸಲು ಯತ್ನಿಸಿರುವುದು ಖಂಡನೀಯ. ಕಾಂಗ್ರೆಸ್‌ಗೆ ಈ ದುರ್ಗತಿ ಬರಬಾರದಿತ್ತು. ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ನಗರದಲ್ಲಿ ಬುಧವಾರ ಶಿಕ್ಷಣ ಸಚಿವರ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡಿದ ಅವರು, ‘ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿದ್ದು, 15 ಜನರನ್ನು, ಎರಡು ವಾಹನಗಳನ್ನು ಈಗಾಗಲೇ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಉಳಿದವರನ್ನು ಸಹ ಫೋಟೊ, ವಿಡಿಯೊ ಮಾಹಿತಿ ಪಡೆದು ವಶಕ್ಕೆ ಪಡೆಯಲಾಗುವುದು. ಸ್ಥಳೀಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿಲ್ಲ. ಹೊರಗಿನವರು ವ್ಯವಸ್ಥಿತವಾಗಿ ಬಂದಿರುವುದನ್ನು ನೋಡಿದರೆ ಶಿಕ್ಷಣ ಸಚಿವ ನಾಗೇಶ್ ಅವರ ಪ್ರಾಣ ತೆಗೆಯುತ್ತಿದ್ದರೇನೋ ಎನ್ನುವಂತಿದೆ. ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಬರಲಿದ್ದು, ಸಚಿವರ ಮನೆಗೆ, ಸಚಿವರಿಗೆ ಸೂಕ್ತ ಭದ್ರತೆ ನೀಡಲಾಗುವುದು’ ಎಂದು ಹೇಳಿದರು.

ಪ್ರತಿಭಟನೆಗೆ ಮೊದಲು ಪೊಲೀಸರಿಗೆ ಮಾಹಿತಿ ನೀಡಿ ಸಮ್ಮತಿ ಪಡೆದಿರಬೇಕು. ಅಥವಾ ಬೇರೆಡೆ ಪ್ರತಿಭಟನೆ ನಡೆಸಬಹುದಿತ್ತು. ಆದರೆ ಉದ್ದೇಶಿತವಾಗಿ ಈ ಕೃತ್ಯ ನಡೆಸಲಾಗಿದೆ ಎಂದರು.

ಮನೆಯಲ್ಲಿ ಎಲ್ಲಿ ಬೆಂಕಿ ಹಚ್ಚಲಾಗಿದೆ ಎನ್ನುವುದನ್ನು ತೋರಿಸುವಂತೆ ಪರ್ತಕರ್ತರು ಪ್ರಶ್ನಿಸಿದಾಗ ಪ್ರತಿಕ್ರಿಯಿಸಿದ ಸಚಿವರು, ಬಟ್ಟೆಗೆ ಬೆಂಕಿ ಹಚ್ಚಲಾಗಿದೆ ಬಿಟ್ಟಿದ್ದರೆ ಮನೆಗೆ ಬೆಂಕಿ ಹಚ್ಚುತ್ತಿದ್ದರು. ನಮ್ಮ ಬಳಿ ಫೋಟೊ ಇವೆ. ಅವುಗಳನ್ನು ನಂತರ ಮಾಧ್ಯಮಕ್ಕೆ ನೀಡಲಾಗುವುದು ಎಂದರು.

ಪ್ರತಿಭಟನಕಾರರ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆ ನಡೆಸಿರುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಇದರ ಬಗ್ಗೆ ಮಾಹಿತಿ ಇಲ್ಲ. ಪೊಲೀಸರು ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಾರೆ ಎಂದರು.

‘ನಾಗೇಶ್ ಮನೆಗೆ ನುಗ್ಗುವ ಯತ್ನ ಖಂಡನೀಯ’

ಬೆಂಗಳೂರು: ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ತಿಪಟೂರು ಮನೆಗೆ ಕಾಂಗ್ರೆಸ್ ಪ್ರಚೋದಿತ ಕಿಡಿಗೇಡಿಗಳು ನುಗ್ಗಿ ಹಲ್ಲೆ ನಡೆಸುವ ಮತ್ತು ಬೆಂಕಿ ಹಾಕುವ ಪ್ರಯತ್ನ ಮಾಡಿದ್ದು ಖಂಡನೀಯ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಪಕ್ಷದ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿ, ‘ಪ್ರಜಾಪ್ರಭುತ್ವದಲ್ಲಿ ಸಂವಾದ ಮತ್ತು ಚರ್ಚೆಯ ಮೂಲಕ ಅಭಿಪ್ರಾಯ ರೂಪಿಸಲು ಪ್ರತಿಯೊಬ್ಬರಿಗೂ ಸ್ವಾತಂತ್ರ್ಯ ಇದೆ. ಆದರೆ, ಸಚಿವರ ಧ್ವನಿಯನ್ನು ಹತ್ತಿಕ್ಕಲು ಬೆದರಿಸುವುದು, ಕೊಲೆ ಬೆದರಿಕೆ, ಮನೆಗೆ ಬೆಂಕಿ ಹಾಕುವ ಹೀನ ಕೃತ್ಯದ ಮನೋಭಾವ ಪ್ರಜಾಪ್ರಭುತ್ವ ವಿರೋಧಿ. ಇದು ತಾಲಿಬಾನ್‌ಗಳು ನಡೆಸುವ ಕೃತ್ಯ’ ಎಂದಿದ್ದಾರೆ.

ರೋಹಿತ್ ಚಕ್ರತೀರ್ಥ ವಜಾಗೊಳಿಸಿ: ಚಂದ್ರಶೇಖರ್

ಬೆಂಗಳೂರು: ರಾಷ್ಟ್ರಕವಿ ಕುವೆಂಪು, ಬಸವಣ್ಣ, ನಾಡಗೀತೆ, ನಾಡಧ್ವಜವನ್ನು ಅವಮಾನಿಸಿರುವ ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ಸ್ಥಾನದಿಂದ ತಕ್ಷಣ ವಜಾಗೊಳಿಸಬೇಕು ಎಂದು ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಆಗ್ರಹಿಸಿದರು.

> ಪಠ್ಯ ಪರಿಷ್ಕರಣೆ ಸಂಬಂಧ ಸ್ವಾಮೀಜಿಗಳು, ಸಾಹಿತಿಗಳು ಸರ್ಕಾರಕ್ಕೆ ಪತ್ರ ಬರೆದು ಅಭಿಪ್ರಾಯ ತಿಳಿಸಿದ್ದಾರೆ. ಎಲ್ಲರ ಮನವಿಯನ್ನೂ ಪರಿಗಣಿಸಿ ಜೂನ್ 2ರಂದು ನಿರ್ಧಾರ ತೆಗೆದುಕೊಳ್ಳಲಾಗುವುದು
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರೋಹಿತ್ ಚಕ್ರತೀರ್ಥ ಕೊಳಕು ಮನಸ್ಥಿತಿಯ ವ್ಯಕ್ತಿ. ಅವರನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದು ದುರ್ದೈವ. ಇನ್ನಾದರೂ ತಡಮಾಡದೇ ಸಮಿತಿಯ ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಬೇಕು. ಒಂದು ವಾರದೊಳಗೆ ಸರ್ಕಾರ ನಿರ್ಧಾರ ಪ್ರಕಟಿಸದಿದ್ದರೆ ಕಾಂಗ್ರೆಸ್ ಪಕ್ಷದಿಂದ ಬೃಹತ್ ಹೋರಾಟ ನಡೆಸಲಾಗುವುದು’ ಎಂದರು.

ಸಮಿತಿಯ ಅಧ್ಯಕ್ಷ ಸ್ಥಾನದಲ್ಲಿರುವ ವ್ಯಕ್ತಿಗೆ ಈ ನಾಡಿನ ಮಹಾಪುರುಷರು, ಸಾಹಿತಿಗಳು, ಭಾಷೆ ಮತ್ತು ನಾಡಧ್ವಜದ ಬಗ್ಗೆ ಗೌರವವೇ ಇಲ್ಲ. ಒಂದು ವರ್ಗಕ್ಕೆ ಸೇರಿದವರನ್ನು ಮಾತ್ರವೇ ಪಠ್ಯಪುಸ್ತಕ ಪರಿಷ್ಕರಣ ಸಮಿತಿ ಸದಸ್ಯರನ್ನಾಗಿ ನೇಮಿಸಲಾಗಿತ್ತು. ಇಂತಹ ಸಮಿತಿಯು ನೀಡುವ ಪಠ್ಯವನ್ನು ಮಕ್ಕಳಿಗೆ ಬೋಧಿಸಬಾರದು. ಹಿಂದಿನ ಪಠ್ಯಕ್ರಮವನ್ನೇ ಮುಂದುವರಿಸಬೇಕು.

‘ಪಠ್ಯಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಸಮಿತಿಯ ಬೆಂಬಲಕ್ಕೆ ನಿಂತಿರುವ ಸಚಿವ ಬಿ.ಸಿ. ನಾಗೇಶ್, ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಅವರು ಸಚಿವರಾಗಿರಲು ಸಮರ್ಥರಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ವಿಷಯದಲ್ಲಿ ತಕ್ಷಣ ಮಧ್ಯಪ್ರವೇಶ ಮಾಡಬೇಕು’ ಎಂದು ಆಗ್ರಹಿಸಿದರು.

ಪಠ್ಯಪುಸ್ತಕ: ಚುಂಚನಗಿರಿ ಶ್ರೀ ನೇತೃತ್ವದಲ್ಲಿ ನಾಳೆ ಸಭೆ

ಬೆಂಗಳೂರು: ಮಹಾಕವಿ ಕುವೆಂಪು, ನಾಡಗೀತೆ ಹಾಗೂ ನಾಡ ಧ್ವಜವನ್ನು ಅವಮಾನಿಸಿರುವುದರ ವಿರುದ್ಧ ಬೃಹತ್ ಪ್ರತಿಭಟನಾ ಮೆರವಣಿಗೆ ಹಾಗೂ ಜನಾಂದೋಲನ ಸಮಾವೇಶವನ್ನು ಹಮ್ಮಿಕೊಳ್ಳುವ ಕುರಿತಂತೆ ಸಮಾಜದ ಮುಖಂಡರೊಂದಿಗೆ ಚರ್ಚಿಸಲು ಆದಿ ಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ಇದೇ 3ರಂದು ಪೂರ್ವಭಾವಿ ಸಭೆ ನಡೆಯಲಿದೆ.

‘ವಿಜಯನಗರದಲ್ಲಿನ ಆದಿಚುಂಚನಗಿರಿ ಶಾಖಾ ಮಠದಲ್ಲಿ ಸಂಜೆ 4 ಗಂಟೆಗೆ ಈ ಸಭೆ ಕರೆಯಲಾಗಿದೆ. ಸಭೆಯಲ್ಲಿ ಸಮಾಜದ ಎಲ್ಲ ಕ್ಷೇತ್ರಗಳ ದಿಗ್ಗಜರು ಪಾಲ್ಗೊಳ್ಳಲಿದ್ದಾರೆ. ಈ ಮೊದಲು ಮೇ 30ರಂದು ಝೂಮ್ ಮೀಟಿಂಗ್ ಕರೆಯಲಾಗಿತ್ತು. ಆದರೆ, ತಾಂತ್ರಿಕ ಕಾರಣಗಳಿಂದಾಗಿ ಬಹಳಷ್ಟು ಮುಖಂಡರು ಸಭೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿರಲಿಲ್ಲ. ಆದ್ದರಿಂದ, ಶುಕ್ರವಾರ ಸಂಜೆ 4 ಗಂಟೆಗೆ ಮತ್ತೊಂದು ಮುಖಾಮುಖಿ ಸಭೆಯನ್ನು ಕರೆಯಲಾಗಿದೆ’ ಎಂದು ‘ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ’ ತಿಳಿಸಿದೆ.

‘ಈ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ರಾಜ್ಯದ ಮೂಲೆ ಮೂಲೆಗಳಿಂದ ಎಲ್ಲಾ ಜಾತಿ-ಮತ-ಧರ್ಮಗಳ ಕುವೆಂಪು ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪಿಡಿಒ ಹುದ್ದೆ ಮೇಲ್ದರ್ಜೆಗೆ ಏರಿಸಲು ಒತ್ತಾಯ

ಬೆಂಗಳೂರು: ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ(ಪಿಡಿಒ) ಹುದ್ದೆ ಮೇಲ್ದರ್ಜೆಗೇರಿಸುವುದು ಸೇರಿದಂತೆ 15 ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ರಾಜ್ಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಒತ್ತಾಯಿಸಿದೆ.

‘29 ಇಲಾಖೆಗಳ ಜೊತೆಗೆ ಸಮನ್ವಯ ಸಾಧಿಸಿ ಪಿಡಿಒಗಳು ಕಡಿಮೆ ಸಿಬ್ಬಂದಿಗಳೊಂದಿಗೆ ಅಧಿಕ ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಹಲವಾರು ಬಾರಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲ’ ಎಂದು ರಾಜ್ಯ ಘಟಕದ ಅಧ್ಯಕ್ಷ ಎಚ್. ಬೋರಯ್ಯ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಪಿಡಿಒ ಹುದ್ದೆಯನ್ನು ಗ್ರೂಪ್ ‘ಬಿ’ಗೆ ಮೇಲ್ದರ್ಜೆಗೇರಿಸಬೇಕು. ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ನಿಯಮ ಜಾರಿಗೊಳಿಸುವುದರ ಜತೆಗೆ ಅಂತರ ಜಿಲ್ಲಾ ವರ್ಗಾವಣೆಗೆ ಅವಕಾಶ ನೀಡಬೇಕು’ ಎಂದು ಒತ್ತಾಯಿಸಿದರು.

‘ಕೋವಿಡ್‌ನಿಂದ 200ಕ್ಕೂ ಹೆಚ್ಚು ನೌಕರರು ಮೃತಪಟ್ಟಿದ್ದು, ಎಲ್ಲಾ ಕುಟುಂಬಗಳಿಗೆ ಆರ್ಥಿಕ ಪರಿಹಾರ ಮತ್ತು ಅನುಕಂಪದ ನೌಕರಿ ನೀಡಬೇಕು. ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ವೇತನ ಶ್ರೇಣಿ ನಿಗದಿಪಡಿಸಿ, ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ದ್ವಿತೀಯ ದರ್ಜೆ ಸಹಾಯಕರನ್ನು ನೇಮಕ ಮಾಡಬೇಕು. 2006ರಿಂದ 2011ರವರೆಗೆ ನರೇಗಾ ಯೋಜನೆಯಲ್ಲಿ ಅನುಷ್ಠಾನಗೊಂಡ ಕಾಮಗಾರಿಗಳನ್ನು ತನಿಖೆ ನಡೆಸಲು ಲೋಕಾಯುಕ್ತಕ್ಕೆ ವಹಿಸಿರುವ ಪ್ರಕರಣಗಳನ್ನು ಹಿಂಪಡೆಯಬೇಕು’ ಎಂದು ಒತ್ತಾಯಿಸಿದರು.

‘ಗ್ರಾಮೀಣ ಭಾಗದ ಅಭಿವೃದ್ಧಿಗೆ ಪೂರಕವಾಗಿ ತ್ಯಾಜ್ಯ ವಿಲೇವಾರಿ, ರಸ್ತೆ, ವಸತಿ, ನರೇಗಾ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸುತ್ತಿರುವ ಎಲ್ಲ ಸಿಬ್ಬಂದಿಯ ಬೇಡಿಕೆಗಳನ್ನು 15 ದಿನಗಳ ಒಳಗಾಗಿ ಈಡೇರಿಸದಿದ್ದರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿಯ 60 ಸಾವಿರ ನೌಕರರೊಂದಿಗೆ ಬೃಹತ್ ಪ್ರತಿಭಟನೆ ಮಾಡಲಾಗುವುದು’ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಡಾ. ಅನುಪಮಾ ನಿರಂಜನ ಪ್ರಶಸ್ತಿ: ಎಲ್. ಗಿರಿಜಾ ಆಯ್ಕೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ವತಿಯಿಂದ ನೀಡುವ ‘ಡಾ. ಅನುಪಮಾ ನಿರಂಜನ ಪ್ರಶಸ್ತಿಗೆ’ ಕವಯತ್ರಿ ಎಲ್. ಗಿರಿಜಾ ರಾಜ್ ಹಾಗೂ ‘ಕನ್ನಡ ಪರಿಚಾರಕ ಪ್ರಶಸ್ತಿಗೆ ಕನ್ನಡ ಕಾರ್ಯಕರ್ತ ಕುವರ ಯಲ್ಲಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ತಲಾ ₹5 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಫಲಕ ಒಳಗೊಂಡಿದೆ ಎಂದು ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ತಿಳಿಸಿದ್ದಾರೆ.

ಡಾ. ಅನುಪಮಾ ನಿರಂಜನ ಜನ್ಮದಿನ ಹಬ್ಬದ ಅಂಗವಾಗಿ ಆಯೋಜಿಸಿದ್ದ ರಾಜ್ಯಮಟ್ಟದ ಮಹಿಳಾ ಕಥಾ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಪಡೆದಿರುವ ಡಾ. ಎಸ್.ವಿ.ಗೌರಿ ಅವರಿಗೆ ₹2,500, ಆಶಾ ಹೆಗಡೆ ಅವರಿಗೆ ₹2 ಸಾವಿರ, ವಿಜಯಲಕ್ಷ್ಮೀ ನುಗ್ಗೇಹಳ್ಳಿ ಅವರಿಗೆ ₹1,500 ನೀಡಲಾಗುವುದು. ಜೂನ್ 10ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ನಡೆಯುವ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಜಾಹೀರಾತು ಅಳವಡಿಸಿರುವ ರೈಲಿಗೆ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಚಾಲನೆ ನೀಡಿದರು. ಕೆಎಂಎಫ್ ಅಧಿಕಾರಿಗಳು ಇದ್ದರು

ರೈಲು ಬೋಗಿಯಲ್ಲಿ ‘ನಂದಿನಿ’ ಜಾಹೀರಾತು

ಬೆಂಗಳೂರು: ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ನಾಲ್ಕು ರೈಲುಗಳಿಗೆ ನಂದಿನಿ ಉತ್ಪನ್ನಗಳ ಜಾಹೀರಾತು ಅಳವಡಿಸಲು ಕೆಎಂಎಫ್ ನಿರ್ಧರಿಸಿದೆ.

ಜಾಹೀರಾತು ಅಳವಡಿಸಿರುವ ಮೊದಲ ರೈಲಿಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ಅವರು ಬುಧವಾರ ಚಾಲನೆ ನೀಡಿದರು. ಬೆಂಗಳೂರಿನಿಂದ ಮೈಸೂರು, ಶಿವಮೊಗ್ಗ ಹಾಗೂ ಧಾರವಾಡಕ್ಕೆ ಈ ರೈಲು ಸಂಚರಿಸುತ್ತದೆ.

ಇದೇ ವೇಳೆ ರೈಲು ನಿಲ್ದಾಣದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹಾಲಿನ ಉತ್ಪನ್ನಗಳನ್ನು ವಿತರಿಸಲಾಯಿತು. ಕೆಎಂಎಫ್ ಅಧಿಕಾರಿಗಳು ಹಾಜರಿದ್ದರು.

ವಿವಿಧೆಡೆ ಶೋಧ

ನವದೆಹಲಿ (ಪಿಟಿಐ): ಆದಾಯ ತೆರಿಗೆ (ಐಟಿ) ಇಲಾಖೆಯ ಅಧಿಕಾರಿಗಳು ಬುಧವಾರ ವಿವಿಧ ರಾಜ್ಯಗಳಲ್ಲಿನ ಹಲವು ವ್ಯಾಪಾರಿ ಸಂಸ್ಥೆಗಳ ಮೇಲೆ ಶೋಧ ಕಾರ್ಯಾಚರಣೆ ನಡೆಸಿದೆ. ತೆರಿಗೆ ವಂಚನೆಗೆ ಸಂಬಂಧಿಸಿದ ತನಿಖೆಯ ಭಾಗವಾಗಿ ಈ ದಾಳಿ ನಡೆದಿದೆ ಎಂದು ಐಟಿ ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿ, ಹರಿಯಾಣ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ಹಲವು ವ್ಯಾಪಾರಿ ಸಂಸ್ಥೆಗಳ ಕಚೇರಿಗಳ ಮೇಲೆ ಐಟಿ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಮದ್ಯ ತಯಾರಿಕೆ ಮತ್ತು ಮಾರಾಟ, ಡೇರಿ, ರಿಯಲ್ ಎಸ್ಟೇಟ್ ಮತ್ತು ಲಾಜಿಸ್ಟಿಕ್ಸ್ ಸೇರಿದಂತೆ ವಿವಿಧ ಉದ್ಯಮಗಳ ಕಚೇರಿಗಳ ಮೇಲೆ ಈ ದಾಳಿ ನಡೆದಿದೆ. ತೆರಿಗೆ ವಂಚನೆಗೆ ಸಂಬಂಧಿಸಿದಂತೆ ಆಯಾ ರಾಜ್ಯಗಳಲ್ಲಿನ ಇಲಾಖೆಯ ವಿವಿಧ ತನಿಖಾ ನಿರ್ದೇಶನಾಲಯಗಳು ಮಾಹಿತಿ ಸಂಗ್ರಹಿಸಿದ ಬಳಿಕ ಶೋಧ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾ ಪಂಚಾಯತ, ಕಲಬುರಗಿ,
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕಲಬುರಗಿ.
ದೂರವಾಣಿ ಸಂಖ್ಯೆ :08472-247260, ಇ-ಮೇಲ್ ವಿಳಾಸ: domgulbarga1@gmail.com
ಸಂ:ಜಿಅಕಸಂಇ:ಲೆಕ್ಕ:ಆಹಾರ.ಸಿಆರ್-19/2022-23 ದಿನಾಂಕ:31.05.2022.

:: ಟೆಂಡರ್ ಪ್ರಕಟಣೆ ::

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಲಬುರಗಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ / ನಂತರದ ವಿದ್ಯಾರ್ಥಿನಿಲಯಗಳಿಗೆ ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಪದವಿಪೂರ್ವ ಕಾಲೇಜು, ನವೋದಯ ಮಾದರಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಿಗೆ 2022-23ನೇ ಸಾಲಿಗೆ ಆಹಾರ ಪದಾರ್ಥಗಳನ್ನು ಮತ್ತು ಇತರೆ ಸಾಮಗ್ರಿಗಳನ್ನು ತಾಲೂಕುವಾರು ಸರಬರಾಜು ಮಾಡಲು ಇಚ್ಛೆಯುಳ್ಳ, ಅರ್ಹ ನೊಂದಾಯಿತ ಸಂಘ / ಸಂಸ್ಥೆಗಳಿಂದ, ಅರ್ಹ ಸರಬರಾಜುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ತಾಲೂಕುವಾರು ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡತೆ ಇರುತ್ತದೆ.

1	ಟೆಂಡರ್ ಪ್ರಕಟಣೆ ದಿನಾಂಕ & ವಿವರ	ಸಂ:ಜಿಅಕಸಂಇ:ಲೆಕ್ಕ:ಆಹಾರ/ಸಿಆರ್:19/2022-23 ದಿನಾಂಕ: 31.05.2022						
	ತಾಲೂಕ	ಅಫಜಲಪುರ	ಆಳಂದ	ಚಿಂಚೋಳಿ	ಸೇಡಂ	ಜೇವರ್ಗಿ	ಕಲಬುರಗಿ	ಚಿತ್ತಾಪೂರ
2	ಟೆಂಡರ್‌ಗೆ ಇಟ್ಟಿರುವ ಮೊತ್ತ (ಲಕ್ಷಗಳಲ್ಲಿ)	108.96	104.61	112.35	95.70	181.86	524.31	278.37
3	ಇ.ಎಂ.ಡಿ ಮೊತ್ತ:	200000	200000	200000	191400	272790	786465	417555
4	ಪ್ರಿ ಬಿಡ್ ಸಭೆ ದಿನಾಂಕ ಮತ್ತು ಸಮಯ.	07.06.2022 @ 3.00 pm ಸ್ಥಳ: ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿ.ಪಿ.ಎ ಕಛೇರಿ ಮೊದಲನೇ ಮಹಡಿ ಸ್ಟೇಷನ ರೋಡ ಕಲಬುರಗಿ						
5	ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ.	30.06.2022 @ 5.30 pm					15.07.2022 5.30 pm	
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ.	02.07.2022 @ 11.00 am					18.07.2022, 11.00am	
7	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ.	04.07.2022 @ 11.00 am					21.07.2022, 11.00am	
8	ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ	ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿ.ಪಿ.ಎ ಕಛೇರಿ ಮೊದಲನೇ ಮಹಡಿ ಸ್ಟೇಷನ ರೋಡ ಕಲಬುರಗಿ Email Address: domgulbarga1@gmail.com Contact No: 9686397868/ 08472-247260						

ಹೆಚ್ಚಿನ ಮಾಹಿತಿಗಾಗಿ, ಹಾಗೂ ಟೆಂಡರ್ ಡಾಕ್ಯೂಮೆಂಟ್ ವಿವರಗಳನ್ನು http://e-proc.karnataka.gov.in ಇಂದ ಪಡೆದು ತಿಳಿದುಕೊಳ್ಳಬಹುದು.
ಸಹಿ/- ಜಿಲ್ಲಾ ಅಧಿಕಾರಿಗಳು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/219/ಎಂ.ಸಿ.&ಎ/2022-23

“ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ವಿಜಯನಗರ ಜಿಲ್ಲೆ ಹೊಸಪೇಟೆ-583201”
ಸಂ:ಜಿನಕೋವಿ:ಅನ(ಮು)-4/ಟೆಂಡರ್-01/2022-23 ದಿನಾಂಕ: 31-05-2022

ಟೆಂಡರ್ ಪ್ರಕಟಣೆ

ವಿಜಯನಗರ ಜಿಲ್ಲೆ ವ್ಯಾಪ್ತಿಯ ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ ಪುರಸಭೆ, ಕಮಲಾಪುರ, ಕೂಡ್ಲಿಗಿ, ಕೊಟ್ಟೂರು ಮತ್ತು ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿಗಳಿಗೆ ನಗರೋತ್ಥಾನ (ಮುನ್ಸಿಪಾಲಿಟಿ) 04 ನೇ ಹಂತದ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆವಾರು ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಪ್ಯಾಕೇಜ್ ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜುಗಳನ್ವಯ ಈ ಕೆಳಕಾಣಿಸಿದಂತೆ **Public Procurement Portal** ಮೂಲಕ ಟೆಂಡರ್ ಅಹ್ವಾನಿಸಲಾಗಿರುತ್ತದೆ.

01. Package-1: Improvements of road and construction of drain works in ward No20 and 22 of Harapanahalli TMC limits under amruth Nagarothana (mun) Phase-4 Grant (DMA/2022-23/RD/WORK_INDENT132238). **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 28.36. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 25.26. **ಇ.ಎಂ.ಡಿ.(ರೂ.ಗಳಲ್ಲಿ):** 56720.00
02. Package-1: Improvements of road and Constructions of Drains in ward No 01,02, 04,05,06, 10,14 ,20,22 in Hagaribomanahalli town limits under amruth Nagarothana (mun) Phase-4 Grant. (DMA/2022-23/BR/ WORK_INDENT132215). **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 135.31. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 120.87. **ಇ.ಎಂ.ಡಿ.(ರೂ.ಗಳಲ್ಲಿ):** 202965.00
03. Package-1: Improvements and constructions of BT roads and drain works in ward No.05,06,09, 12,13,14,18 & 20 of kamalapura town limits under amruth Nagarothana (mun) Phase-4 Grant. (DMA/2022-23/RD/WORK_INDENT132203). **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 93.78. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 83.11. **ಇ.ಎಂ.ಡಿ.(ರೂ.ಗಳಲ್ಲಿ):** 187560.00
04. Package-1: Improvements and constructions of CC roads, footpath, drains, Bridge and Protection wall nala works in various locations at Kudaligi town limits under amruth Nagarothana (mun) Phase-4 Grant. (DMA/2022-23/RD/WORK_INDENT132221). **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 217.01. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 193.64. **ಇ.ಎಂ.ಡಿ.(ರೂ.ಗಳಲ್ಲಿ):** 325515.00
05. Package-1: Improvements and constructions of BT roads, footpath and drain works in ward No. 06,11,14,18, and other various locations at kottur town limits under amruth Nagarothana (mun) Phase-4 Grant. (DMA/2022-23/RD/WORK_INDENT132214). **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 111.05. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 99.05. **.ಎಂ.ಡಿ.(ರೂ.ಗಳಲ್ಲಿ):** 200000.00
06. Package-1: Improvements of road and construction of drain works in ward No.03 and 04 of mariyamanahalli town limits under amruth Nagarothana (mun) Phase-4 Grant (DMA/2022-23/ RD/ WORK_ INDENT132186). **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 32.66. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 29.13. **ಇ.ಎಂ.ಡಿ.(ರೂ.ಗಳಲ್ಲಿ):** 65320.00
1. Last date & time for tender queries / clarifications: **02.07.2022 at 17.30 Hrs.** 2. Pre Bid Meeting : **13-06-2022 at 11.00 hrs.** 3. Last date and time for receipt of tender technical bids: **04-07-2022 at 16.30 hrs.** 4. Date & time for opening of bids: **06-07-2022 at 11:00 Hrs.** 5. Auto extension of tender schedule: **03 days**

ಮೇಲ್ಕಂಡ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಟೆಂಡರ್ ದಾಖಲಾತಿ ಮತ್ತು ಷರತ್ತುಗಳಿಗಾಗಿ **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿ, ಟೆಂಡರ್ ಭರ್ತಿ ಮಾಡುವುದು ಹೆಚ್ಚಿನ ವಿವರಗಳಿಗೆ ಶ್ರೀ ಬಿ.ವೀರೇಶ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, (ದೂ ಸಂ : 9731867295) ಇವರನ್ನು ಸಂಪರ್ಕಿಸಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಜಿಲ್ಲಾನಗರಾಭಿವೃದ್ಧಿ ಕೋಶ, ವಿಜಯನಗರ ಜಿಲ್ಲೆ.
ಡಿಐಪಿಆರ್/ಹೊಸಪೇಟೆ/15/ಎಂಸಿಎ/2022-23



ಕೋಮುಹಿಂಸೆ: ಮುಸ್ಲಿಂ ಸಮಾವೇಶದಲ್ಲಿ ನಿರ್ಣಯ ಅಂಗೀಕಾರ

‘ಸಂತ್ರಸ್ತರ ರಕ್ಷಣೆಗೆ ಕಾನೂನು ರೂಪಿಸಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ಕೋಮುಹಿಂಸೆ ಸಂತ್ರಸ್ತರಿಗೆ ರಕ್ಷಣೆ, ಪರಿಹಾರ, ಪುನರ್ವಸತಿ ಖಾತರಿ ಪಡಿಸುವ ಕಾನೂನು ರೂಪಿಸಬೇಕು ಹಾಗೂ ಮುಸ್ಲಿಂ ಅಲ್ಪಸಂಖ್ಯಾತರ ಶಿಕ್ಷಣ, ವಸತಿ, ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಅವರ ಜನಸಂಖ್ಯೆ ಪ್ರಮಾಣಕ್ಕೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಮೀಸಲಿಡಬೇಕು ಎಂದು ಮುಸ್ಲಿಂ ಸಮಾವೇಶದಲ್ಲಿ ನಿರ್ಣಯ ಅಂಗೀಕರಿಸಲಾಯಿತು.

ಸಿಪಿಎಂ ರಾಜ್ಯ ಸಮಿತಿಯು ನಗರದಲ್ಲಿ ಆಯೋಜಿಸಿದ್ದ ಮುಸ್ಲಿಂ ಸಮಾವೇಶದ ಕೊನೆಯ ದಿನವಾದ ಬುಧವಾರ ಅಲ್ಪಸಂಖ್ಯಾತರ ಅಭಿವೃದ್ಧಿ ವಿಚಾರದಲ್ಲಿ ಆಗಬೇಕಾದ ಕಾರ್ಯಗಳ ಬಗ್ಗೆ ಚರ್ಚಿಸಲಾಯಿತು. ಧಾರ್ಮಿಕ ಅಲ್ಪಸಂಖ್ಯಾತರ ರಕ್ಷಣೆ, ಪರಿಹಾರ, ಪುನರ್ವಸತಿ, ಸಬಲೀಕರಣಕ್ಕೆ ಸಂಬಂಧಿಸಿದ ಎರಡು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು.

‘ಧಾರ್ಮಿಕ ಅಲ್ಪಸಂಖ್ಯಾತರು ಅದರಲ್ಲೂ ಪ್ರಧಾನವಾಗಿ ಮುಸ್ಲಿಂ ಸಮುದಾಯ ಕೋಮು ಹಿಂಸೆಗಳಿಂದ ಜರ್ಜರಿತಗೊಂಡಿದೆ. ಕೋಮು ಹಿಂಸೆಗೆ ಗುರಿಯಾಗುತ್ತಿರುವ ಅಲ್ಪಸಂಖ್ಯಾತ ಸಂತ್ರಸ್ತರಿಗೆ ಇತ್ತೀಚಿನ ವರ್ಷಗಳಲ್ಲಿ ಯಾವುದೇ ರಕ್ಷಣೆ ದೊರಕುತ್ತಿಲ್ಲ. ಪರಿಹಾರವನ್ನೂ ನೀಡದೇ ತಾರತಮ್ಯ ಎಸಗಲಾಗುತ್ತಿದೆ. ಈ ಕಳವಳಕಾರಿ ಬೆಳವಣಿಗೆಗಳಿಂದ ಧಾರ್ಮಿಕ ಅಲ್ಪಸಂಖ್ಯಾತ ಗುಂಪುಗಳು ಆತಂಕವನ್ನು ಎದುರಿಸುತ್ತಿವೆ. ಇಂತಹ ಅಸಹಾಯ, ಅಸುರಕ್ಷಿತ ಪ್ರಜ್ಞೆ, ತಾರತಮ್ಯಗಳು ದೇಶದ ಘನತೆಗೆ ತಕ್ಕುದಲ್ಲ’.

‘ಸಾಚಾರ್ ಸಮಿತಿ ಹಾಗೂ ರಂಗನಾಥ ಮಿಶ್ರ ಸಮಿತಿಗಳ ವರದಿ ಪ್ರಕಾರ ಮುಸ್ಲಿಮರು ಅತ್ಯಂತ ಹಿಂದುಳಿದಿರುವ ಸಮುದಾಯ. ಅವರ ಏಳಿಗೆಗಾಗಿ ಈ ಸಮಿತಿಗಳು ಹಲವು ಶಿಫಾರಸುಗಳನ್ನು ಮಾಡಿವೆ. ಈ ಶಿಫಾರಸುಗಳು ಮೂಲೆಗುಂಪಾಗಿವೆ. ದೇಶದ ಜನ ಸಂಖ್ಯೆಯ ಶೇ 15 ರಷ್ಟಿರುವ ಸಮುದಾಯವೊಂದನ್ನು ಸಬಲೀಕರಣಗೊಳಿಸುವುದು ದೇಶದ ಒಟ್ಟು ಅಭಿವೃದ್ಧಿಯ ದೃಷ್ಟಿಯಲ್ಲೂ ಪ್ರಧಾನವಾದುದು’ ಎಂಬ ಅಭಿಪ್ರಾಯ ವ್ಯಕ್ತವಾಯಿತು.



ಮುಸ್ಲಿಂ ಸಮಾವೇಶದಲ್ಲಿ ಚಿಂತಕ ಅಮಾನುಲ್ಲಾ ಖಾನ್ ಮಾತನಾಡಿದರು. ಮುಖಂಡರಾದ ಸಯ್ಯದ್ ಮುಜೀಬ್, ಶೇಖ್ ಷಾ ಖಾದ್ರಿ ಸಿಂಧನೂರು, ಡಿವೈಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಸಿಪಿಎಂ ರಾಜ್ಯ ಕಾರ್ಯದರ್ಶಿ ಯು.ಬಸವರಾಜು, ಖಾಸಿಂ ಸರ್ದಾರ್ ಕೊಪ್ಪಳ, ಗೈಬು ಜೈನೆ ಖಾನ್ ಬೆಳಗಾವಿ, ಅಕ್ರಂ ಪಾಷ ಬಾಗೇಪಲ್ಲಿ ಇದ್ದರು

ಸೋನಿಯಾ, ರಾಹುಲ್‌ಗಾಂಧಿಗೆ ಸಮನ್ಸ್

ಒಂದನೇ ಪುಟದಿಂದ

ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು ಸೋನಿಯಾ ಹಾಗೂ ರಾಹುಲ್ ಅವರಿಗೆ ಸಮನ್ಸ್ ನೀಡಿರುವುದು ಇದೇ ಮೊದಲು. ದ್ವೇಷ ರಾಜಕಾರಣದ ವಿರುದ್ಧ ರಾಜಕೀಯ ಹೋರಾಟ ರೂಪಿಸಲು ಕಾಂಗ್ರೆಸ್ ಯೋಜನೆ ರೂಪಿಸುತ್ತಿದೆ. ಹಣದ ವಹಿವಾಟಿಗೆ ಸಂಬಂಧಪಡದ ಈ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆ ಆರೋಪವನ್ನು ಹೊರಿಸಿರುವುದು ವಿಚಿತ್ರವಾಗಿದೆ ಎಂದು ಕಾಂಗ್ರೆಸ್ ಹೇಳಿದೆ.

ತನ್ನ ಅಧಿಕೃತ ಟ್ವಿಟರ್ ಖಾತೆಯಿಂದ ಟ್ವೀಟ್ ಮಾಡಿರುವ ಕಾಂಗ್ರೆಸ್, ‘ಆಗ, ಬ್ರಿಟಿಷರು ಹಾಗೂ ಅವರ ದೌರ್ಜನ್ಯಗಳಿಗೆ ಕಾಂಗ್ರೆಸ್ ಪಕ್ಷವು ಹೆದರಿರಲಿಲ್ಲ. ಸೋನಿಯಾ ಹಾಗೂ ರಾಹುಲ್ ಗಾಂಧಿ ಅವರಿಗೆ ಇ.ಡಿ ನೀಡಿರುವ ನೋಟಿಸ್‌ನಿಂದ ಈಗ ಹೆದರಿಕೆ ಆಗುತ್ತದೆಯೇ? ನಾವು ಹೋರಾಡುತ್ತೇವೆ. ನಾವು ಗೆಲ್ಲುತ್ತೇವೆ. ನಾವು ಬಗ್ಗುವುದಿಲ್ಲ. ನಮಗೆ ಹೆದರಿಕೆ ಇಲ್ಲ’ ಎಂದು ಹೇಳಿದೆ.

‘ಇಬ್ಬರೂ ನಾಯಕರು ಇ.ಡಿ. ಎದುರು ಹಾಜರಾಗಲಿದ್ದಾರೆ.

> **ಅಕ್ರಮ ನಡೆದಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರ ಲಭ್ಯವಾಗದ ಕಾರಣ 2015ರಲ್ಲೇ ಪ್ರಕರಣ ಮುಕ್ತಾಯವಾಗಿದೆ. ಏಳು ವರ್ಷಗಳ ಬಳಿಕ ಪ್ರಕರಣವನ್ನು ಮತ್ತೆ ಕೆದಕಿ, ಸಮನ್ಸ್ ನೀಡಲಾಗಿದೆ**
> **ಅಭಿಷೇಕ್ ಮನುಸಿಂಘ್ವಿ,** ಕಾಂಗ್ರೆಸ್ ವಕ್ತಾರ

> **ಕಾಂಗ್ರೆಸ್ ಹೇಳುತ್ತಿರುವಂತೆ ಆರೋಪಗಳೆಲ್ಲವೂ ಸುಳ್ಳೇ ಆಗಿದ್ದರೆ, ಅವುಗಳನ್ನು ನ್ಯಾಯಾಲಯದಲ್ಲಿ ವಜಾ ಮಾಡಿಸಿಕೊಳ್ಳಲಿ**
> **ಜೆ.ಪಿ.ನಡ್ಡಾ,** ಬಿಜೆಪಿ ಅಧ್ಯಕ್ಷ

ಇ.ಡಿ.ಯನ್ನು ನಾವು ಎದುರಿಸುತ್ತೇವೆ. ಇಂತಹ ತಂತ್ರಗಾರಿಕೆಗಳಿಂದ ನಮಗೆ ಒಂದಿಷ್ಟೂ ನಡುಕ ಉಂಟಾಗಿಲ್ಲ’ ಎಂದು ಪಕ್ಷದ ಹಿರಿಯ ವಕ್ತಾರ ಅಭಿಷೇಕ್ ಮನುಸಿಂಘ್ವಿ ಸುದ್ದಿಗೋಷ್ಠಿಯಲ್ಲಿ ಹೇಳಿದರು. ನರೇಂದ್ರ ಮೋದಿ ಸರ್ಕಾರ ಕೀಳುಮಟ್ಟದ ರಾಜಕೀಯ, ದ್ವೇಷ ರಾಜಕಾರಣದಲ್ಲಿ ತೊಡಗಿದೆ ಎಂದು ಮತ್ತೊಬ್ಬ ವಕ್ತಾರ ರಣದೀಪ್ ಸುರ್ಜೇವಾಲಾ ವಾಗ್ದಾಳಿ ನಡೆಸಿದರು.

ಇತ್ತೀಚೆಗೆ ಸಿಬಿಐನಿಂದ ವಿಚಾರಣೆಗೆ ಒಳಗಾಗಿದ್ದ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ, ರಾಜಕೀಯ ಎದುರಾಳಿಗಳನ್ನು ಹಿಂಸಿಸುವುದೇ ಇಂತಹ ದಾಳಿಗಳ ಉದ್ದೇಶ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಪ್ಪೆಸಗಿಲ್ಲ: ಕಾಂಗ್ರೆಸ್

‘ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು ಪ್ರಕಟಿಸುವ ಅಸೋಸಿಯೇಟೆಡ್ ಜರ್ನಲ್ಸ್ ಲಿ.(ಎಜೆಎಲ್) ಸಂಸ್ಥೆಯು ದಶಕಗಳಿಂದ ಸಾಲದಲ್ಲಿದೆ. ಹೀಗಾಗಿ ಕಾಂಗ್ರೆಸ್ ಪಕ್ಷವು ₹90 ಕೋಟಿಯನ್ನು ಅದರಲ್ಲಿ ಹೂಡಿಕೆ ಮಾಡಿತ್ತು. ದೇಶದ ಹಾಗೂ ವಿದೇಶದ ಎಲ್ಲ ಕಂಪನಿಗಳು ಮಾಡುವ ವಿಧಾನವನ್ನೇ ಎಜೆಎಲ್ ಅನುಸರಿಸಿದೆ. ಸಂಸ್ಥೆಯು ಸಾಲವನ್ನು ಷೇರುಗಳನ್ನಾಗಿ ಪರಿವರ್ತಿಸಿತು. ₹90 ಕೋಟಿ ಮೌಲ್ಯದ ಷೇರುಗಳನ್ನು ಯಂಗ್ ಇಂಡಿಯಾ ಎಂಬ ಹೊಸ ಸಂಸ್ಥೆಗೆ ನೀಡಲಾಯಿತು’ ಎಂದು ಕಾಂಗ್ರೆಸ್ ವಕ್ತಾರ ಅಭಿಷೇಕ್ ಮನುಸಿಂಘ್ವಿ ವಿವರಿಸಿದ್ದಾರೆ.

‘ಸೋನಿಯಾ, ರಾಹುಲ್ ಹಾಗೂ ಇತರ ಕಾಂಗ್ರೆಸ್ ಮುಖಂಡರು ಯಂಗ್ ಇಂಡಿಯಾ ಸಂಸ್ಥೆಯಲ್ಲಿ ಷೇರು ಹೊಂದಿದ್ದಾರೆ. ಈ ಸಂಸ್ಥೆಯು ಲಾಭರಹಿತ ಸಂಸ್ಥೆ ಎಂಬುದಾಗಿ ನೋಂದಣಿಯಾಗಿದೆ. ದೈನಂದಿನ ವಹಿವಾಟು ನಡೆಸುತ್ತಿರುವ ಎಜೆಎಲ್ ಈಗ ಸಾಲಮುಕ್ತವಾಗಿದೆ’ ಎಂದು ಸಿಂಘ್ವಿ ಹೇಳಿದ್ದಾರೆ. ‘ಯಾವುದೇ ಸಣ್ಣ ಆಸ್ತಿಯಾಗಲೀ ಅಥವಾ ಹಣವಾಗಲೀ ವರ್ಗಾವಣೆಯಾಗಿಲ್ಲ. ಹೀಗಿರುವಾಗ ಹಣ ಅಕ್ರಮ ವರ್ಗಾವಣೆ ಆಗಲು ಹೇಗೆ ಸಾಧ್ಯ? ಹಣ ಎಲ್ಲಿದೆ? ಯಾವ ಹಣ ವರ್ಗಾವಣೆ ಆಗಿಲ್ಲದಿದ್ದರೂ ಅಕ್ರಮವಾಗಿ ಹಣ ವರ್ಗಾವಣೆ ಪ್ರಕರಣ ದಾಖಲಾಗಿದೆ. ಯಂಗ್ ಇಂಡಿಯಾ ಯಾವುದೇ ಸ್ವರೂಪದಲ್ಲಿ ಹಣವನ್ನು ಬಳಸುವಂತಿಲ್ಲ. ಏಕೆಂದರೆ ಅದು ಡಿವಿಡೆಂಡ್ ನೀಡುವ ಅಥವಾ ಲಾಭ ಮಾಡುವ ಸಂಸ್ಥೆಯಲ್ಲ’ ಎಂದು ಸಿಂಘ್ವಿ ಹೇಳಿದ್ದಾರೆ.

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ, ಬೆಂಗಳೂರು – 560070.
ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/ಎಇ-1/ಟೆಂಡರ್/08/2022-23 ದಿನಾಂಕ: 01.06.2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ನೋಟೀಸ್

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲೆ, ಬೆಂಗಳೂರು ಕಛೇರಿಯಿಂದ Shathamaana Shaale/2021-22 & MLA Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 09.06.2022ರ ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಿ ಅಥವಾ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/-
ಕಾರ್ಯಪಾಲಕ ಅಭಿಯಂತರರು,
ಪ.ರಾ.ಇ.ವಿಭಾಗ, ಬೆಂ.ನ, ಬೆಂಗಳೂರು
DIPR/CP/716/Zenkar/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ.
ದೂರವಾಣಿ: 08192-259050, ಫ್ಯಾಕ್ಸ್: 08192-233743
ಸಂ.ಚಿಜಿಆ/ದಾ/ಹೆಚ್‌ಎಂಎಸ್(2)/21/2022-23 ದಿನಾಂಕ: 23.05.2022

ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆ

2022-23ನೇ ಸಾಲಿಗೆ ಆಸ್ಪತ್ರೆಯ S.T.P. ಪ್ಲಾಂಟ್‌ಗೆ ARTICULTURE SOLUTION & CLORINE POWDER ಗಳನ್ನು ಖರೀದಿ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999-2000ರ ಪ್ರಕಾರ **ಮ್ಯಾನ್ಯುವಲ್ ಟೆಂಡರ್** ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ **ಟೆಂಡರ್** ಕರೆಯಲಾಗಿದೆ.
(1) ISSUE OF TENDER DOCUMENT From 23.05.2022 to 03.06.2022 4.30pm (2) Last Date for Queries 02.06.2022 up to 4.00 PM (3) Last date to submit filled up tender form 04.06.2022 1.00 pm (4) Opening of Techno-Commercial Bid 04.06.2022 3.30 pm (5) Approximate cost of the Tender 5 Lakhs (6) Demonstration of the Equipments either at SUPERINTENDENT, CHIGATERI DIST HOSPITAL, DAVANGERE or at the place of manufacturing unit. Will Be Intimated to the qualified Bidders. (7) EMD 12,500/- (7) Cost of Tender Documents: Rs. 500+50 (non refundable) In form of demand draff.
ಸಹಿ/- ಅಧೀಕ್ಷಕರು,
ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ.
ವಾಸಾಇ/ಡಿವಿಜಿ/166/ಎಂಸಿಎ/2022-23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ
ದೂರವಾಣಿ – 08182-271101/221010/222082;
ಫ್ಯಾಕ್ಸ್: 277082; ಇ-ಮೇಲ್: - deo.shimoga@gmail.com
ನಂ..SMGDC.DUDC/PLAN/15/89862/2022 ದಿನಾಂಕ: 31.05.2022

ಟೆಂಡರ್ ಪ್ರಕಟಣೆ

ಸರ್ಕಾರದ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ಯೋಜನೆಯಡಿ ಪಟ್ಟಣಪಂಚಾಯಿತಿ, ತೀರ್ಥಹಳ್ಳಿ,ಹೊಸನಗರ,ಜೋಗ್-ಕಾರ್ಗಲ್, ಅನವಟ್ಟಿ ಮತ್ತು ಹೊಳೆಹೊನ್ನೂರು ಪ್ರದೇಶ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ಗುತ್ತಿಗೆ ದಾರರಿಂದ ಪ್ರತಿ ಪಟ್ಟಣ ಪಂಚಾಯಿತಿಗೆ ಸಿಂಗಲ್ ಪ್ಯಾಕೇಜ್ ನಂತೆ ಟೆಂಡರ್ ಗಳನ್ನು ಇ-ಪ್ರಕ್ಯೂರ್‌ಮೆಂಟ್(e-procurement) ಮೂಲಕ ಆಹ್ವಾನಿಸಿದೆ, ಹೆಚ್ಚಿನ ಮಾಹಿತಿಗೆ shivamoggadudc.mrc.gov.in ನೋಡಬಹುದು ಮತ್ತು ಕಾರ್ಯಪಾಲಕ ಅಭಿಯಂತರರು, ಜಿಲ್ಲಾನಗರಾಭಿವೃದ್ಧಿ ಕೋಶ,ಜಿಲ್ಲಾಧಿಕಾರಿಗಳ ಕಛೇರಿ,ಶಿವಮೊಗ್ಗ ರವರನ್ನು ಸಂಪರ್ಕಿಸಬಹುದು. ಟೆಂಡರ್ ಇಂಡೆಟ್ ನಂ. ಈ ಕೆಳಗಿನಂತೆ ಇರುತ್ತದೆ.
ಕ್ರ.ಸಂ. 1. ಪಟ್ಟಣ ಪಂಚಾಯಿತಿ ಹೆಸರು ಮತ್ತು ಇಡೆಂಟ್ ನಂ.: ಪಟ್ಟಣ ಪಂಚಾಯಿತಿ, ತೀರ್ಥಹಳ್ಳಿ DMA/2022-23/RD/WORK_INDENT132124 **ಟೆಂಡರ್ ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ:** 282.21 **ಇ.ಎಂಡಿ ಮೊತ್ತ ರೂ.ಲಕ್ಷಗಳಲ್ಲಿ:** 4.23 **ಗುತ್ತಿಗೆ ಅವಧಿ ಮಳೆಗಾಲ ಹೊರತುಪಡಿಸಿ:** 9 ತಿಂಗಳುಗಳು
ಕ್ರ.ಸಂ. 2. ಪಟ್ಟಣ ಪಂಚಾಯಿತಿ ಹೆಸರು ಮತ್ತು ಇಡೆಂಟ್ ನಂ.: ಪಟ್ಟಣ ಪಂಚಾಯಿತಿ, ಹೊಸನಗರ DMA/2022-23/RD/WORK_INDENT132123 **ಟೆಂಡರ್ ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ:** 237.26 **ಇ.ಎಂಡಿ ಮೊತ್ತ ರೂ.ಲಕ್ಷಗಳಲ್ಲಿ:** 3.56 **ಗುತ್ತಿಗೆ ಅವಧಿ ಮಳೆಗಾಲ ಹೊರತುಪಡಿಸಿ:** 9 ತಿಂಗಳುಗಳು
ಕ್ರ.ಸಂ. 3. ಪಟ್ಟಣ ಪಂಚಾಯಿತಿ ಹೆಸರು ಮತ್ತು ಇಡೆಂಟ್ ನಂ.: ಪಟ್ಟಣ ಪಂಚಾಯಿತಿ, ಜೋಗ್-ಕಾರ್ಗಲ್ DMA/2022-23/RD/WORK_INDENT 132121 **ಟೆಂಡರ್ ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ:** 207.47 **ಇ.ಎಂಡಿ ಮೊತ್ತ ರೂ.ಲಕ್ಷಗಳಲ್ಲಿ:** 3.12 **ಗುತ್ತಿಗೆ ಅವಧಿ ಮಳೆಗಾಲ ಹೊರತುಪಡಿಸಿ:** 9 ತಿಂಗಳುಗಳು
ಕ್ರ.ಸಂ. 4. ಪಟ್ಟಣ ಪಂಚಾಯಿತಿ ಹೆಸರು ಮತ್ತು ಇಡೆಂಟ್ ನಂ.: ಪಟ್ಟಣ ಪಂಚಾಯಿತಿ, ಆನವಟ್ಟಿ DMA/2022-23/RD/WORK_INDENT132112 **ಟೆಂಡರ್ ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ:** 212.93 **ಇ.ಎಂಡಿ ಮೊತ್ತ ರೂ.ಲಕ್ಷಗಳಲ್ಲಿ:** 3.195 **ಗುತ್ತಿಗೆ ಅವಧಿ ಮಳೆಗಾಲ ಹೊರತುಪಡಿಸಿ:** 9 ತಿಂಗಳುಗಳು
ಕ್ರ.ಸಂ. 5. ಪಟ್ಟಣ ಪಂಚಾಯಿತಿ ಹೆಸರು ಮತ್ತು ಇಡೆಂಟ್ ನಂ.: ಪಟ್ಟಣ ಪಂಚಾಯಿತಿ, ಹೊಳೆಹೊನ್ನೂರು DMA/2022-23/RD/WORK_INDENT 132119 **ಟೆಂಡರ್ ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ:** 145.22 **ಇ.ಎಂಡಿ ಮೊತ್ತ ರೂ.ಲಕ್ಷಗಳಲ್ಲಿ:** 2.180 **ಗುತ್ತಿಗೆ ಅವಧಿ ಮಳೆಗಾಲ ಹೊರತುಪಡಿಸಿ:** 9 ತಿಂಗಳುಗಳು
ಅರ್ಹ ಗುತ್ತಿಗೆ ದಾರರು ದಿನಾಂಕ:30.06.2022 ರೊಳಗೆ ಟೆಂಡರ್ ಗಳನ್ನು ಇ-ಪ್ರಕ್ಯೂರ್‌ಮೆಂಟ್(e-procurement) ಮೂಲಕ ಸಲ್ಲಿಸುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
ವಾ.ಸಾ.ಸಂ.ಇ/ಎಂಸಿಎ /ಶಿ/162/05/22-23/321

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ನಂ.4. ಡಿ.ಎಸ್.ಇ.ಆರ್.ಟಿ. ಕಟ್ಟಡ, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-560085. ದೂರವಾಣಿ: 080-26422238/45
ಇ-ಮೇಲ್: mdktbs.tender@gmail.com, ವೆಬ್‌ಸೈಟ್: http://www.ktbs.kar.nic.in
ಸಂ: ಎ7/ಕ.ಪ.ಪು.ಸಂ/ಶಿ.ತ.ಕೈ.ಮು.ಟೆಂ/7/2022-23 ದಿನಾಂಕ: 01.06.2022

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ.ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2022-23ನೇ ಸಾಲಿಗೆ ಅಂದಾಜು 5645 ಶಿಕ್ಷಕರ ತರಬೇತಿ ಕೈಪಿಡಿ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ-ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು ದಿನಾಂಕ: **09.06.2022 ರಂದು ಸಂಜೆ 5.30 ರವರೆಗೆ** ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ: **https://www.eproc.karnataka.gov.in ಸಹಾಯವಾಣಿ: 080-46010000/ 080-22631200**, ಇಲಾಖೆಯ ವೆಬ್‌ಸೈಟ್: **https://www.ktbs.kar.nic.in**
ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು ದೂ:0816-2278387
Email: dhotumkur@gmail.com ph:0816-2278387
ಸಂಖ್ಯೆ: ಜಿಆತು/ಸರಬ/18/2020-21 ದಿನಾಂಕ: 27.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ

ವಿಷಯ: ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಚಿಕ್ಕನಾಯಕನಹಳ್ಳಿ ಇಲ್ಲಿಗೆ ಅವಶ್ಯಕ ಉಪಕರಣಗಳು, ಸಲಕರಣೆಗಳು ಹಾಗೂ ಇತರೆ ಸಾಮಾಗ್ರಿಗಳನ್ನು ಖರೀದಿಸಿ ವಿತರಿಸಲು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಬಗ್ಗೆ.
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಚಿಕ್ಕನಾಯಕನಹಳ್ಳಿ ಇಲ್ಲಿಗೆ ಅವಶ್ಯಕ ಉಪಕರಣಗಳು, ಸಲಕರಣೆಗಳು ಹಾಗೂ ಇತರೆ ಸಾಮಾಗ್ರಿಗಳನ್ನು ಖರೀದಿಸಿ ಸರಬರಾಜು ಮಾಡುವ ಸಂಬಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೂಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಟೆಂಡರ್ ದಾರರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು ಆಸಕ್ತಿಯುಳ್ಳ ಟೆಂಡರ್‌ದಾರರು https://eproc.karnataka.gov.in ವೆಬ್‌ಸೈಟ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರ ಅವಶ್ಯಕತೆ ಇದ್ದಲ್ಲಿ ಈ ಕಚೇರಿಯ ದೂರವಾಣಿ ಸಂಖ್ಯೆ:0816-2278387 ನ್ನು ಸಂಪರ್ಕಿಸಬಹುದು.
ಟೆಂಡರ್ ದಾಸ್ತಾವೇಜುಗಳನ್ನು ಪಡೆಯುವ ವಿಧಾನ: 1. ಇ-ಪ್ರೂಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬೇಕಾದ ದಿನಾಂಕ:**26.05.2022** ರಿಂದ, 2. ಇ-ಪ್ರೂಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭರ್ತಿಮಾಡಲಾದ ಟೆಂಡರ್ ದಾಸ್ತಾವೇಜುಗಳನ್ನು ಅಪ್‌ಲೋಡ್ ಮಾಡಬೇಕಾದ ದಿನಾಂಕ:**10.06.2022** 3. ಟೆಂಡರ್ ಅಂದಾಜು ಮೊತ್ತ ರೂ.57.55/- ಲಕ್ಷಗಳು.
ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.
DIPR/TUM/170MCA/2022-23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ ಕೊಪ್ಪಳ
ಕಛೇರಿ ದೂರವಾಣಿ : 08539-221895 ಫ್ಯಾಕ್ಸ್ ನಂ. : 08539-221235
e-mail : itstaff_dudc_koppal@yahoo.com
ಕಂ.ಸಂ: 83179/(KOP-DC-11/57/2022-PD(DUDC)_KOPDC-KOPPAL DC) ದಿನಾಂಕ: 31.05.2022

:: ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್) ::

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಕ್ಲಾಸ್-1 ಅರ್ಹ ಗುತ್ತಿಗೆದಾರರಿಂದ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4ರ ಯೋಜನೆಯಡಿ ಕೊಪ್ಪಳ ಜಿಲ್ಲೆಯ ಪಟ್ಟಣ ಪಂಚಾಯತಿ ಯಲಬುರ್ಗಾ, ತಾವರಗೇರಾ, ಕನಕಗಿರಿ ಮತ್ತು ಕುಕನೂರು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಈ ಕೆಳಕಾಣಿಸಿದ ಕಾಮಗಾರಿಗಳ ಕುರಿತು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಸ್ಟ್ಯಾಂಡರ್ಡ್ ಟೆಂಡರ್ ಡಾಕುಮೆಂಟ್ ಅನ್ವಯ ಟೆಂಡರ್‌ಗಳನ್ನು ಕರೆಯಲಾಗಿದೆ. ಇಚ್ಛೆವುಳ್ಳ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ **www.eproc.karnataka.gov.in** ನಲ್ಲಿ ಸಂಪರ್ಕಿಸಬಹುದಾಗಿದೆ.
Brief Description 1) **Yelburga TP Indent No:DMA/2022-23/RD/WORK_INDENT132129.** Approximate value of work (Rs. In Lakhs) : **288.97.** EMD (in Lakhs) : **4.33**. Period of Completion (Months) : **06**. 2) **Tavaragera TP Indent No:DMA/2022-23/RD/WORK_INDENT132130**. Approximate value of work (Rs. In Lakhs) : **198.98**. EMD (in Lakhs) : **2.98**. Period of Completion (Months) : **06**. 3) **Kanakagiri TP Indent No: DMA/2022-23/RD/WORK_INDENT132131**. Approximate value of work (Rs. In Lakhs) : **202.89**. EMD (in Lakhs) : **3.04**. Period of Completion (Months) : **06**. 4) **Kukanoor TP Indent No:DMA/2022-23/RD/WORK_INDENT132132**. Approximate value of work (Rs. In Lakhs) : **223.79**. EMD (in Lakhs) : **3.36**. Period of Completion (Months) : **06.**
1) ಟೆಂಡರ್ ಫಾರಂ ಪಡೆಯುವ ದಿನಾಂಕ (ಆನ್‌ಲೈನ್ ಮೂಲಕ) : **31-05-2022**
2) ಟೆಂಡರ್ ಪೂರ್ವ ಸಭೆ ಹಾಗೂ ಪ್ರಶ್ನೆಗಳಿಗಾಗಿ ದಿನಾಂಕ : **10-06-2022 ಸಂಜೆ 5:30 ಗಂಟೆಗೆ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **01-07-2022 ಸಂಜೆ 5:30 ಗಂಟೆಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **04-07-2022 ಬೆಳಿಗ್ಗೆ 10:00 ಗಂಟೆಗೆ.**
ಸಹಿ/- ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಕೊಪ್ಪಳ.
ವಾ.ಸಾ.ಇ./ಕೊಪ್ಪಳ/125/2022-23/ದೇಶಪಾಂಡೆ ಪಬ್ಲಿಸಿಟಿ

ಕಾಂಗ್ರೆಸ್ ಮನವೊಲಿಕೆಗೆ ಜೆಡಿಎಸ್ ಕಸರತ್ತು

ಒಂದನೇ ಪುಟದಿಂದ

‘ನಮ್ಮ ಮತ್ತು ಕಾಂಗ್ರೆಸ್‌ನ ಮನಸ್ಥಿತಿ ಒಂದೇ ಆಗಿದೆ. ಆದ್ದರಿಂದ, ಜೆಡಿಎಸ್ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಮನವಿ ಮಾಡಿದೆವು’ ಎಂದರು.

‘ಸಿದ್ದರಾಮಯ್ಯ ಅವರು ನೋಡೋಣ ಎಂದಷ್ಟೇ ಹೇಳಿದರು. ನಾವು ದಾರಿ ತಪ್ಪಿಸುವ ಕೆಲಸ ಮಾಡುತ್ತಿಲ್ಲ. ರಾಜಕೀಯವಾಗಿ ಎಲ್ಲರೂ ಪ್ರಬುದ್ಧರೇ ಇದ್ದೇವೆ. ಕಾಂಗ್ರೆಸ್ ಮತ್ತು ನಮ್ಮ ಪಕ್ಷದ ವರಿಷ್ಠರು ಈ ಕುರಿತು ಪರಸ್ಪರ ಮಾತನಾಡಲಿದ್ದಾರೆ. ಇದಕ್ಕೆ ಮುನ್ನವೇ ನಾವು ಸೌಹಾರ್ದ ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ’ ಎಂದು ಶರವಣ ಅವರು ಹೇಳಿದರು.

ನಾಮಪತ್ರ ಕ್ರಮಬದ್ಧ: ‘ರಾಜ್ಯಸಭೆ ಸದಸ್ಯ ಸ್ಥಾನಕ್ಕೆ ನಡೆಯಲಿರುವ ಚುನಾವಣೆಗೆ ಅಷ್ಟೂ ನಾಮಪತ್ರಗಳೂ ಕ್ರಮಬದ್ಧವಾಗಿವೆ’ ಎಂದು ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ಅವರು ತಿಳಿಸಿದ್ದಾರೆ.

ಮೂವರು ಅಭ್ಯರ್ಥಿಗಳ ಗೆಲುವು:ಬಿಎಸ್‌ವೈ

‘ನಮ್ಮ ಪಕ್ಷದ ಮೂವರು ಅಭ್ಯರ್ಥಿಗಳನ್ನು ಯಾವುದೇ ಪಕ್ಷದ ಬೆಂಬಲವಿಲ್ಲದೇ ಗೆಲ್ಲಿಸಿಕೊಳ್ಳುತ್ತೇವೆ’ ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ಎಂದು ತಿಳಿಸಿದ್ದಾರೆ.

‘ನಮ್ಮ ಪಕ್ಷದಿಂದ ಸ್ಪರ್ಧಿಸಿರುವ ನಿರ್ಮಲಾ ಸೀತಾರಾಮನ್, ಜಗ್ಗೇಶ್ ಮತ್ತು ಲಹರ್ ಸಿಂಗ್ ಸಿರೋಯ ಅವರು ಗೆಲ್ಲುವುದು ಖಚಿತ. ಮೂರನೇ ಅಭ್ಯರ್ಥಿಗಳನ್ನು ಬೆಂಬಲಿಸಿ ಎಂದು ಯಾರನ್ನೂ ಕೇಳುವುದಿಲ್ಲ’ ಎಂದು ಹೇಳಿದರು.

ಹಾಸನ ನಗರಸಭೆ ಸದಸ್ಯನ ಕೊಲೆ


ಪ್ರಶಾಂತ್ ನಾಗರಾಜ್

ಹಾಸನ: ನಗರದ ಜವೇನಹಳ್ಳಿ ಮಠ ರಸ್ತೆಯ ಲಕ್ಷ್ಮಿಪುರ ಬಡಾವಣೆಯಲ್ಲಿ ಬುಧವಾರ ಸಂಜೆ ನಗರಸಭೆ ಸದಸ್ಯ ಪ್ರಶಾಂತ್ ನಾಗರಾಜ್ ಅವರನ್ನು ನಡುರಸ್ತೆಯಲ್ಲಿ ಕೊಚ್ಚಿ ಕೊಲೆ ಮಾಡಲಾಗಿದೆ.

ಜೆಡಿಎಸ್ ಪಕ್ಷದ ಪ್ರಶಾಂತ್ ನಾಗರಾಜ್ (40) ಆ್ಯಕ್ಟಿವ್ ಹೋಂಡಾ ಸ್ಕೂಟರ್‌ನಲ್ಲಿ ಮನೆಗೆ ಹಿಂದಿರುಗುವಾಗ ಹಿಂಬಾಲಿಸಿದ ದುಷ್ಕರ್ಮಿಗಳು, ದಾಳಿ ನಡೆಸಿ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಪ್ರಶಾಂತ್ ಅವರನ್ನು ಆಸ್ಪತ್ರೆಗೆ ಸಾಗಿಸುವಷ್ಟರಲ್ಲೇ ಮೃತಪಟ್ಟಿದ್ದರು. ಪೊಲೀಸರು ಸ್ಥಳ ಪರಿಶೀಲನೆ ನಡೆಸಿದ್ದು, ತನಿಖೆ ಆರಂಭಿಸಿದ್ದಾರೆ. ವೈಯಕ್ತಿಕ ದ್ವೇಷದಿಂದ ಈ ಕೊಲೆ ನಡೆದಿದೆ ಎಂದು ಹೇಳಲಾಗುತ್ತಿದೆ. ಕೊಲೆಯಾದ ಪ್ರಶಾಂತ್, ಹಾಸನದಲ್ಲಿ ಈ ಹಿಂದೆ ಡಾ. ರಾಜ್ ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷರಾಗಿದ್ದ ದಿವಂಗತ ಹಾ.ರಾ.ನಾಗರಾಜ್ ಅವರ ಪುತ್ರ.

ಸಿವಿಲ್ ಸರ್ವೀಸಸ್ ಪರೀಕ್ಷೆಗಳಲ್ಲಿ ನಿರ್ಣಾಯಕ ಹಂತ ಎಂದರೆ 'ಸಂದರ್ಶನ' ಅಥವಾ ವ್ಯಕ್ತಿತ್ವ ಪರೀಕ್ಷೆ. ಅರ್ಧಗಂಟೆ ನಡೆಯುವ ಸಂದರ್ಶನದಲ್ಲಿ ಅಭ್ಯರ್ಥಿಯ ವ್ಯಕ್ತಿತ್ವವನ್ನು ಪರೀಕ್ಷಿಸಲಾಗುತ್ತದೆ. ಈ ಸಂದರ್ಶನ ಪ್ರಕ್ರಿಯೆಗೆ ಹೇಗಿರುತ್ತದೆ ? ಇಲ್ಲಿದೆ ಮಾಹಿತಿ



ಸಂದರ್ಶನ

ವ್ಯಕ್ತಿತ್ವ ಪರೀಕ್ಷೆಯ ವಿಶ್ವದರ್ಶನ

ಗುರುರಾಜ್ ಎಸ್ ದಾವಣಗೆರೆ

ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಠ–11

ಯುಪಿಎಸ್‌ಸಿ ಪರೀಕ್ಷೆಯ ಕೊನೆಯ ಮತ್ತು ನಿರ್ಣಾಯಕ ಹಂತ ವ್ಯಕ್ತಿತ್ವ ಪರೀಕ್ಷೆ ಅಥವಾ 'ಸಂದರ್ಶನ'. 1750 ಅಂಕಗಳಿಗೆ ಸಮನಾದ ಒಂಬತ್ತು ಪ್ರಶ್ನೆ ಪತ್ರಿಕೆಗಳಿಗೆ ಯಶಸ್ವಿಯಾಗಿ ಉತ್ತರ ಬರೆದು, ಸಂದರ್ಶನದ ಸುತ್ತಿಗೆ ಬೇಕಾದಷ್ಟು ಅಂಕಗಳಿಸಿದವರು 275 ಅಂಕಗಳ ಮೌಖಿಕ 'ಸಂದರ್ಶನ' ಎದುರಿಸಬೇಕು. ಇದರಲ್ಲಿ ಯಶಸ್ಸುಗಳಿಸಿದರೆ ದೇಶದ ಅತ್ಯಂತ ಉನ್ನತ ಹಾಗೂ ಜವಾಬ್ದಾರಿಯುತ ಹುದ್ದೆಗೆ ನೇಮಕಗೊಳ್ಳುವ ಅವಕಾಶ ದೊರಕುತ್ತದೆ. ಅವರ ಜೀವಮಾನದ ಕನಸೂ ಈಡೇರಿರುತ್ತದೆ.

ಅಚ್ಚರಿಯ ಸಂಗತಿಯೆಂದರೆ 250 ಅಂಕಗಳಿಗೆ 3 ತಾಸುಗಳ ಉತ್ತರ ಬರೆಯುವ ಅಭ್ಯರ್ಥಿಗಳು 275 ಅಂಕಗಳ ಸಂದರ್ಶನವನ್ನು ಕೇವಲ ಅರ್ಧಗಂಟೆಯಲ್ಲಿ ಎದುರಿಸಬೇಕಾಗುತ್ತದೆ!

ಯಾರಿಗೆ ಸಂದರ್ಶನದ ಕರೆ?

ಮುಖ್ಯ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳಿಸಿದ 2500 – 3000 ಅಭ್ಯರ್ಥಿಗಳಿಗೆ ಸಂದರ್ಶನದ ಕರೆ ಬರುತ್ತದೆ. ಇವರಲ್ಲಿ ಶೇ 35 (1000-1100) ರಷ್ಟು ಜನರಿಗೆ ಉದ್ಯೋಗ ಸಿಗುತ್ತದೆ. ಸಂದರ್ಶನ ನಡೆಯುವ ಹತ್ತು ದಿನ ಮುಂಚೆಯೇ ಅಭ್ಯರ್ಥಿಗಳು ಯುಪಿಎಸ್‌ಸಿ ಕೇಳುವ ವಿವರ ಮತ್ತು ಪಾಸ್‌ಪೋರ್ಟ್ ಅಳತೆಯ ಆರು ಭಾವಚಿತ್ರಗಳನ್ನು ಸಂಬಂಧಿಸಿದ ಇಲಾಖೆಗೆ ಅಂಚೆಯ ಮೂಲಕ ತಲುಪಿಸಬೇಕು.

ಸಂದರ್ಶನದ ದಿನಾಂಕ ಮತ್ತು ಸ್ಥಳವನ್ನು ಯಾವ ಕಾಲಕ್ಕೂ ಬದಲಾಯಿಸುವುದಿಲ್ಲ. ಅಭ್ಯರ್ಥಿಗಳಿಗೆ ಪ್ರಯಾಣ ಮತ್ತು ವಸತಿ ವೆಚ್ಚವನ್ನು ಯುಪಿಎಸ್ಸಿ ನೀಡುತ್ತದೆ(ರೈಲು ಮತ್ತು ಬಸ್ ಪ್ರಯಾಣದ ಖರ್ಚು ನೀಡಲಾಗುತ್ತದೆ. ಕಳೆದ ವರ್ಷ ಕೋವಿಡ್ ಉಪಟಳದಿಂದಾಗಿ ವಿಮಾನ ಪ್ರಯಾಣ ವೆಚ್ಚವನ್ನು ಯುಪಿಎಸ್ಸಿ ಭರಿಸಿತ್ತು). ಸಂದರ್ಶನ ಎರಡನೇ ದಿನಕ್ಕೆ ಮುಂದುವರಿದರೆ ಅಥವಾ ಆಡಳಿತಾತ್ಮಕ ಕಾರಣಗಳಿಗೆ ನಿಗದಿಯಾದ ದಿನ ನಡೆಯದಿದ್ದರೆ ದಿನಕ್ಕೆ ₹30 ರಂತೆ ವಸತಿ ವೆಚ್ಚ ನೀಡುತ್ತಾರೆ.

ವಿದ್ಯಾರ್ಹತೆ, ಅಂಗವೈಕಲ್ಯ, ಜಾತಿ ಪ್ರಮಾಣ ಪತ್ರ ಅಥವಾ ಇನ್ನಾವುದೇ ವಿನಾಯಿತಿ ಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಮೂಲ ಪ್ರಮಾಣ ಪತ್ರಗಳನ್ನು ಸಂದರ್ಶನ ಸಮಿತಿಯ ಎದುರು ಹಾಜರು ಪಡಿಸಬೇಕು. ಯಾವುದೇ ಒಂದು ಪ್ರಮಾಣ ಪತ್ರ ಇಲ್ಲದಿದ್ದರೂ ಅಭ್ಯರ್ಥಿಯನ್ನು ಸಂದರ್ಶನ ಸುತ್ತಿನಿಂದ ಅನರ್ಹ ಗೊಳಿಸಲಾಗುತ್ತದೆ.

ಸಂದರ್ಶನ ಸಮಿತಿಯಲ್ಲಿ ಮುಖ್ಯಸ್ಥರೂ ಸೇರಿದಂತೆ ಒಟ್ಟು ಐದು ಜನ ಇರುತ್ತಾರೆ. ಮುಖ್ಯಸ್ಥರು ಯುಪಿಎಸ್‌ಸಿ ಸದಸ್ಯರಾಗಿರುತ್ತಾರೆ ಮತ್ತು ಉಳಿದ ನಾಲ್ವರು ಸಾಮಾಜಿಕ ಜೀವನದ ಬೇರೆ ಬೇರೆ ಕ್ಷೇತ್ರಗಳ ಪರಿಣತರಾಗಿರುತ್ತಾರೆ. ಅಭ್ಯರ್ಥಿ ಭಾರತದಂಥ ದೊಡ್ಡ ಹಾಗೂ ವೈವಿಧ್ಯಮಯ ದೇಶದ ಆಡಳಿತ ನಡೆಸಲು ಯಾವ ಮಟ್ಟದ ಬದ್ಧತೆ ಮತ್ತು ಕ್ಷಮತೆ ಹೊಂದಿದ್ದಾರೆ ಎಂಬುದನ್ನು ಸಮಿತಿಯು ಪರೀಕ್ಷಿಸುತ್ತದೆ. ಬಹಳಷ್ಟು ಅಭ್ಯರ್ಥಿಗಳು ಇಂಗ್ಲಿಷ್‌ನಲ್ಲಿ ಚೆನ್ನಾಗಿ ಉತ್ತರಿಸಿದರೆ ಹೆಚ್ಚಿನ ಅಂಕ ದೊರಕುತ್ತವೆ ಎಂದು ತಪ್ಪು ತಿಳಿದಿರುತ್ತಾರೆ. ಆದರೆ ಸಂದರ್ಶನ ಸಮಿತಿಯು ನಿಮ್ಮ ವ್ಯಕ್ತಿತ್ವದ ವಿಶೇಷ ಗುಣವನ್ನು ಪರೀಕ್ಷಿಸುತ್ತದೆ.

'ಜ್ಞಾನ'ವಲ್ಲ, ವ್ಯಕ್ತಿತ್ವ ಪರೀಕ್ಷೆ

ಬಹಳಷ್ಟು ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗುವ ಮುನ್ನ ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್ ಸೇರುವುದು, ಮುಖ್ಯ ಪರೀಕ್ಷೆಗೆ(ಮೇನ್ಸ್) ಓದಿದ ಪುಸ್ತಕಗಳನ್ನು ಮತ್ತೆ – ಮತ್ತೆ ಓದುವುದು ಮಾಡುತ್ತಾರೆ. ನೆನಪಿರಲಿ. ಸಂದರ್ಶನದಲ್ಲಿ ನಿಮ್ಮ ವ್ಯಕ್ತಿತ್ವದ ಪರೀಕ್ಷೆ ನಡೆಯುತ್ತದೆಯೇ ಹೊರತು ಜ್ಞಾನ ಪರೀಕ್ಷೆಯಲ್ಲ. ನೀವು ಪರೀಕ್ಷೆಗೆ ಅರ್ಜಿ ತುಂಬುವಾಗ ನಿಮ್ಮ ಬಗ್ಗೆ ಹಲವು ವೈಯಕ್ತಿಕ ವಿವರಗಳನ್ನು ನೀಡಿರುತ್ತೀರಿ. ಅದರ ಕುರಿತೇ ಬಹುತೇಕ ಪ್ರಶ್ನೆಗಳಿರುತ್ತವೆ. ಪ್ರಶ್ನೆಗಳ ಉತ್ತರವನ್ನು ಇಂಗ್ಲಿಷ್‌ನಲ್ಲೇ ಉತ್ತರಿಸಬೇಕೆಂಬ ನಿಯಮವಿಲ್ಲ. ಹಿಂದಿ ಅಥವಾ ಸಂವಿಧಾನದ ಎಂಟನೇ ಅನುಚ್ಛೇದದಲ್ಲಿ ಪಟ್ಟಿ ಮಾಡಿದ 22 ಭಾಷೆಗಳಲ್ಲಿ ನಿಮಗೆ ಚೆನ್ನಾಗಿ ಬರುವ ಭಾಷೆಯಲ್ಲಿ ಉತ್ತರಿಸುವ ಅವಕಾಶವಿದೆ. ಆದರೆ ನಿಮ್ಮ ಆಯ್ಕೆಯ ಭಾಷೆಯನ್ನು ಸಂದರ್ಶನ ಸಮಿತಿಗೆ ಮೊದಲೇ ತಿಳಿಸಿದ್ದರೆ ಭಾಷಾಂತರಕಾರರನ್ನು ಅವರೇ ನೇಮಿಸುತ್ತಾರೆ. ಸಂದರ್ಶನದಲ್ಲಿ ನಿಮ್ಮ ಜ್ಞಾನದ ಆಳ ಎಷ್ಟಿದೆ, ನೀವೆಷ್ಟು ತಿಳಿದುಕೊಂಡಿದ್ದೀರಿ ಎಂಬುದನ್ನೆಂದೂ ಪರೀಕ್ಷಿಸುವುದಿಲ್ಲ. ಅದನ್ನು ಲಿಖಿತ ಪರೀಕ್ಷೆಯ 9 ಪತ್ರಿಕೆಗಳ ಮೂಲಕ ಮಾಡಲಾಗಿರುತ್ತದೆ.

ಯಾವುದಕ್ಕೆ ಎಷ್ಟು ಅಂಕ?

ಸಿವಿಲ್ ಸರ್ವಿಸಸ್ ಪರೀಕ್ಷೆ ಒಟ್ಟು 2025 ಅಂಕಗಳಿಗೆ ನಡೆಯುತ್ತದೆ. ಇದರಲ್ಲಿ ಶೇ 86.4 ರಷ್ಟು ಅಂದರೆ 1750 ಅಂಕಗಳಿಗೆ ಲಿಖಿತ ಪರೀಕ್ಷೆಗೆ ನಡೆದರೆ ಶೇ 13.6 ರಷ್ಟು ಅಂದರೆ 275 ಅಂಕಗಳು ಸಂದರ್ಶನಕ್ಕೆ ಮೀಸಲಾಗಿರುತ್ತದೆ. ಲಿಖಿತ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆ ಎರಡರಲ್ಲೂ ಬಂದ ಅಂಕಗಳಿಂದ ರ‍್ಯಾಂಕ್ ನಿರ್ಧಾರ ಗೊಳ್ಳುತ್ತದೆ.



ಪ್ರಶ್ನೆಗಳ ಉತ್ತರ ಹೇಗಿರಬೇಕು?

ಸಂದರ್ಶನದಲ್ಲಿ ರಾಷ್ಟ್ರಮಟ್ಟದ ಹುದ್ದೆಗೆ ಸೇರುವ ಅರ್ಹತೆ ಅಭ್ಯರ್ಥಿಗಳಿಗಿದೆಯೇ ಮತ್ತು ಇಡೀ ಭಾರತದ ಸ್ವರೂಪವನ್ನು ಅರ್ಥಮಾಡಿಕೊಂಡು ಆಡಳಿತ ನಡೆಸುವ ಮನೋಭಾವವಿದೆಯೇ ಎಂಬುದನ್ನು ಪರೀಕ್ಷಿಸುವ ಪ್ರಶ್ನೆಗಳೇ ಇರುತ್ತವೆ. ಉದಾಹರಣೆಗೆ ನೀವು ಕರ್ನಾಟಕದವರಾಗಿದ್ದರೆ, ಕಾವೇರಿ ನದಿ ನೀರು ಹಂಚಿಕೆ ಕುರಿತ ಕಾನೂನು ಹೋರಾಟದ ಬಗ್ಗೆ ಪ್ರಶ್ನೆ ಕೇಳುತ್ತಾರೆ ಎಂದಿಟ್ಟುಕೊಳ್ಳೋಣ. ಆಗ ನೀವು ಕೇವಲ ಕರ್ನಾಟಕದ ಪರವಹಿಸಿ ಮಾತನಾಡಿದರೆ ನಿಮಗೆ ಹೆಚ್ಚಿನ ಅಂಕ ಸಿಗುವುದಿಲ್ಲ. ಬದಲಿಗೆ ನದಿ ನೀರಿನ ವಿವಾದದಿಂದಾಗಿ ಎರಡೂ ರಾಜ್ಯಗಳ ರೈತರು ಮತ್ತು ಜನ ಅನುಭವಿಸುತ್ತಿರುವ ಸಂಕಷ್ಟಗಳು ಕುರಿತು ಮಾತನಾಡಿದರೆ ನಿಮ್ಮ ಜನಪರ ಧೋರಣೆ ಸಮಿತಿಯ ಮೆಚ್ಚುಗೆಗೆ ಪಾತ್ರವಾಗುತ್ತದೆ ಮತ್ತು ಹೆಚ್ಚಿನ ಅಂಕಗಳು ದೊರಕುತ್ತವೆ. ನೀವು ಯಾವುದಾದರೊಂದು ರಾಜ್ಯವನ್ನೋ, ರಾಜಕೀಯ ನಾಯಕನನ್ನೋ, ಪಕ್ಷವನ್ನೋ, ಸಿದ್ಧಾಂತವನ್ನೋ ಸಮರ್ಥಿಸಿ ಮಾತನಾಡಿದರೆ ನಿಮ್ಮಗೆ ವಿಶಾಲ ಮನೋಭಾವದ ಕೊರತೆ ಇದೆ ಎಂಬುದನ್ನು ನಿರ್ಧರಿಸಿ ಕಡಿಮೆ ಅಂಕ ನೀಡುವ ಸಾಧ್ಯತೆಗಳಿರುತ್ತದೆ.

ಗಮನವಿರಲಿ ಅಂಕಿ – ಅಂಶಗಳ ಬಗ್ಗೆ

ಉತ್ತರ ನೀಡುವಾಗ ಯಾವುದಾದರೂ ವಿದ್ಯಮಾನ, ವಿಚಾರದ ಬಗ್ಗೆ ಪ್ರಸ್ತಾಪ ಬಂದರೆ ಅದರ ಕುರಿತ ಎಲ್ಲ ಅಂಕಿ ಅಂಶಗಳನ್ನು ನಿಖರವಾಗಿ ಪ್ರಸ್ತಾಪಿಸಿ. ತಪ್ಪು ಅಥವಾ ಅರ್ಧಂಬರ್ಧ ಅಂಶಗಳನ್ನು ಹೇಳಿದರೆ ಅಂಕಗಳಿಗೆ ನೀವೇ ಕತ್ತರಿಹಾಕಿಕೊಂಡಂತೆ. ಸಾಧ್ಯವಾದಷ್ಟೂ ಅಂಕಿ – ಅಂಶಗಳನ್ನು ಬದಿಗಿರಿಸಿ ಒಟ್ಟು ಘಟನೆಯ ಚಿತ್ರಣ, ವಿಶ್ಲೇಷಣೆಯ ಕಡೆ ಗಮನ ಹರಿಸಿ. ಇತಿಹಾಸದ ಪ್ರಶ್ನೆಗಳಿದ್ದರೆ ಇಸವಿ, ದಿನಾಂಕ, ಸ್ಥಳದ ಕುರಿತು ಹೇಳಲೇ ಬೇಕಾದ ಅನಿವಾರ್ಯತೆ ಇರುತ್ತದೆ. ಆಗ ಪ್ರತಿಯೊಂದನ್ನೂ ಸರಿಯಾಗಿ ಹೇಳಿರಿ. ಸಮಕಾಲೀನ ವಿದ್ಯಮಾನಗಳ ಕುರಿತೂ ಪ್ರಶ್ನಗಳಿರುತ್ತವೆ. ರಾಜ್ಯ, ರಾಷ್ಟ್ರ–ಅಂತರರಾಷ್ಟ್ರೀಯ ವಿಚಾರಗಳ ಕುರಿತು ಗಹನ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಉತ್ತರಿಸಲು ಬೇಕಾದ ಸಂಗತಿಗಳು ವಿಶ್ವಾಸಾರ್ಹ ದಿನ – ವಾರ ಪತ್ರಿಕೆಗಳಲ್ಲಿರುತ್ತವೆ. ಅವುಗಳ ನಿರಂತರ ಮತ್ತು ಸರಿಯಾದ ಅಧ್ಯಯನ ನಿಮ್ಮ ಸಂದರ್ಶನದ ಉತ್ತರಗಳಿಗೆ ಹೆಚ್ಚಿನ ಬಲ ತುಂಬುತ್ತದೆ. ಆ ದ್ದ ರಿ ಂ ದ ದಿನಪತ್ರಿಕೆಗಳನ್ನು ತಪ್ಪದೇ ಓದಿರಿ.

ಇಕ್ಕಟ್ಟಿನ ಪ್ರಶ್ನೆಗೆ ಕಟ್ಟು ನಿಟ್ಟಿನ ಉತ್ತರ

ನಿಮ್ಮ ವಿಚಾರವಂತಿಕೆ ಮತ್ತು ಜೀವನದ ದೃಷ್ಟಿಕೋನದ ಪರೀಕ್ಷೆಗಾಗಿ ಕೆಲವು ಇಕ್ಕಟ್ಟಿಗೆ ಸಿಕ್ಕಿಸುವ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಉದಾಹರಣೆಗೆ: 'ಬಂಡುಕೋರ ಸಂಘರ್ಷಗಳು ನಡೆಯುವ ಜಾಗಗಳಲ್ಲಿ ಕೆಲಸ ಮಾಡುತ್ತೀರಾ?' ಎಂಬ ಪ್ರಶ್ನೆಗೆ, ನಿಮ್ಮ ವೈಯಕ್ತಿಕ ನಿಲುವು ಏನೇ ಇದ್ದರೂ, ಮುಂದೆ ಸರ್ಕಾರವನ್ನು ಪ್ರತಿನಿಧಿಸುವ ನೀವು ಅದನ್ನು ದೇಶದ ಭದ್ರತೆಗೆ ಒದಗುವ ಅಪಾಯ ಎಂದೆ ಪರಿಗಣಿಸಿ ಉತ್ತರ ನೀಡಬೇಕಾಗುತ್ತದೆ.

ಉಕ್ರೇನ್ – ರಷ್ಯಾದ ಯುದ್ಧದ ಕುರಿತು ಭಾರತದ ನಿಲುವು ಸರಿ ಇದೆಯೆ? ಎಂಬ ಪ್ರಶ್ನೆಗೆ ನಿಮ್ಮ ಉತ್ತರ ತುಂಬಾ ಸಮನ್ವಯದಿಂದ ಕೂಡಿರಬೇಕಾಗುತ್ತದೆ. ಜಾತಿ ಮೀಸಲಾತಿ, ಹಣದುಬ್ಬರ, ರೈತರ ಆತ್ಮಹತ್ಯೆ, ನೋಟು ಅಮಾನ್ಯೀಕರಣ, ನಿರುದ್ಯೋಗ ಸಮಸ್ಯೆಯ ಕುರಿತಾದ ಪ್ರಶ್ನೆಗಳಿಗೆ ನಿಮ್ಮ ಉತ್ತರ ಅತ್ಯಂತ ಸಮತೋಲನದಿಂದ ಕೂಡಿರಬೇಕು. ಜೊತೆಗೆ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಬೇಕೆಂದೇನೂ ಇಲ್ಲ. ಕೆಲ ಪ್ರಶ್ನೆಗಳಿಗೆ ಉತ್ತರ ಗೊತ್ತಿರದಿದ್ದರೆ 'ಗೊತ್ತಿಲ್ಲ' ಎಂದು ಹೇಳುವುದೇ ಸರಿಯಾದ ಉತ್ತರವಾಗಿರುತ್ತದೆ. ಹಾಗಾಗಿ ದೇಶದ ಅಭಿವೃದ್ಧಿ, ಭದ್ರತೆ, ನೀತಿ - ನಿಯಮಗಳ ಕುರಿತಾದ ಪ್ರಶ್ನೆಗಳಿಗೆ ವಿಶ್ಲೇಷಣಾತ್ಮಕ ಹಾಗೂ ಸಕಾರಾತ್ಮಕ ಉತ್ತರಗಳನ್ನು ನೀಡುವುದು ಸೂಕ್ತ. ಅದರೆ ನೀಡುವ ಉತ್ತರಗಳು ಖಚಿತವಾಗಿರಬೇಕು.

(ಮುಗಿಯಿತು)

'ಸಿವಿಲ್ ಸರ್ವೀಸಸ್ ಪ್ರಾಥಮಿಕ ಪಾಠಗಳ ಸರಣಿ' ಮುಕ್ತಾಯವಾಯಿತು. ಈ ಸರಣಿಯಲ್ಲಿ ಇಲ್ಲಿವರೆಗೆ ಪ್ರಕಟವಾಗಿರುವ ಲೇಖನಗಳ ಕುರಿತ ಪ್ರತಿಕ್ರಿಯೆಗಳಿಗೆ ಸ್ವಾಗತ. ನಿಮ್ಮ ಅಭಿಪ್ರಾಯಗಳನ್ನು shikshana@prajavani.co.in ಗೆ ಕಳುಹಿಸಬಹುದು.

ಮಾದರಿ ಪ್ರಶ್ನೋತ್ತರ

ಕೆಪಿಎಸ್‌ಸಿ 'ಗ್ರೂಪ್-ಸಿ'ಯ ವಿವಿಧ ಹುದ್ದೆಗಳು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) ಮಾನವನ ಸಂಪರ್ಕವಿಲ್ಲದ ಸಾವಿರಾರು ವರ್ಷಗಳಷ್ಟು ಹಳೆಯದಾದ ಬೃಹತ್ ಕುಳಿಯೊಳಗೆ (630 ಅಡಿ ಆಳ 176 ದಶಲಕ್ಷ ಕ್ಯೂಬಿಕ್ ಅಡಿಗೂ ಹೆಚ್ಚು ವಿಸ್ತೀರ್ಣ ಹೊಂದಿರುವ) ಅರಣ್ಯವೊಂದು ಚೀನಾ ದೇಶದಲ್ಲಿ ಪತ್ತೆಯಾಗಿದೆ. ಅದು ಆ ದೇಶದ ಯಾವ ಪ್ರದೇಶದಲ್ಲಿದೆ ?

ಎ) ಗುವಾಂಗ್‌ಕ್ಸಿ ಪ್ರದೇಶ ಬಿ) ಬೀಜಿಂಗ್
ಸಿ) ಝಿಯಾಕ್ಸಿ ಪ್ರದೇಶ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

2) ಇತ್ತೀಚಿಗೆ ಕ್ವಾಡ್ ನಾಲ್ಕನೇ ಶೃಂಗ ಸಭೆ ನಡೆಯಿತು. ಹಾಗಾದರೆ 2007ರಲ್ಲಿ ಕ್ವಾಡ್ ಕೂಟದ ರಚನೆಯಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿದವರು ಯಾರು?

ಎ) ಮನ್‌ಮೋಹನ್ ಸಿಂಗ್ ಬಿ) ಶಿಂಜೊ ಅಬೆ
ಸಿ) ಡೊನಾಲ್ಡ್ ಟ್ರಂಪ್ ಡಿ) ವ್ಲಾಡಿಮಿರ್ ಪುಟಿನ್

ಉತ್ತರ: ಬಿ

3) ಆಸ್ಟ್ರೇಲಿಯಾ ದೇಶದ ನೂತನ ಪ್ರಧಾನಿಯಾಗಿ ಯಾರು ಆಯ್ಕೆಯಾಗಿದ್ದಾರೆ?

ಎ) ಆ್ಯಂಟನಿ ಅಲ್ಬನೆಸ್
ಬಿ) ಜಿಯೋನಿ ಜಿರೋನ್
ಸಿ) ಪಾಲ್ ದಿ ಬೇಡ್
ಡಿ) ಫ್ರಾನ್ಸಿಸ್ ಜರೋ



ಆ್ಯಂಟನಿ ಅಲ್ಬನೆಸ್

ಉತ್ತರ: ಎ

4) ಬ್ರಿಕ್ಸ್ ದೇಶಗಳ ನ್ಯೂ ಡೆವೆಲಪ್‌ಮೆಂಟ್ ಬ್ಯಾಂಕ್‌ನ ಕಚೇರಿಯನ್ನು ಭಾರತದಲ್ಲಿ ಎಲ್ಲಿ ಆರಂಭಿಸಲಾಗಿದೆ ?

ಎ) ಗುಜರಾತ್ ಬಿ) ಮಹಾರಾಷ್ಟ್ರ
ಸಿ) ಕರ್ನಾಟಕ ಡಿ) ದೆಹಲಿ

ಉತ್ತರ: ಎ

5) ವೇಗವಾಗಿ ಹರಡುವ ರೋಗಗಳಲ್ಲಿ ಮಂಕಿಪಾಕ್ಸ್ ಕೂಡ ಒಂದು. ಈ ರೋಗವು ಸಿಡುಬು ರೋಗದ ಎಲ್ಲಾ ರೋಗಲಕ್ಷಣಗಳನ್ನು ಹೊಂದಿದೆ ಹಾಗಾದರೆ ಇದು________ ದಿಂದ ಬರುವ ರೋಗವಾಗಿದೆ.

ಎ) ಬ್ಯಾಕ್ಟೀರಿಯಾ ಬಿ) ವೈರಸ್
ಸಿ) ಫಂಗೈ ಡಿ) ಪ್ರೊಟೊಜೋವಾ

ಉತ್ತರ: ಬಿ

6) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಭಾರತ ಸೇರಿದಂತೆ 12 ಇಂಡೊ-ಪೆಸಿಫಿಕ್ ರಾಷ್ಟ್ರಗಳೊಂದಿಗೆ ಅಮೆರಿಕ ಆರಂಭಿಸಿರುವ ಹೊಸ ವ್ಯಾಪಾರ ಒಪ್ಪಂದವನ್ನು(ಐಪಿಇಎಎಫ್) ಚೀನಾ ವಿರೋಧಿಸಿದೆ. ಇದನ್ನು 'ಆರ್ಥಿಕ ನ್ಯಾಟೊ' ಎಂದು ಕರೆದಿದೆ.

2) ಭಾರತ ಸೇರಿದಂತೆ 12 ಇಂಡೊ-ಪೆಸಿಫಿಕ್ ರಾಷ್ಟ್ರಗಳೊಂದಿಗೆ ಅಮೆರಿಕ ಆರಂಭಿಸಿರುವ ಹೊಸ ವ್ಯಾಪಾರ ಒಪ್ಪಂದ ಭಾಗವಾಗುವುದಾಗಿ ರಷ್ಯಾ ಕೂಡಾ ಘೋಷಿಸಿದೆ.

ಉತ್ತರ ಸಂಕೇತಗಳು

ಎ) 1 ಮತ್ತು 2ನೇ ಹೇಳಿಕೆಗಳು ಸರಿಯಾಗಿವೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಸಿ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಡಿ) ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ: ಸಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)


ಕಾಂಟ್ಯಾಕ್ಟ್ ಲೆನ್ಸ್

ನಿಮಗಿದು ಗೊತ್ತೆ?

ದೃಷ್ಟಿ ಸ್ಪಷ್ಟವಾಗಿ ಕಾಣುವುದಕ್ಕೆ ನೆರವಾಗುವ ಅಥವಾ ಕಣ್ಣಿನ ದೋಷ ಸರಿಪಡಿಸಲು ಬಳಸುವ ಮಸೂರಕ್ಕೆ (ಲೆನ್ಸ್) ಕಾಂಟ್ಯಾಕ್ಟ್ ಲೆನ್ಸ್ (Contact Lense) ಎನ್ನುವರು. ಈ ಲೆನ್ಸ್ ಅನ್ನು ಕಣ್ಣಿನ ಗುಡ್ಡೆಯ ಮೇಲೆ ಇಡಲಾಗುತ್ತದೆ. ಇದರ ಮೂಲಕ ದೃಷ್ಟಿದೋಷ ಸರಿಪಡಿಸಿಕೊಳ್ಳಬಹುದು.

1887ರಲ್ಲಿ ಮೊಟ್ಟ ಮೊದಲ ಕಾಂಟ್ಯಾಕ್ಟ್ ಲೆನ್ಸ್ ಅಭಿವೃದ್ಧಿಪಡಿಸಲಾಯಿತು. ಇದನ್ನು ಅಭಿವೃದ್ಧಿಪಡಿಸಿದವರು ಎ.ಇ.ಫಿಕ್ (A.E. Fick). ಆರಂಭದಲ್ಲಿ ಈ ಲೆನ್ಸ್‌ಅನ್ನು ಗ್ಲಾಸ್ ಬ್ಲೋಯಿಂಗ್ ಹಾಗೂ ಗಾಜಿನ ಟೆಸ್ಟ್ ಟ್ಯೂಬ್‌ಗಳ ತಳವನ್ನು ಉಜ್ಜುವ ಮತ್ತು ಅದಕ್ಕೆ ಪಾಲಿಷ್ ಕೊಡುವ ಮೂಲಕ ತಯಾರಿಸಲಾಗುತ್ತಿತ್ತು. ಆದರೆ ಇಂತಹ ಗಾಜುಗಳು ಯಶಸ್ವಿಯಾಗಲಿಲ್ಲ. ಅವು ಅಧ್ಯಯನಕ್ಕೆ ಸೀಮಿತವಾಗಿದ್ದವು. ಆದರೆ 1938ರಲ್ಲಿ ಕಾಂಟ್ಯಾಕ್ಟ್ ಲೆನ್ಸ್ ಅಭಿವೃದ್ಧಿಪಡಿಸುವ ಪ್ರಯತ್ನದಲ್ಲಿ ಸ್ವಲ್ಪಮಟ್ಟಿನ ಪ್ರಗತಿ ಕಂಡುಬಂದಿತು. ಆಗ ಪ್ಲಾಸ್ಟಿಕ್ ಕಾಂಟ್ಯಾಕ್ಟ್ ಲೆನ್ಸ್‌ಗಳನ್ನು ತಯಾರಿಸಲಾಯಿತು. 1938ರಿಂದ 1950ರವರೆಗೆ ಕಣ್ಣಿನ ಮುದ್ರೆಯನ್ನು ತೆಗೆದುಕೊಂಡು, ಅದರ ಮೇಲೆ ಕಾಂಟ್ಯಾಕ್ಟ್ ಲೆನ್ಸ್ ರಚಿಸುವ ಪ್ರಯತ್ನ ಆರಂಭಿಸಿ, ಕೊನೆಗೆ ಯಶಸ್ವಿಯಾಯಿತು.

ಕಾಂಟ್ಯಾಕ್ಟ್ ಲೆನ್ಸ್ ಅನ್ನು ಅಳವಡಿಸುವ ಮೊದಲು ಕಣ್ಣನ್ನು ಪರೀಕ್ಷಿಸಿ, ದೃಷ್ಟಿ ದೋಷವನ್ನು ತಿಳಿದುಕೊಳ್ಳಲಾಗುವುದು. ಅನಂತರ ಕೆರಾಟಮಿಟರ್(Keratometer) ಎಂಬ ಸಾಧನವನ್ನು ಬಳಸಿ, ಕಣ್ಣಿನ ಹೊರಮೈನ (Surface of the eye) ತ್ರಿಜ್ಯವನ್ನು (Radius) ತಿಳಿದುಕೊಳ್ಳಲಾಗುವುದು. ಇದರ ಆಧಾರದ ಮೇಲೆ ಕಾಂಟ್ಯಾಕ್ಟ್ ಲೆನ್ಸ್‌ನ ವ್ಯಾಸ(Diameter) ಮತ್ತು ಲೆನ್ಸ್‌ನ ತೀವ್ರತೆ(Power) ಎಷ್ಟಿರಬೇಕೆಂಬುದನ್ನು ಸೂಚಿಸಲಾಗುತ್ತದೆ. ಈ ವಿವರಗಳನ್ನು ಅನುಸರಿಸಿ, ಕಾಂಟ್ಯಾಕ್ಟ್ ಲೆನ್ಸ್ ಅನ್ನು ತಯಾರಿಸಲಾಗುತ್ತದೆ.



ಕಣ್ಣಿನೊಳಗೆ ಕಾಂಟ್ಯಾಕ್ಟ್ ಲೆನ್ಸ್ ಧರಿಸಿದ್ದರೆ ಬೇರೆಯವರಿಗೆ ಅದು ಗೋಚರವಾಗುವುದಿಲ್ಲ. ಈ ಲೆನ್ಸ್‌ಗಳು ಸುಲಭವಾಗಿ ಕಳೆದು ಹೋಗುವುದಿಲ್ಲ ಅಥವಾ ಮುರಿಯುವುದಿಲ್ಲ. ಆದ್ದರಿಂದ ಕ್ರೀಡಾಪಟುಗಳಿಗೆ ಇದು ತುಂಬ ಸಹಕಾರಿ. ಬಿಸಿಲಿನ ಝಳದಿಂದ ರಕ್ಷಿಸಿಕೊಳ್ಳಲೂ ಈ ಲೆನ್ಸ್ ತುಂಬಾ ಸಹಕಾರಿ.

ಶ್ರೀಲಂಕಾದ ತೀವ್ರ ಬಿಕ್ಕಟ್ಟು

ಯುಪಿಎಸ್‌ಸಿ- ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ –2, ಕೆಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ –2 ಹಾಗೂ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಅಂತರರಾಷ್ಟ್ರೀಯ ಮಟ್ಟದ ಪ್ರಚಲಿತ ವಿದ್ಯಮಾನ ಶ್ರೀಲಂಕಾ ಬಿಕ್ಕಟ್ಟಿನ ಕುರಿತ ಮಾಹಿತಿ ಇಲ್ಲಿದೆ.



ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ತೈಲ ಕೊರತೆ ವಿರೋಧಿಸಿ ಶ್ರೀಲಂಕಾದ ರಾಜಧಾನಿ ಕೊಲೊಂಬೊದಲ್ಲಿ ಪ್ರಧಾನಿ ನಿವಾಸದ ಎದುರು ಸಾರ್ವಜನಿಕರು ಪ್ರತಿಭಟನೆ ನಡೆಸುತ್ತಿರುವುದು (ಸಂಗ್ರಹ ಚಿತ್ರ)

ಯು.ಟಿ.ಆಯಿಶ ಫರ್ಝಾನ

ನೆರೆಯ ಶ್ರೀಲಂಕಾ ದ್ವೀಪ ರಾಷ್ಟ್ರದಲ್ಲಿ ಇತ್ತೀಚೆಗೆ ಒಂದು ಗ್ಯಾಸ್ ಸಿಲಿಂಡರ್ ಬೆಲೆ ₹4000 ಆಗಿದೆ. ಶಾಲೆಗಳಲ್ಲಿ ಪ್ರಶ್ನೆ ಪತ್ರಿಕೆ ಇಲ್ಲದ ಕಾರಣಕ್ಕೆ ಪರೀಕ್ಷೆ ನಡೆಸಲು ಸಾಧ್ಯವಿಲ್ಲದೆ ಪರೀಕ್ಷೆ ರದ್ದಾಗಿದೆ. ಸೇನಾ ಯೋಧರ ರಕ್ಷಣೆಯಲ್ಲಿ ಪೆಟ್ರೋಲ್ ಡೀಸೆಲ್ ವಿತರಿಸಬೇಕಾದಂತಹ ಅರಾಜಕತೆ ನಿರ್ಮಾಣವಾಗಿದೆ.

ಶ್ರೀಲಂಕಾದ ಸ್ಥಿತಿ ಮೊದಲಿನಿಂದ ಹೀಗಿತ್ತೇ?

ಹಾಗೆ ನೋಡಿದರೆ 2016 ಹೊತ್ತಿನಲ್ಲಿ ಶ್ರೀಲಂಕಾದ ಮಾನವ ಅಭಿವೃದ್ಧಿ ಸೂಚ್ಯಂಕಗಳಾದ ಶಿಕ್ಷಣ, ಆರೋಗ್ಯ, ಸುಗಮವಾಗಿ ಬಿಸಿನೆಸ್ ನಡೆಸಬಹುದಾದ ಅವಕಾಶ, ಸಹಕಾರಿ ವ್ಯವಸ್ಥೆ ಇವೆಲ್ಲದರಲ್ಲೂ ಶ್ರೀಲಂಕಾವು ಭಾರತಕ್ಕಿಂತ ಮೇಲೆ ಇತ್ತು.

ಈ ಪರಿ ಹಿಂದೆ ಉಳಿಯಲು ಕಾರಣಗಳೇನು?

ನವ ಉದಾರಿ ನೀತಿಗಳು, ವಿದೇಶಿ ಖಾಸಗಿ ಬಂಡವಾಳದ ಹರಿವು, ಸಂಪೂರ್ಣ ಆಮದು ಉತ್ಪನ್ನಗಳ ಮೇಲೆ ರಾಷ್ಟ್ರ ಅವಲಂಬಿತವಾಗಿದ್ದು, ಕೋವಿಡ್ ಪರಿಣಾಮಗಳು, ಪ್ರಭುತ್ವದ ಸರ್ವಾಧಿಕಾರಿ ನಿಲುವುಗಳ, ಪರಿಣಿತರ ಸಲಹೆಗಳನ್ನು ಪರಿಗಣಿಸದಿದ್ದದ್ದು ಶ್ರೀಲಂಕಾದ ಡೋಲಾಯ ಮಾನ ಪರಿಸ್ಥಿತಿಗೆ ಕಾರಣವಾಗಿದೆ.

ಭಾರತದ ಮೇಲಾದ ಪರಿಣಾಮಗಳು

1983ರಲ್ಲಿಯೇ ತಮಿಳರ ಮೇಲೆ ಬೌದ್ಧರು ಮತ್ತು ಅಲ್ಲಿನ ರಾಷ್ಟ್ರೀಯವಾದಿಗಳು ಆಕ್ರಮಣ ಮಾಡಿದಾಗ ಎಲ್‌ಟಿಟಿಇ ನೇತೃತ್ವದಲ್ಲಿ ದೊಡ್ಡ ಹೋರಾಟ ನಡೆದಿತ್ತು. ಶ್ರೀಲಂಕಾದ ಉತ್ತರ ಭಾಗ ಜಾಫ್ನಾದಿಂದ ವಲಸೆಬಂದ ತಮಿಳರನ್ನು ನಮ್ಮ ತಮಿಳು ನಾಡಿನಲ್ಲಿಯೇ ಆಶ್ರಯ ಕೊಡಬೇಕಾದ ಅನಿವಾರ್ಯತೆಗೆ ಭಾರತ ಸಿಲುಕಿಕೊಂಡಿತ್ತು.

ಶ್ರೀಲಂಕಾದ ಚರಿತ್ರೆ

ಭಾರತ-ಬಾಂಗ್ಲಾ ಪಾಕಿಸ್ತಾನ-ಶ್ರೀಲಂಕಾಗಳು ಬ್ರಿಟಿಷರ ವಸಾಹತು ದೇಶಗಳಾಗಿದ್ದವು; ಹಾಗಾಗಿ ಶ್ರೀಲಂಕಾ ಬ್ರಿಟಿಷರ ಪಾಲಿಗೆ ಒಂದು ಬೃಹತ್ ಚಹಾ ತೋಟ ಮತ್ತು ರಬ್ಬರ್ ತೋಟಗಳಷ್ಟೇ ಆಗಿತ್ತು. ಭಾರತ 1947ರಲ್ಲಿ ಮತ್ತು ಶ್ರೀಲಂಕಾ 1948ರಲ್ಲಿ ಬ್ರಿಟಿಷ್ ಆಡಳಿತದಿಂದ ಸ್ವಾತಂತ್ರ್ಯ ಪಡೆದವು.

ಬ್ರಿಟೀಷರ ಒಡೆದು ಆಳುವ ನೀತಿಯ ಫಲವಾಗಿ ಭಾರತದಲ್ಲಿ ಹಿಂದು-ಮುಸ್ಲಿಂ ವಿಭಜನೆ ನಡೆದಂತೆ ಶ್ರೀಲಂಕಾದಲ್ಲಿ ಬೌದ್ಧರು ಮತ್ತು ತಮಿಳು ಎನ್ನುವಂತಹ ವೈಷಮ್ಯವನ್ನು ಭಿತ್ತಿಯೇ ಬ್ರಿಟೀಷರು ಹೋಗಿದ್ದರು. ನಂತರದಲ್ಲಿ ಬೌದ್ಧ ಧರ್ಮದ ಪ್ರಧಾನ ಧರ್ಮ ಮತ್ತು ಸಿಂಹಳೀಯ ಭಾಷೆಯೇ ಪ್ರಧಾನ ಭಾಷೆ ಎಂಬಂಥ ಒಂದು ಮನ್ನಣೆ ಸಂವಿಧಾನಿಕವಾಗಿಯೇ ಲಭಿಸಿತ್ತು. ಇವು ಕೂಡಾ ಮುಂದೆ ಅಲ್ಲಿನ ಅಂತಃಕಲಹಗಳಿಗೆ ಕಾರಣವಾಗಿತ್ತು.

1970 ರಲ್ಲಿ ರೈತಾಪಿ ದಂಗೆಗಳ ರೀತಿಯ ದಂಗೆಗಳು ಶ್ರೀಲಂಕಾದಲ್ಲಿ ಶುರುವಾಗಿದ್ದವು.

1977 ರಲ್ಲಿ ಶ್ರೀಲಂಕಾ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ(IMF) ಸಾಲ ಪಡೆದುಕೊಂಡಿತು. ದಕ್ಷಿಣ ಏಷ್ಯಾದಲ್ಲಿಯೇ ಪ್ರಥಮಬಾರಿಗೆ ಐಎಂಎಫ್‌ನಿಂದ ಸಾಲ ಪಡೆದುಕೊಂಡಿತು. ಪ್ರಾರಂಭದಲ್ಲಿ ಆರ್ಥಿಕತೆ ಚೇತರಿಸಿಕೊಂಡಿತಾದರೂ ಐಎಂಎಫ್‌ನ ಷರತ್ತುಗಳನ್ನು ಪಾಲಿಸುತ್ತಾ ಶ್ರೀಲಂಕಾದ ಆರ್ಥಿಕತೆ ಕುಸಿಯ ತೊಡಗಿತು. ಪರಿಣಾಮವಾಗಿ ಮತ್ತೆ ಮತ್ತೆ ಸಾಲ ಮಾಡಲೇಬೇಕಾದ ಒತ್ತಡಕ್ಕೆ ಒಳಗಾಗಿ ಈ ಹಣಕಾಸು ಸಂಸ್ಥೆಯಿಂದ ಸಾಲ ಪಡೆದುಕೊಳ್ಳುತ್ತಲೇ ಹೋಯಿತು. 1977ರಿಂದ ಇದುವರೆಗೂ ಶ್ರೀಲಂಕಾ 17 ಬಾರಿ ಸಾಲಪಡೆದಿದೆ.

ಆರ್ಥಿಕ ಬಿಕ್ಕಟ್ಟಿನ ಪ್ರಧಾನ ಕಾರಣಗಳು

- ಅಸಮರ್ಪಕ ಆರ್ಥಿಕ ನಿರ್ವಹಣೆ
- ಈಸ್ಟರ್ ಬಾಂಬಿಂಗ್ ಪ್ರಕರಣ
- ವಿಸ್ತರಣಾ ಹಣಕಾಸು ನೀತಿ(ಅಪಾಯಕಾರಿ ತೆರಿಗೆ ಕಡಿತ)
- ಕೋವಿಡ್ ಬಿಕ್ಕಟ್ಟು
- ಅನಾವಶ್ಯಕ ಮೂಲಸೌಕರ್ಯ ಯೋಜನೆಗಳು
- ಸಾವಯವ ಕೃಷಿಯತ್ತ ಅಕಾಲಿಕ ಹೊರಳುವಿಕೆ
- ರಷ್ಯಾ-ಉಕ್ರೇನಿಯನ್ ಸಂಘರ್ಷ
- ಸರ್ವಾಧಿಕಾರಿ ಧೋರಣೆ
- ಆರ್ಥಿಕ ತಜರ ಸಲಹೆಗಳ ನಿರ್ಲಕ್ಷ್ಯ
- ಆಂತರಿಕ ಜನಾಂಗೀಯ ಕಲಹಗಳು
- ಕುಸಿದ ಪ್ರವಾಸೋದ್ಯಮ.

ಒಟ್ಟಿನಲ್ಲಿ ಮಾನವ ನಿರ್ಮಿತ ಮತ್ತು ಕೋವಿಡ್ ನಿರ್ಮಿತ ಸಮಸ್ಯೆಗಳು ಮತ್ತು ಸರ್ವಾಧಿಕಾರಿ ನಿರ್ಧಾರಗಳು ಶ್ರೀಲಂಕಾದ ಈ ದುರ್ಬರ ಸ್ಥಿತಿಗೆ ಕಾರಣವಾಗಿವೆ.

ಪ್ರಜಾವಾಣಿ ಉದ್ಯೋಗ ವಾರ್ತೆ

ಪಶ್ಚಿಮ ರೈಲ್ವೆಯಲ್ಲಿ 3,612 ಅಪ್ರೆಂಟಿಸ್ ಹುದ್ದೆಗಳು

ರೈಲ್ವೆ ಇಲಾಖೆಯ ಪಶ್ಚಿಮ ರೈಲ್ವೆ ವಿಭಾಗದಲ್ಲಿ ಖಾಲಿ ಇರುವ 3612 ಅಪ್ರೆಂಟಿಸ್ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

- **ಹುದ್ದೆಗಳ ವಿವರ:** ಫಿಟ್ಟರ್, ಟರ್ನರ್, ಎಲೆಕ್ಟ್ರಿಷಿಯನ್, ಮೆಕಾನಿಸ್ಟ್, ಪ್ಲಂಬರ್, ಪೇಂಟರ್ ಹುದ್ದೆಗಳ ನೇಮಕಾತಿ ನಡೆಯಲಿದೆ
- **ಒಟ್ಟು ಹುದ್ದೆಗಳ ಸಂಖ್ಯೆ:** 3612
- **ವಿದ್ಯಾರ್ಹತೆ:** ಹುದ್ದೆಗಳಿಗೆ ಸಂಬಂಧಿಸಿದಂತೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಐಟಿಐ ಪೂರ್ಣಗೊಳಿಸಿರಬೇಕು.
- **ತರಬೇತಿ ಭತ್ಯೆ:** ಕೇಂದ್ರ ಸರ್ಕಾರದ ನಿಯಮಗಳ ಅನ್ವಯ ತರಬೇತಿ ಭತ್ಯೆ ನೀಡಲಾಗುವುದು.
- **ವಯೋಮಿತಿ ಸಡಿಲಿಕೆ:** ಕನಿಷ್ಠ 15 ವರ್ಷ, ಗರಿಷ್ಠ 24 ವರ್ಷದೊಳಗಿರಬೇಕು. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.
- **ಅರ್ಜಿ ಶುಲ್ಕ:** ಸಾಮಾನ್ಯ ಮತ್ತು ಒಬಿಸಿ ಅಭ್ಯರ್ಥಿಗಳಿಗೆ ₹100. ಎಸ್‌ಸಿ / ಎಸ್‌ಟಿ / ಅಂಗವಿಕಲ/ ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.
- **ನೇಮಕಾತಿ ವಿಧಾನ:** ಎಸ್‌ಎಸ್‌ಎಲ್‌ಸಿ ಹಾಗೂ ಐಟಿಐನಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಲಿಸ್ಟ್ ತಯಾರಿಸಿ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.
- **ಅರ್ಜಿ ಸಲ್ಲಿಸುವ ವಿಧಾನ:** ಅಭ್ಯರ್ಥಿಗಳು ಇಲಾಖೆಯ ಅಧಿಕೃತ ವೆಬ್‌ಸೈಟ್ https://www.rrc-wr.com/TradeApp/Login ಗೆ ಲಾಗಿನ್ ಆಗಿ ಅರ್ಜಿ ಸಲ್ಲಿಸಬೇಕು. ಇತರೆ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- **ಅರ್ಜಿ ಸಲ್ಲಿಸಲು ಕೊನೆಯ ದಿನ:** 27, ಜೂನ್, 2022
- **ವೆಬ್‌ಸೈಟ್:** https://www.rrc-wr.com/TradeApp/Login



ಸುಭಾಷಿತ
ಜೀವನದಲ್ಲಿ ಏನೇ ಏರುಪೇರಾದರೂ ಆಲೋಚನೆಯೇ ನಿಮ್ಮ ಮೂಲ ಬಂಡವಾಳ ಮತ್ತು ಆಸ್ತಿಯಾಗಿರಬೇಕು.
-ಎ.ಪಿ.ಜೆ. ಅಬ್ದುಲ್ ಕಲಾಂ

ದೇವನಹಳ್ಳಿ: ಕೃಷಿ ಜಮೀನು ಸ್ವಾಧೀನ ಪ್ರಕ್ರಿಯೆ ಕೈಬಿಡಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ದೇವನಹಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕೈಗಾರಿಕೆಗಳಿಗಾಗಿ ಈಗಾಗಲೇ ಸ್ವಾಧೀನಪಡಿಸಿಕೊಂಡಿರುವ 2,000 ಎಕರೆಗೂ ಹೆಚ್ಚು ಜಮೀನು ಹಲವು ವರ್ಷಗಳಿಂದ ಬಳಕೆಯೇ ಆಗಿಲ್ಲ. ರೈತರನ್ನು ಒಕ್ಕಲೆಬ್ಬಿಸಿ, ಅವರಿಂದ ಸ್ವಾಧೀನಪಡಿಸಿಕೊಂಡ ಜಮೀನು ಕೈಗಾರಿಕೆಗಳ ಅಭಿವೃದ್ಧಿಯೂ ಇಲ್ಲದೆ, ವ್ಯವಸಾಯವೂ ಇಲ್ಲದೆ ಪಾಳುಬಿದ್ದಿದೆ. ಈಗ ಮತ್ತೆ ಅದೇ ತಾಲ್ಲೂಕಿನ 13 ಹಳ್ಳಿಗಳ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶ ನಿರ್ಮಾಣಕ್ಕಾಗಿ 1,777 ಎಕರೆ ಕೃಷಿ ಜಮೀನು ಸ್ವಾಧೀನಕ್ಕೆ ಕೆಐಎಡಿಬಿ ಮುಂದಾಗಿದೆ. ಫಲವತ್ತಾದ ಕೃಷಿ ಜಮೀನು ಕಳೆದುಕೊಳ್ಳಲು ಒಪ್ಪದ ರೈತರು ಭೂಸ್ವಾಧೀನ ಪ್ರಕ್ರಿಯೆಯನ್ನು ವಿರೋಧಿಸಿ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣದಲ್ಲಿ 59 ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. ಕೃಷಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಕೈಗಾರಿಕೆಗಳಿಗೆ ಹಂಚಿಕೆ ಮಾಡುವ ಕೆಲಸವನ್ನು ಕೆಐಎಡಿಬಿ ನಿರಂತರವಾಗಿ ಮಾಡುತ್ತಿದೆ. ಆದರೆ, ಹಾಗೆ ಹಂಚಿಕೆಯಾದ ಜಮೀನುಗಳು ಅದೇ ಉದ್ದೇಶಕ್ಕೆ ಬಳಕೆ ಆಗಿವೆಯೇ? ಅಲ್ಲಿ ಕೈಗಾರಿಕೆಗಳು ಕಾರ್ಯಾರಂಭ ಮಾಡಿವೆಯೇ ಎಂಬುದನ್ನು ಪರಿಶೀಲಿಸುವ ಕೆಲಸ ಮಾಡಿದ್ದು ಕಡಿಮೆ. ಸರ್ಕಾರ ಹಂಚಿಕೆ ಮಾಡಿದ ಜಮೀನಿನಲ್ಲಿ ಮೂರು ವರ್ಷಗಳೊಳಗೆ ಕೈಗಾರಿಕೆ ಆರಂಭಿಸದೇ ಇದ್ದರೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂಬ ಅಂಶ ಕಾಯ್ದೆಯಲ್ಲಿ ಸ್ಪಷ್ಟವಾಗಿದೆ. ಆದರೆ, ಸರ್ಕಾರ ಈ ಅಧಿಕಾರವನ್ನು ಚಲಾಯಿಸುವ ಗೋಜಿಗೇ ಹೋಗುವುದಿಲ್ಲ. ಕೈಗಾರಿಕೆಗಳನ್ನು ಸ್ಥಾಪಿಸದೇ ಇದ್ದರೂ 'ಕಾನೂನುಬದ್ಧ'ವಾಗಿಯೇ ಶುದ್ಧಕ್ರಯ-ಪತ್ರ ಮಾಡಿಕೊಡಲಾಗುತ್ತಿದೆ. ಆ ಬಳಿಕ ಕೈಗಾರಿಕಾ ನಿವೇಶನಗಳನ್ನು ರಿಯಲ್ ಎಸ್ಟೇಟ್ ಚಟುವಟಿಕೆ ಮತ್ತು ಇತರ ಕೈಗಾರಿಕೇತರ ಉದ್ದೇಶಗಳಿಗೆ ವರ್ಗಾವಣೆ ಮಾಡುವುದು ನಡೆಯುತ್ತಲೇ ಇದೆ.



ಈಗಾಗಲೇ ಸ್ವಾಧೀನ ಪಡಿಸಿಕೊಂಡಿರುವ ಜಮೀನೇ ಬಳಕೆಯಾಗಿಲ್ಲದಿರುವಾಗ ಹೊಸ ಭೂಸ್ವಾಧೀನ ಪ್ರಕ್ರಿಯೆ ಈಗ ಅಗತ್ಯವೇ?

ದೇವನಹಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕೆಲವೇ ವರ್ಷಗಳ ಅವಧಿಯಲ್ಲಿ ನಾಲ್ಕನೇ ಬಾರಿ ಕೈಗಾರಿಕಾ ಉದ್ದೇಶಕ್ಕೆ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ. ದೇವನಹಳ್ಳಿಯಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣವಾದ ಬಳಿಕ ಸುತ್ತಮುತ್ತಲಿನ ಜಮೀನುಗಳಿಗೆ ಚಿನ್ನದ ಬೆಲೆ ಬಂದಿದೆ. ಆ ಭಾಗದಲ್ಲಿ ಪದೇ ಪದೇ ಏಕೆ ಭೂಸ್ವಾಧೀನ ನಡೆಸಲಾಗುತ್ತಿದೆ ಎಂಬುದಕ್ಕೆ ಇದೇ ಕಾರಣ. ಹೊಸ ಕೈಗಾರಿಕಾ ಪ್ರದೇಶ ನಿರ್ಮಾಣಕ್ಕಾಗಿ 1,777 ಎಕರೆ ಜಮೀನು ಸ್ವಾಧೀನಕ್ಕೆ ಜನವರಿಯಲ್ಲಿ ಕೆಐಎಡಿಬಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದೆ. ಈ ಎಲ್ಲ ಜಮೀನುಗಳನ್ನೂ ಸ್ವಾಧೀನಪಡಿಸಿಕೊಂಡಲ್ಲಿ 1,800ಕ್ಕೂ ಹೆಚ್ಚು ಹಿಡುವಳಿದಾರರು ಭೂರಹಿತರಾಗುತ್ತಾರೆ. ದೇವನಹಳ್ಳಿ ತಾಲ್ಲೂಕು ಅತ್ಯಂತ ಫಲವತ್ತಾದ ಜಮೀನು ಇರುವ ಪ್ರದೇಶ. ಬೆಂಗಳೂರಿಗೆ ತರಕಾರಿ, ಹಣ್ಣು, ಹಾಲು ಸೇರಿದಂತೆ ಕೃಷಿ ಮತ್ತು ಹೈನುಗಾರಿಕೆ ಉತ್ಪನ್ನಗಳನ್ನು ಪೂರೈಸುತ್ತಿದೆ. ಈಗ ಸ್ವಾಧೀನಪಡಿಸಿಕೊಳ್ಳಲು ಗುರುತಿಸಿರುವ ಜಮೀನುಗಳಲ್ಲಿ ರೇಷ್ಮೆ, ದ್ರಾಕ್ಷಿ ತೋಟಗಳು, ತರಕಾರಿ ಮತ್ತು ಇತರ ಹಣ್ಣಿನ ಬೆಳೆಗಳು ಇವೆ. ಹೈನುಗಾರಿಕೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಕೃಷಿ ಮತ್ತು ಹೈನುಗಾರಿಕೆಯನ್ನೇ ಅವಲಂಬಿಸಿರುವ ರೈತರು ಜಮೀನು ಬಿಟ್ಟುಕೊಡಲು ಸಿದ್ಧರಿಲ್ಲ. ಈ ಹಿಂದೆ ಸ್ವಾಧೀನಪಡಿಸಿಕೊಂಡಿರುವ 2,000 ಎಕರೆ ಜಮೀನಿನಲ್ಲಿ ಬಹುಪಾಲು ಪ್ರದೇಶ ಬಳಕೆಯಾಗದೇ ಉಳಿದಿರುವಾಗ ಕೈಗಾರಿಕೆಗಳ ಹೆಸರಿನಲ್ಲಿ ಮತ್ತೆ ಏಕೆ ಭೂಸ್ವಾಧೀನ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂಬ ರೈತರ ಪ್ರಶ್ನೆಗೆ ಉತ್ತರಿಸಬೇಕಾದ ಹೊಣೆಗಾರಿಕೆ ರಾಜ್ಯ ಸರ್ಕಾರದ ಮೇಲಿದೆ.

ಕೆಐಎಡಿಬಿ ಈವರೆಗೆ 173 ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿದೆ. ಅವುಗಳ ವ್ಯಾಪ್ತಿಯಲ್ಲಿ ಕೈಗಾರಿಕೆಗಳಿಗೆ ಹಂಚಿಕೆ ಮಾಡಿದ್ದ ಬೃಹತ್ ಪ್ರಮಾಣದ ಜಮೀನು ಆ ಉದ್ದೇಶಕ್ಕೆ ಬಳಕೆಯಾಗಿಲ್ಲ ಮತ್ತು ಹಲವೆಡೆ ಕೈಗಾರಿಕಾ ಪ್ರದೇಶಗಳ ಜಮೀನನ್ನೇ ಒತ್ತುವರಿ ಮಾಡಲಾಗಿದೆ ಎಂಬ ಆರೋಪಗಳಿವೆ. ಕೆಐಎಡಿಬಿ ಮೂಲಕ ನಡೆದಿರುವ ಕೈಗಾರಿಕಾ ನಿವೇಶನಗಳ ಹಂಚಿಕೆ ಮತ್ತು ಅವುಗಳ ಬಳಕೆ ಕುರಿತು ಲೆಕ್ಕಪರಿಶೋಧನೆ ನಡೆಸಲು ಜಾಗತಿಕ ಟೆಂಡರ್ ಆಹ್ವಾನಿಸುವುದಾಗಿ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಇತ್ತೀಚೆಗೆ ಪ್ರಕಟಿಸಿದ್ದರು. ಕೈಗಾರಿಕಾ ಜಮೀನುಗಳಿಗೆ ಸಂಬಂಧಿಸಿದ ಲೆಕ್ಕಪರಿಶೋಧನೆ ಪೂರ್ಣಗೊಳ್ಳುವ ಮುನ್ನವೇ ತರಾತುರಿಯಲ್ಲಿ ದೇವನಹಳ್ಳಿ ತಾಲ್ಲೂಕಿನಲ್ಲಿ 1,777 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿರುವುದು ಬೇರೆ ಬೇರೆ ಬಗೆಯ ಅನುಮಾನಗಳಿಗೆ ಕಾರಣವಾಗಿದೆ. ರಿಯಲ್ ಎಸ್ಟೇಟ್ ಮಾಫಿಯಾದ ಜತೆ ಅಧಿಕಾರಸ್ಥರು ಕೈಜೋಡಿಸಿರಬಹುದು ಎಂಬ ಆರೋಪಕ್ಕೆ ಪುಷ್ಟಿ ನೀಡುವಂತೆ ಇದೆ. ದೇವನಹಳ್ಳಿ ತಾಲ್ಲೂಕಿನಂತಹ ಫಲವತ್ತಾದ ಪ್ರದೇಶಗಳಲ್ಲಿ ಕೃಷಿ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ಮನಸೋಇಚ್ಛೆ ಸ್ವಾಧೀನಪಡಿಸಿಕೊಳ್ಳುವುದು ಆಹಾರ ಭದ್ರತೆಯ ಮೇಲೆ ದುಷ್ಪರಿಣಾಮ ಬೀರುವುದಲ್ಲದೇ, ಕೃಷಿ ಆರ್ಥಿಕತೆ ಕುಸಿದುಬೀಳಲು ಕಾರಣವಾಗುತ್ತದೆ. ಪರಿಸರ ಇಲಾಖೆಯ ಅನುಮತಿ ಪಡೆಯದೆ, ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳ ಕುರಿತ ಸಮೀಕ್ಷೆ ನಡೆಸದೆ, ಜಮೀನು ಕಳೆದುಕೊಳ್ಳುವವರಿಗೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಲು ಸಮರ್ಪಕ ಯೋಜನೆ ರೂಪಿಸದೇ ಕೃಷಿ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ಮನಸೋಇಚ್ಛೆ ಸ್ವಾಧೀನಪಡಿಸಿಕೊಳ್ಳುವುದನ್ನು ಒಪ್ಪಲಾಗದು. ಜಮೀನು ಕಳೆದುಕೊಳ್ಳುವ ಕುಟುಂಬಗಳ ಯುವಕ, ಯುವತಿಯರಿಗೆ ಅಲ್ಲಿ ಆರಂಭವಾಗುವ ಉದ್ದಿಮೆಗಳಲ್ಲಿ ಉದ್ಯೋಗ ನೀಡುವ ಭರವಸೆ ನೀಡಲಾಗುತ್ತದೆ. ಆದರೆ, 'ಡಿ' ದರ್ಜೆಗಿಂತ ಮೇಲಿನ ಹುದ್ದೆಗಳು ಜಮೀನು ಕೊಟ್ಟ ಕುಟುಂಬಗಳಿಗೆ ದೊರೆತಿರುವುದು ತೀರಾ ವಿರಳ. ತಮ್ಮದೇ ನೆಲದಲ್ಲಿ ತಾವು 'ಸ್ವಚ್ಛತಾ ಕಾರ್ಮಿಕ'ರಾಗಿ ದುಡಿಯಲು ಸಿದ್ಧರಿಲ್ಲದ ರೈತರು, ಕೃಷಿ ಕಾಯಕವನ್ನೇ ಮುಂದುವರಿಸಲು ಅವಕಾಶ ಕೇಳಿ ಪ್ರತಿಭಟನೆಯ ಹಾದಿ ಹಿಡಿದಿದ್ದಾರೆ. ಎರಡನೇ ಹಂತದ ನಗರಗಳಿಗೆ ಹೂಡಿಕೆ ಆಕರ್ಷಿಸುವುದಕ್ಕೆ 'ಬಿಯಾಂಡ್ ಬೆಂಗಳೂರು' ಎಂಬ ನೀತಿಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದೆ. ಅದಕ್ಕೆ ವಿರುದ್ಧವಾಗಿ ದೇವನಹಳ್ಳಿ ತಾಲ್ಲೂಕಿನಲ್ಲಿ ನೂರಾರು ಎಕರೆ ಜಮೀನು ಸ್ವಾಧೀನಕ್ಕೆ ಪ್ರಕ್ರಿಯೆ ಆರಂಭಿಸುವ ಮೂಲಕ ಹೂಡಿಕೆದಾರರು ಬೆಂಗಳೂರಿನ ಸುತ್ತಲೇ ನೆಲೆಯೂರುವಂತೆ ಮಾಡಲು ಹೊರಟಿದೆ. ಇದು ಕೈಗಾರಿಕಾ ಅಭಿವೃದ್ಧಿಯ ವಿಚಾರದಲ್ಲಿ ರಾಜ್ಯದಲ್ಲಿ ಮತ್ತಷ್ಟು ಅಸಮತೋಲನಕ್ಕೆ ಎಡೆಮಾಡುತ್ತದೆ. ಈಗ ಆರಂಭಿಸಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಸರ್ಕಾರ ತಕ್ಷಣ ಕೈಬಿಡಬೇಕು. ಈವರೆಗೆ ಕೆಐಎಡಿಬಿ ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆ ಮಾಡಿರುವ ಕೈಗಾರಿಕಾ ನಿವೇಶನಗಳಲ್ಲಿ ಬಳಕೆಯಾಗದೇ ಉಳಿದ ಜಮೀನುಗಳನ್ನು ವಶಪಡಿಸಿಕೊಂಡು ಮರುಹಂಚಿಕೆ ಮಾಡಬೇಕು. ಅಲ್ಲಿಯವರೆಗೂ ಯಾವುದೇ ಹೊಸ ಭೂಸ್ವಾಧೀನ ಪ್ರಕ್ರಿಯೆಯನ್ನೂ ನಡೆಸಬಾರದು.

ದಿನದ ಟ್ವೀಟ್

ಎಲ್ಲವೂ ಅಧಿಕಾರ, ಸಂಪತ್ತಿಗಾಗಿ



'ಊಹಾಪೋಹಕ್ಕೆ ತೆರೆ ಬಿದ್ದಿದೆ, ಹಾರ್ದಿಕ್ ಪಟೇಲ್ ಬಿಜೆಪಿ ಸೇರಲಿದ್ದಾರೆ': ತಾತ್ವಿಕ ಕಾರಣಗಳಿಗಾಗಿ ರಾಜಕೀಯದಲ್ಲಿ ಇದ್ದೇವೆ ಎಂದು ಹೇಳಿಕೊಳ್ಳುವವರು, ಸೈದ್ಧಾಂತಿಕವಾಗಿ ವಿರುದ್ಧ ಧ್ರುವಗಳಂತಿರುವ ಪಕ್ಷಗಳನ್ನು ಎಷ್ಟೊಂದು ಸುಲಭವಾಗಿ ಮತ್ತು ಮನಬಂದಂತೆ ಹೇಗೆ ಬದಲಾಯಿಸುತ್ತಾರೆ ಎಂಬುದೇ ಅರ್ಥವಾಗದ ಸಂಗತಿ! ಅಧಿಕಾರ ಮತ್ತು ಸಂಪತ್ತಿಗಾಗಿ ಹಾತೊರೆಯುವ ಮಂದಿ.

ಪ್ರಶಾಂತ್ ಭೂಷಣ್, ವಕೀಲ

ಕಿಡಿನುಡಿ



ಜೋಕ್ ಆಫ್ ದಿ ಡೇ! ಮಾನ್ಯ ಪ್ರಧಾನಿ ಅವರೆ, ಒಬ್ಬ ಸಾಮಾನ್ಯ ನಾಗರಿಕನಾಗಿ ಯಾವುದೇ ಸರ್ಕಾರಿ ಕಚೇರಿಗೆ ಒಮ್ಮೆ ಭೇಟಿ ನೀಡಿ. ಆಗ ನೀವು ನಿಸ್ಸಂಶಯವಾಗಿಯೂ ನಿಮ್ಮ ಈ ಹೇಳಿಕೆಯನ್ನು ಪುನರುಚ್ಚರಿಸಲಾರಿರಿ.
('ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರ ಶೂನ್ಯ' ಎಂಬ ಪ್ರಧಾನಿ ಹೇಳಿಕೆಗೆ ಪ್ರತಿಕ್ರಿಯೆ)

ಚೇತನ್ ಜೀರಾಳ್, ನಾಗರಿಕ

25 ವರ್ಷಗಳ ಹಿಂದೆ
ಸೋಮವಾರ, 2-6-1997

• ಲಾಲೂ ರಾಜೀನಾಮೆಗೆ ಒತ್ತಾಯ

ಚೆನ್ನೈ, ಜೂನ್ 1 (ಪಿಟಿಐ)- ಮೇವು ಹಗರಣದ ಆರೋಪಿಯಾದ ಬಿಹಾರ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರು ರಾಜೀನಾಮೆ ನೀಡಬೇಕು ಎಂದು ರೈಲ್ವೆ ಸಚಿವ ರಾಂ ವಿಲಾಸ್ ಪಾಸ್ವಾನ್ ಇಂದು ಇಲ್ಲಿ ಒತ್ತಾಯಿಸಿದರು.

ಭ್ರಷ್ಟಾಚಾರ ಪ್ರಕರಣಗಳು ರಾಜಕೀಯ ಪಕ್ಷಗಳ ವರ್ಚಸ್ಸಿಗೆ ಮಸಿ ಬಳಿಯುತ್ತವೆ. ಹಾಗಾಗಿ ಮೇವು ಹಗರಣದಲ್ಲಿ ಭ್ರಷ್ಟಾಚಾರದ ಆರೋಪಕ್ಕೆ ಗುರಿಯಾಗಿರುವ ಲಾಲೂ ರಾಜೀನಾಮೆ ನೀಡಬೇಕು ಎಂದರು.

50 ವರ್ಷಗಳ ಹಿಂದೆ
ಶುಕ್ರವಾರ, 2-6-1972

• ಮಿಲಿಟರಿ ಪ್ರಾಬಲ್ಯದ ಸೊಕ್ಕಿನಿಂದ ಇತರರ ಮೇಲೆ ಒತ್ತಡ ಬೇಡ

ನವದೆಹಲಿ, ಜೂನ್ 1- ಕೇವಲ ಮಿಲಿಟರಿ ಬಲದ ಧಾರ್ಷ್ಟ್ಯದಿಂದ ಸಣ್ಣ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಒತ್ತಡ ಹೇರುವ ಓಬಿರಾಯನ ಕಾಲದ ಮನೋಭಾವ ತ್ಯಜಿಸುವಂತೆ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಇಂದು ಇಲ್ಲಿ ಬೃಹತ್ ಶಕ್ತಿ ರಾಷ್ಟ್ರಗಳಿಗೆ ಖಂಡತುಂಡವಾಗಿ ತಿಳಿಸಿದರು.

ಎ.ಐ.ಸಿ.ಸಿ. ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಅವರು, ಪ್ರಜೆಗಳು ಒಂದುಗೂಡಿದಲ್ಲಿ ಸಣ್ಣ ರಾಷ್ಟ್ರಗಳೂ ಶಕ್ತಿಯುತ ರಾಷ್ಟ್ರಗಳನ್ನು ಎದುರಿಸಬಹುದೆಂಬುದನ್ನು ವಿಯೆಟ್ನಾಂ ಋಜುವಾತುಪಡಿಸಿದೆಯೆಂದು ಹೇಳಿದರು.

ಈ ಕುರಿತ ಅಧಿಕೃತ ಮಾರ್ಗಸೂಚಿ ವಿಜ್ಞಾನಿಗಳಿಗೆ ಎಷ್ಟರಮಟ್ಟಿಗೆ ಸ್ವಾತಂತ್ರ್ಯ ಕೊಟ್ಟಿದೆ?

ವಿಜ್ಞಾನಿಗಳ ಸಾಮಾಜಿಕ ಹೊಣೆ



ವಿಶ್ಲೇಷಣೆ

ಟಿ.ಆರ್.ಅನಂತರಾಮು

ಭಾರತವು ಮೇ 11ರಂದು 'ರಾಷ್ಟ್ರೀಯ ತಂತ್ರಜ್ಞಾನ ದಿನ' ಆಚರಿಸಿದಾಗ, ಇದರಲ್ಲಿ ಎರಡು ಮುಖ್ಯ ಸಂಗತಿಗಳು ಸೇರಿದ್ದವು. ರಾಜಸ್ಥಾನದ ಪೋಖ್ರಾನ್‌ನಲ್ಲಿ 1998ರಲ್ಲಿ ಇದೇ ದಿನ ಪರಮಾಣು ಬಾಂಬಿನ ಯಶಸ್ವಿ ಎರಡನೇ ಪ್ರಯೋಗವಾಗಿ, ಭಾರತ ತಾನು ಪರಮಾಣು ರಾಷ್ಟ್ರ ಎಂದು ಅಧಿಕೃತವಾಗಿ ಘೋಷಿಸಿಕೊಂಡಿತ್ತು. ಅದನ್ನು ನೆನಪಿಸುವ ಆಚರಣೆ ಇದಾಗಿತ್ತು. ಎರಡನೆಯದು, 2019ರಲ್ಲೇ ಕೇಂದ್ರ ಸರ್ಕಾರದ ವಿಜ್ಞಾನ ತಂತ್ರಜ್ಞಾನ ಇಲಾಖೆ ಸಿದ್ಧಪಡಿಸಿದ್ದ 'ವಿಜ್ಞಾನಿಗಳ ಸಾಮಾಜಿಕ ಹೊಣೆ' ಎಂಬ ಮಾರ್ಗದರ್ಶಿ ಸೂತ್ರವನ್ನು ಅಧಿಕೃತವಾಗಿ ಬಿಡುಗಡೆ ಮಾಡಿದ್ದು. ಹಾಗೆ ನೋಡಿದರೆ ವಿಜ್ಞಾನಿಗಳಿಗೂ ಸಾಮಾಜಿಕ ಹೊಣೆ ಇರಬೇಕೆಂಬುದು ಸಮಾಜದ ಬಹುಕಾಲದ ನಿರೀಕ್ಷೆ ಕೂಡ ಹೌದು.

ಗಾಂಧೀಜಿ ಪ್ರತಿಪಾದಿಸಿದ್ದ ಸಪ್ತಪಾತಕಗಳಲ್ಲಿ 'ಮಾನವೀಯತೆ ಇಲ್ಲದ ವಿಜ್ಞಾನ'ವೂ ಪಾಪದ ಲೆಕ್ಕಕ್ಕೇ ಬರುತ್ತದೆ. ವಿಜ್ಞಾನ ಮತ್ತು ಸಮಾಜ ವಿಜ್ಞಾನದಲ್ಲಿ ಸಂಘರ್ಷವಿದೆ ಎನ್ನುವುದಾದರೆ, ಅದರಲ್ಲಿ ಎದ್ದು ಕಾಣುವುದೇ ವಿಜ್ಞಾನವು ಸಮಾಜದ ಒಳಿತಿಗಾಗಿಯೇ ಇರಬೇಕು ಎಂಬ ಅಂಶ.

ಈ ನಿರೀಕ್ಷೆಗೆ ಬೇರೆ ಆಯಾಮವೂ ಇದೆ. ಸಮಾಜವನ್ನು ಕೇಳಿ ವಿಜ್ಞಾನಿಗಳು ಪ್ರಯೋಗಕ್ಕೆ ಇಳಿಯುತ್ತಾರೆಯೇ? ಅಥವಾ ಸರ್ಕಾರದ ನಿಯಂತ್ರಣದಲ್ಲಿ ಕೆಲಸ ಮಾಡುವ ವಿಜ್ಞಾನಿಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿದೆಯೇ? ಯಾವುದು ಸಮಾಜಕ್ಕೆ ಉಪಯೋಗಿ, ಯಾವುದು ಅಲ್ಲ ಎಂದು ನಿರ್ಧರಿಸುವ ಹಕ್ಕು ನಿಜಕ್ಕೂ ವಿಜ್ಞಾನಿಗಳಿಗೆ ಇರುತ್ತದೆಯೇ? ಈ ವಿಚಾರ ಮುನ್ನೆಲೆಗೆ ಬಂದರೆ ಭಾರತವಷ್ಟೇ ಅಲ್ಲ, ಯಾವ ದೇಶದಲ್ಲೂ ಇದಕ್ಕೆ 'ಇಲ್ಲ' ಎಂಬ ಉತ್ತರವೇ ಬಂದೀತು. ದೊಡ್ಡ ದೊಡ್ಡ ಸಂಶೋಧನೆಗಳು ಬಜೆಟ್‌ನಲ್ಲಿ ದೊಡ್ಡ ಮೊತ್ತವನ್ನೇ ಬೇಡುತ್ತವೆ. ಅಂದರೆ ವಿಜ್ಞಾನ ಪ್ರಭುತ್ವಾವಲಂಬಿ. ಯಾವ ವಿಜ್ಞಾನಿಯೂ ಇದನ್ನು ಪ್ರಶ್ನಿಸುವುದಿಲ್ಲ. ಪ್ರಶ್ನಿಸಿ ಹೊರಬಂದವರು ಕೂಡ ಕಡಿಮೆಯೇ.

ಎರಡನೇ ಮಹಾಯುದ್ಧದಲ್ಲಿ ನಾಗಸಾಕಿ ಮತ್ತು ಹಿರೋಷಿಮಾ ಮೇಲೆ ಅಮೆರಿಕವು ಪರಮಾಣು ಬಾಂಬ್ ಹಾಕಿದ ಸಂಗತಿ ಶಾಶ್ವತವಾಗಿ ಇತಿಹಾಸದಲ್ಲಿ ದಾಖಲಾಗಿರುವುದನ್ನು ಹೊಸತಾಗಿ ನೆನಪಿಸಬೇಕಾಗಿಲ್ಲ. ಈ ಬಾಂಬ್ ಹಾಕುವ ಕೆಲವೇ ವಾರದ ಹಿಂದೆ ಹ್ಯಾರಿ ಟ್ರೂಮನ್ ಅಧ್ಯಕ್ಷ ಹುದ್ದೆಗೆ ಏರಿದ್ದರು. ಅವರ ಒಪ್ಪಿಗೆ ಇಲ್ಲದೆ ಈ ಕಾರ್ಯ ಎಸಗುವಂತಿರಲಿಲ್ಲ. ಆತ ಎಂಥ ಮಾನವತಾವಾದಿ ನೋಡಿ! 'ಆಯ್ದ ಮಿಲಿಟರಿ ನೆಲೆಗಳನ್ನು ನಾಶ ಮಾಡಿ, ಜನದಟ್ಟಣೆ ಪ್ರದೇಶಗಳ ಮೇಲೆ ಹಾಕುವುದು ಬೇಡ' ಎಂದಿದ್ದರು. ಮುಂದಿನದೆಲ್ಲ ಗೊತ್ತಿರುವ ಕಥೆಯೇ.

ಈ ಕೆಲಸವನ್ನು ಸಮಾಜಮುಖಿ ಎನ್ನಲಾದೀತೆ? ಪರಮಾಣು ಬಾಂಬಿನ ಸಾಧ್ಯತೆಯ ಬಗ್ಗೆ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್, ಆಗಿನ ಅಧ್ಯಕ್ಷ ರೂಸ್‌ವೆಲ್ಟ್ ಅವರಿಗೆ ಪತ್ರ ಬರೆದಿದ್ದರು. ಅಮೆರಿಕ ಒಡನೆ ಕಾರ್ಯಗತಗೊಳಿಸಿತು. ಐನ್‌ಸ್ಟೀನ್ ಅವರ ಸೂಚನೆಯನ್ನು 'ಅಮಾನವೀಯ' ಎಂದೇ ಈಗಲೂ ಅನೇಕ ಜನರು ಭಾವಿಸಿದ್ದಾರೆ.

ಇತ್ತ ಪೋಖ್ರಾನ್‌ನಲ್ಲಿ 1998ರಲ್ಲಿ ಎರಡನೆಯ ಬಾರಿಗೆ ಪರಮಾಣು ಬಾಂಬ್ ಪರೀಕ್ಷೆ ಮಾಡಿದಾಗ, ತಂಡದಲ್ಲಿ ಎ.ಪಿ.ಜೆ. ಅಬ್ದುಲ್ ಕಲಾಂ ಇದ್ದರು, ದೊಡ್ಡ ಜವಾಬ್ದಾರಿ ಹೊತ್ತ ವಿಜ್ಞಾನಿಗಳ ದೊಡ್ಡ ತಂಡವೇ ಇತ್ತು. 'ನೆರೆಯ ರಾಷ್ಟ್ರಗಳು ಪರಮಾಣು ಬಾಂಬು ತಯಾರಿಸುತ್ತಿರುವಾಗ, ನಾವು ತೆಪ್ಪಗೆ ನೋಡುತ್ತ ಕುಳಿತಿರಬೇಕೆ? ಒಂದು ಕೆನ್ನೆಗೆ ಹೊಡಿ ಎಂದರೆ ಎರಡೂ ಕೆನ್ನೆಗಳಿಗೆ ಬಾರಿಸುವ ಸಂದರ್ಭ ಇದು' ಎಂಬುದು ಆಗಿನ ಸಮರ್ಥನೆ. ಈ ಹಿನ್ನೆಲೆಯಲ್ಲೇ ಕಲಾಂ ಅವರು ಮುಂದೆ 'ಸಾಮರ್ಥ್ಯವು ಸಾಮರ್ಥ್ಯವನ್ನು ಗೌರವಿಸುತ್ತದೆ' ಎಂದಿದ್ದು.

ರಾಷ್ಟ್ರ ರಕ್ಷಣೆಗೆ ಇದು ಅನಿವಾರ್ಯ ಎನ್ನುವುದಾದರೆ ಸಮಾಜ ಇದಕ್ಕೆ ಏನು ಉತ್ತರಿಸೀತು? ಸರ್ಕಾರವು ಜನಾಭಿಪ್ರಾಯ ಕೇಳುತ್ತ ಕೂರಲು ಸಾಧ್ಯವೇ ಎನ್ನುವುದು ಇನ್ನೊಂದು ಸಮಜಾಯಿಷಿ. ಇಲ್ಲೆಲ್ಲ ವಿಜ್ಞಾನಿಗಳ ಸ್ವಾತಂತ್ರ್ಯ, ನಿಯಂತ್ರಣ ಪ್ರಭುತ್ವದ ಕೈಲೇ ಇರುತ್ತದೆ ಎಂಬುದು ನಿರ್ವಿವಾದ. ಈಗಲೂ ನೀವು ಪ್ರಶ್ನೆ ಕೇಳಬಹುದು. 'ಭಾರತದಲ್ಲಿ ಎಷ್ಟು ಪರಮಾಣು ಅಸ್ತ್ರಗಳಿವೆ, ಅವನ್ನು ಎಲ್ಲಿ ಜೋಪಾನ ಮಾಡಲಾಗಿದೆ' ಎಂದು. 'ಇದು ಗೋಪ್ಯ, ಅಂದರೆ ವರ್ಗೀಕೃತ ಮಾಹಿತಿ, ಸಾರ್ವಜನಿಕರೊಂದಿಗೆ ಹಂಚಿಕೊಳ್ಳುವಂತಿಲ್ಲ' ಎಂಬ ಉತ್ತರ ಬರುತ್ತದೆ. ಇಂಥ ಉತ್ತರ ಕೊಡದ ಅನೇಕ ಸಂಗತಿಗಳು ಸರ್ಕಾರದ ನಿಯಂತ್ರಣದಲ್ಲೇ ಇರುತ್ತವೆ. ಅಂದರೆ ಇಲ್ಲಿ ವಿಜ್ಞಾನಿ ಅಸಹಾಯಕ. ವಿಚಿತ್ರವೆಂದರೆ, ನಿವೃತ್ತರಾದ ನಂತರವೂ ಎಷ್ಟೋ ವಿಜ್ಞಾನಿಗಳು ಬಾಯಿ ಬಿಡುವುದೇ ಇಲ್ಲ. ಹಾಗಾದರೆ ಈಗ ಅಧಿಕೃತವಾಗಿ ಬಿಡುಗಡೆ ಮಾಡಿರುವ 'ವಿಜ್ಞಾನಿಗಳ ಸಾಮಾಜಿಕ ಹೊಣೆ' ಎಂಬ ಮಾರ್ಗಸೂಚಿ ವಿಜ್ಞಾನಿಗಳಿಗೆ ಎಷ್ಟರ ಮಟ್ಟಿಗೆ ಸ್ವಾತಂತ್ರ್ಯ ಕೊಟ್ಟಿದೆ?

ವರ್ಷಕ್ಕೆ ಹತ್ತು ದಿನಗಳನ್ನಾದರೂ ಸಮಾಜದ ಒಳಿತಿಗಾಗಿ ಮೀಸಲಿಡಿ. ನಮ್ಮಲ್ಲೇ ಇರುವ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ. ಬಡತನದ ನಿವಾರಣೆಗೆ ತಂತ್ರಜ್ಞಾನ ನೆರವಾಗಲಿ- ಇವೇ ಮುಂತಾದ ಹದಿನೇಳು ಅಂಶಗಳನ್ನು ಈ ಮಾರ್ಗದರ್ಶಿ ಸೂತ್ರದಲ್ಲಿ ಸೇರಿಸಲಾಗಿದೆ. ಜೊತೆಗೆ ಇದನ್ನು ಜಾರಿಗೆ ತಂದರೆ ವಿಜ್ಞಾನಿಗಳ ವಾರ್ಷಿಕ ಚಟುವಟಿಕೆಯಲ್ಲಿ ಇದನ್ನು ನಮೂದಿಸಿ ಅಂಥವರಿಗೆ ಉತ್ತೇಜನ ನೀಡುವುದಾಗಿಯೂ ಘೋಷಿಸಲಾಗಿದೆ. ಇದಕ್ಕಾಗಿಯೇ ಆಯವ್ಯಯದಲ್ಲಿ ಪ್ರತ್ಯೇಕ ಹಣವನ್ನು ನಿಗದಿಪಡಿಸಲಾಗಿದೆ.




ವಿಜ್ಞಾನದ ಎಲ್ಲ ಚಟುವಟಿಕೆಗಳೂ ಸಮಾಜಮುಖಿಯಾಗಿ ಇರುವುದಿಲ್ಲ; ಅದನ್ನು ನಿರೀಕ್ಷಿಸಲೂಬಾರದು. ಥರ್ಮೋಡೈನಮಿಕ್ಸ್ ಕುರಿತು ಮಾಡುವ ಸಂಶೋಧನೆಗಿಂತ ನಮ್ಮ ರೈತನಿಗೆ ತ್ವರಿತವಾಗಿ ಬೇಕಾಗಿರುವುದು ಬರವನ್ನು ನಿರೋಧಿಸಿ ಬೆಳೆಯುವ ಬೆಳೆಗಳು. ಕೀಟನಾಶಕಗಳನ್ನು ಬಳಸಿ ಬೆಳೆದ ಬೆಳೆಗಳು ನಮ್ಮ ಹೊಟ್ಟೆಯನ್ನೂ ಸೇರುತ್ತವಲ್ಲ? ಇದಕ್ಕೆ ಪರಿಹಾರ ಬೇಡವೇ? ಇದರ ಸಾಮಾಜಿಕ ಹೊಣೆಯನ್ನು ಯಾರು ಹೊರುತ್ತಾರೆ? ಕೃಷಿ ತಜ್ಞರೋ ರಾಸಾಯನಿಕ ವಿಜ್ಞಾನಿಗಳೋ?

'ಡೌನ್ ಟು ಅರ್ಥ್' ಪತ್ರಿಕೆಯ ಇತ್ತೀಚಿನ ವರದಿಯಂತೆ, 2020ರ ಒಂದೇ ವರ್ಷದಲ್ಲಿ 13,92,179 ಮಂದಿ ಭಾರತದಲ್ಲಿ ಕ್ಯಾನ್ಸರಿಗೆ ಬಲಿಯಾಗಿದ್ದಾರೆ. ಇದನ್ನು ಹೇಗೆ ಅರ್ಥೈಸುವುದು? ಆಹಾರ ತಜ್ಞರ ಸಾಮಾಜಿಕ ಹೊಣೆ ಏನು ಎಂಬ ಪ್ರಶ್ನೆ ಏಳುತ್ತದೆ. ಭಾರತೀಯ ವಿಜ್ಞಾನ ಸಂಸ್ಥೆ ನಮ್ಮ ಹೆಮ್ಮೆಯ ಸಂಸ್ಥೆ ಕೂಡ. ಜಾಗತಿಕ ಮಟ್ಟದಲ್ಲಿ ಅತಿ ಮೇಲಿರುವ ಸಂಸ್ಥೆ. ವರ್ಷಕ್ಕೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಸರ್ಕಾರದ ಅನುದಾನ ಪಡೆಯುತ್ತದೆ. ಬೆಂಗಳೂರಿನ ಕೆರೆಗಳ ಬಗ್ಗೆ, ವಿಶೇಷವಾಗಿ ಮಾಲಿನ್ಯದ ಬಗ್ಗೆ ದೊಡ್ಡ ಪ್ರಮಾಣದ ಸಂಶೋಧನೆ ಮಾಡಿದೆ. ವರದಿ ಸರ್ಕಾರದ ಕೈ ಸೇರಿದೆ ಕೂಡ. ಆದರೆ ಸಾರ್ವಜನಿಕವಾಗಿ ಅಲ್ಲಿನ ವಿಜ್ಞಾನಿಗಳು ಮಾಹಿತಿಯನ್ನು ಹಂಚಿಕೊಂಡ ಸಂದರ್ಭಗಳು ಕಡಿಮೆ. ಏಕೆಂದರೆ ಆ ಸಂಸ್ಥೆ ಕೂಡ ಒಂದು ಆಡಳಿತಾತ್ಮಕ ಚೌಕಟ್ಟಿನಲ್ಲೇ ಕೆಲಸ ಮಾಡಬೇಕಾಗುತ್ತದೆ ಎಂದು ಸಮರ್ಥಿಸಿಕೊಳ್ಳಬಹುದು.

ಪಶ್ಚಿಮ ಘಟ್ಟಗಳ ಸಂರಕ್ಷಣೆ, ಅಭಿವೃದ್ಧಿ ಕುರಿತು ಕಸ್ತೂರಿ ರಂಗನ್ ದೀರ್ಘ ವರದಿಯನ್ನೇ ನೀಡಿದ್ದಾರೆ. ಆ ಕುರಿತು ಪರ-ವಿರೋಧದ ಬಹಳಷ್ಟು ಚರ್ಚೆಗಳೂ ಆಗಿವೆ. ಆದರೆ ಸಾರ್ವಜನಿಕವಾಗಿ ಈ ಕುರಿತು ಅವರು ಎಲ್ಲೂ ಚರ್ಚಿಸಿರುವುದು ಕಾಣುವುದಿಲ್ಲ. ಇದೇಕೆ ಹೀಗೆ? ವರದಿ ಕೊಟ್ಟಿರುವೆ, ನೋಡಿಕೊಳ್ಳಿ ಎಂಬ ಇಂಗಿತ ವಿಜ್ಞಾನಿಗಳ ಧೋರಣೆಯೇ ಆಗಿದೆ. ವಿಜ್ಞಾನಿಗಳು ದಂತಗೋಪುರದಲ್ಲಿಯೇ ಇರುತ್ತಾರೆ ಎಂಬ ಅಭಿಪ್ರಾಯ ಸಾರ್ವಜನಿಕರಿಗೆ ಇದ್ದರೆ ಅದು ಸಹಜವೇ. ಎಷ್ಟೋ ವೇಳೆ ರಾಷ್ಟ್ರಮಟ್ಟದಲ್ಲಿ ನೈಸರ್ಗಿಕ ದುರಂತಗಳಾದಾಗ ವಿದ್ಯುನ್ಮಾನ ಮಾಧ್ಯಮಗಳು ತಜ್ಞರಿಗಾಗಿ ತಡಕಾಡುತ್ತಿರುತ್ತವೆ. ಉನ್ನತ ವಿಜ್ಞಾನ ಸಂಸ್ಥೆಗಳ ಬಹುತೇಕ ವಿಜ್ಞಾನಿಗಳು ಮಾಧ್ಯಮದ ಮುಂದೆ ಬರಲು ಹಿಂಜರಿಯುತ್ತಾರೆ. ಹಾಗಾದರೆ ಜನ ಸಾಮಾನ್ಯರಿಗೆ ವೈಜ್ಞಾನಿಕ ಸತ್ಯಗಳು ತಿಳಿಯುವುದಾದರೂ ಹೇಗೆ? ಇಲ್ಲೇ ವಿಜ್ಞಾನಿಗಳ ಸಾಮಾಜಿಕ ಹೊಣೆ ಎಂಬುದು ಮುಖ್ಯವಾಗುತ್ತದೆ.

ಮೂಢನಂಬಿಕೆಯ ವಿರುದ್ಧ ಸೆಣಸಬೇಕೆಂಬುದು ಸರ್ಕಾರದ ನಿಲುವೇನೋ ಹೌದು. ವೈಜ್ಞಾನಿಕ ಮನೋಭಾವ ರೂಢಿಸಿಕೊಳ್ಳುವ ಅಗತ್ಯ ಸಾರುವ ಅಂಶವನ್ನು ನಮ್ಮ ಸಂವಿಧಾನದಲ್ಲೇ ಅಧಿಕೃತವಾಗಿ ಸೇರಿಸಲಾಗಿದೆ. ಇದು ನಮ್ಮ ನಾಗರಿಕರ ಮೂಲಭೂತ ಹಕ್ಕು ಎಂದೂ ಸ್ಪಷ್ಟಪಡಿಸಲಾಗಿದೆ. ಹೀಗಿದ್ದೂ ಮಾಧ್ಯಮಗಳಲ್ಲಿ ಫಲಜ್ಯೋತಿಷಕ್ಕೆ ಏಕೆ ಕಡಿವಾಣ ಹಾಕಿಲ್ಲ ಎಂದು ಪ್ರಜ್ಞಾವಂತರು ಕೇಳುತ್ತಿದ್ದಾರೆ.

ಚುರುಮುರಿ



ಮಿಠಾಯಿ ಭಾಗ್ಯ

• ಮಣ್ಣೆರಾಜು

ಪಠ್ಯಪುಸ್ತಕದ ಕಹಿ ಅನುಭವದಿಂದ ವಿದ್ಯಾಮಂತ್ರಿ ನಾಗೇಶಣ್ಣ ಕಂಗೆಟ್ಟು ನಿದ್ರೆಗೆಟ್ಟಿದ್ದರು. ಶಾಲಾ ಮಕ್ಕಳಿಗೆ ಕಡ್ಲೆಮಿಠಾಯಿ ನೀಡುವ ಸಿಹಿ ಸುದ್ದಿ ಪ್ರಕಟಿಸಿ ಕಹಿ ಮರೆಯುವ ಪ್ರಯತ್ನ ಮಾಡಿದ್ದರು.

ಮಕ್ಕಳಿಗೆ ಹಾಲು, ಮೊಟ್ಟೆ, ಬಾಳೆಹಣ್ಣಿನ ಪೌಷ್ಟಿಕಾಂಶ ಸಾಕಾಗುವುದಿಲ್ಲ, ಗಾಂಧಿ ಮೆಚ್ಚಿದ ಬಡವರ ಬಾದಾಮಿ ಕಡ್ಲೆಕಾಯಿಯ ಮಿಠಾಯಿ ಕೊಟ್ಟರೆ ಮಕ್ಕಳು ಬಾಯಿ ಚಪ್ಪರಿಸಿಕೊಂಡು ಶಾಲೆಗೆ ಬರುತ್ತಾರೆ. ಸರ್ಕಾರಿ ಶಾಲೆಯ ಮಕ್ಕಳ ಕೊರತೆ, ಅವರ ಅಪೌಷ್ಟಿಕತೆ ಎರಡೂ ನೀಗುತ್ತವೆ ಎಂಬುದು ಸಚಿವರ ಆಶಯ.

ಮಿಠಾಯಿ ಜೊತೆಗೆ ಚಾಕೊಲೇಟ್, ಐಸ್‌ಕ್ರೀಂ ಬೇಕು ಎಂದು ಮಕ್ಕಳು ಆಸೆಪಡಬಹುದು. ಆ ಆಸೆಯನ್ನೂ ಈಡೇರಿಸಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಆಕರ್ಷಿಸಬೇಕು ಎನ್ನುವ ಸದಾಶಯವೂ ಸಚಿವರಿಗಿರಬಹುದು.

'ಮಂತ್ರಿಗೆ ಜಯವಾಗಲಿ...' ಎಂದು ಕೂಗುತ್ತಾ ರೈತರು ಬಂದು ವಿದ್ಯಾಮಂತ್ರಿಗೆ ಹಾರ ಹಾಕಿದರು.

'ನಾವು ಕಡ್ಲೆಕಾಯಿ ಬೆಳೆಗಾರರು, ಸರ್ಕಾರ ಕಡ್ಲೆಕಾಯಿ ಖರೀದಿಸಿ ಶಾಲಾ ಮಕ್ಕಳಿಗೆ ಕಡ್ಲೆಮಿಠಾಯಿ ಕೊಡುವ ಯೋಜನೆ ಸ್ವಾಗತಾರ್ಹ. ಈ ಯೋಜನೆ ಜಾರಿಗೆ ತಂದು ಬೆಳೆಗಾರರಿಗೆ ಬೆಂಬಲ ನೀಡಿ' ಎಂದು ಮನವಿ ಮಾಡಿ, ಅಭಿನಂದಿಸಿ ಹೋದರು.

ಸ್ವಲ್ಪ ಹೊತ್ತಿಗೆ, 'ವಿದ್ಯಾಮಂತ್ರಿಗೆ ಧಿಕ್ಕಾರ...' ಎಂದು ಕೂಗುತ್ತಾ ಮತ್ತೊಂದು ರೈತರ ಗುಂಪು ಬಂತು. 'ನಾವು ಕೊಬ್ಬರಿ ಬೆಳೆಗಾರರು, ನೀವು ರೈತರ ವಿಚಾರದಲ್ಲಿ ತಾರತಮ್ಯ ಮಾಡ್ತಿದ್ದೀರಿ, ಸರ್ಕಾರ ಕೊಬ್ಬರಿಯನ್ನೂ ಖರೀದಿಸಿ ಮಕ್ಕಳಿಗೆ ಕಡ್ಲೆಕಾಯಿ ಮಿಠಾಯಿ ಜೊತೆ ಕೊಬ್ಬರಿ ಮಿಠಾಯಿಯನ್ನೂ ಕೊಟ್ಟು ನಮಗೆ ಬೆಂಬಲ ನೀಡಬೇಕು, ಇಲ್ಲವಾದರೆ ಉಗ್ರ ಹೋರಾಟ ಮಾಡುತ್ತೇವೆ...' ಎಂದು ಎಚ್ಚರಿಸಿ ಹೋದರು.

ವಿದ್ಯಾಮಂತ್ರಿ ನಾಗೇಶಣ್ಣ ಗಾಬರಿಯಾಗಿ ನಿದ್ರೆಯಿಂದ ಎಚ್ಚರಗೊಂಡು ಬೆವರು ಒರೆಸಿಕೊಂಡರು.

ರೈತರು ಕನಸಿನಲ್ಲಿ ಬಂದರೆ ಶ್ರೇಯಸ್ಸು ಆಗುತ್ತದೆ ಅನ್ನೋ ದೇವೇಗೌಡರ ಮಾತು ನೆನಪಾಗಿ ಸಚಿವರು ಸಮಾಧಾನಗೊಂಡರು.

ಚರ್ಚೆ

ಅವಾಂತರ ಅಂತ್ಯ ಕಾಣಲಿ

ಬರಹ ಹಿಂದಕ್ಕೆ ಪಡೆಯುತ್ತಿರುವ ನಡೆ ನಿರೂಪಿಸುತ್ತಿರುವುದು ಏನನ್ನು?

ಕರ್ನಾಟಕ ಸರ್ಕಾರವು ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ರಚಿಸಿದ ಸಮಿತಿಯು ಬಹಳಷ್ಟು ಚಿಂತನ-ಮಂಥನದ ಬಳಿಕ ಸಿದ್ಧಪಡಿಸಿದ ಪುಸ್ತಕಗಳನ್ನು ಈಗ ವಿವಾದಿತಗೊಳಿಸಲಾಗಿದೆ. ಈ ಹಿಂದಿನ ಪರಿಷ್ಕರಣಾ ಸಮಿತಿಯಿಂದ ಆಗಿರುವ ಲೋಪದೋಷಗಳನ್ನು ಸರಿಪಡಿಸಲು ಪ್ರಸ್ತುತ ಸಮಿತಿ ಪರಿಶ್ರಮಿಸಿದೆ. ವಿದ್ಯಾರ್ಥಿಗಳ ವಯೋಮಾನ, ಕಲಿಕಾ ಸಾಮರ್ಥ್ಯ ಮತ್ತು ಕಲಿಕೆಯ ಉದ್ದೇಶಿತ ಗುರಿಯನ್ನು ಕಣ್ಮುಂದೆ ಇರಿಸಿಕೊಂಡು ಸೂಕ್ತ ತಿದ್ದುಪಡಿಗಳನ್ನು ಮಾಡಿದೆ.

ಹೀಗಿದ್ದರೂ ಕನ್ನಡದ ಕೆಲವು ಲೇಖಕರು, ಸಾಹಿತಿಗಳು ಪಠ್ಯದಲ್ಲಿ ಕೆಲವು ಹಿರಿಯ ಲೇಖಕರಿಗೆ ಸರಿಯಾದ ಪ್ರಾತಿನಿಧ್ಯ ದೊರಕಿಲ್ಲ, ಕೆಲವರನ್ನು ರಾಜಕೀಯ, ಸೈದ್ಧಾಂತಿಕ ಕಾರಣಗಳಿಗಾಗಿ ಕೈಬಿಡಲಾಗಿದೆ ಎಂದು ಆರೋಪಿಸಿ, ಈಗಾಗಲೇ ಪ್ರಕಟವಾಗಿರುವ ಪಠ್ಯದಲ್ಲಿ ಸೇರ್ಪಡೆಯಾಗಿರುವ ತಮ್ಮ ಲೇಖನ, ಕವಿತೆಗಳನ್ನು ಹಿಂಪಡೆಯುವ, ಅನುಮತಿ ನಿರಾಕರಿಸುವ ಅಭಿಯಾನವೊಂದು ಆರಂಭವಾಗಿದೆ. ಆದರೆ ಈ ಪಠ್ಯ ಹಿಂಪಡೆತ ನಡೆಯು ಅವರುಗಳೇ ಮಾಡುತ್ತಿರುವ ಆರೋಪದ ವಿರುದ್ಧವಾಗಿದೆ.

ಪ್ರಗತಿಪರರ, ಸರ್ಕಾರದ ಜೊತೆಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇರುವ ವ್ಯಕ್ತಿಗಳ ಬರಹವನ್ನು ಕೈಬಿಡಲಾಗಿದೆ ಎನ್ನುವುದು ಆರೋಪ. ಆದರೆ ಈಗ ಪ್ರಗತಿಪರರೆಂದು ಕರೆದುಕೊಳ್ಳುತ್ತಿರುವ ಅನೇಕ ಬರಹಗಾರರು ಪಠ್ಯ ಹಿಂಪಡೆಯುವ ಆಂದೋಲನದಲ್ಲಿ ಭಾಗಿಯಾಗಿದ್ದಾರೆ. ಅಂದರೆ ಪಠ್ಯಪುಸ್ತಕಗಳಲ್ಲಿ ಈ ಎಲ್ಲಾ ಪ್ರಗತಿಪರರ ಬರಹಗಳಿದ್ದವು ಎಂದಾಯಿತು. ಹೀಗಾಗಿ ಹೆಚ್ಚು ಹೆಚ್ಚು ಜನ ಕವಿಗಳು, ಸಾಹಿತಿಗಳು ತಮ್ಮ ಬರಹ ಪಠ್ಯಪುಸ್ತಕದಲ್ಲಿ ಇರುವುದು ಬೇಡ ಎಂದು ಹಿಂಪಡೆದಷ್ಟೂ ಪಠ್ಯ ಪರಿಷ್ಕರಣೆಯ ಪ್ರಕ್ರಿಯೆ ನಿಷ್ಪಕ್ಷಪಾತವಾಗಿ, ಪೂರ್ವಗ್ರಹರಹಿತವಾಗಿ, ಜಾತಿ, ಪಕ್ಷ, ಸಿದ್ಧಾಂತಗಳ ಗೋಜಲುಗಳಿಲ್ಲದೆ ಗುಣಾತ್ಮಕವಾಗಿಯೇ ನಡೆದಿದೆ ಎನ್ನುವುದು ಸಾಬೀತಾಗುತ್ತಿದೆ. ಯಾಕೆಂದರೆ ಈ ಪರಿಷ್ಕರಣೆಯು ಪೂರ್ವಗ್ರಹಪೀಡಿತವಾಗಿ, ನಿರ್ದಿಷ್ಟ ಸಿದ್ಧಾಂತ, ಜಾತಿಗಳ ವಿರುದ್ಧವಾಗಿ ನಡೆದಿದ್ದರೆ ಇಷ್ಟೊಂದು ಜನರಿಗೆ ತಮ್ಮ ಬರಹಗಳನ್ನು ಹಿಂಪಡೆಯುವ ಅವಕಾಶವೇ ಇರುತ್ತಿರಲಿಲ್ಲ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಪಠ್ಯ ಪರಿಷ್ಕರಣೆ ನಡೆದಿರುವುದರಿಂದಲೇ ಅವರೆಲ್ಲರ ಬರಹಗಳು ಪಠ್ಯದಲ್ಲಿ ಉಳಿದಿರುವುದು.

ಸರ್ಕಾರದ ಟ್ರಸ್ಟ್‌ಗಳ ಅಧ್ಯಕ್ಷರು, ಸದಸ್ಯರನ್ನಾಗಿ ಭಿನ್ನ ಸೈದ್ಧಾಂತಿಕ ಹಿನ್ನೆಲೆಯ ವ್ಯಕ್ತಿಗಳನ್ನು ಉಳಿಸಿಕೊಂಡಿದ್ದಾರೆ ಎನ್ನುವುದಕ್ಕೆ ಅವರುಗಳ ರಾಜೀನಾಮೆಯೇ ಸಾಕ್ಷಿ. ಸಾಧ್ಯವಾದರೆ ಅಸಹನೆ ಇರುವ ಇನ್ನಷ್ಟು ಜನ ತಮ್ಮ ಬರಹಗಳನ್ನು ಹಿಂಪಡೆಯಲಿ, ಸರ್ಕಾರದಿಂದ ಪಡೆದ ಹುದ್ದೆಗಳಿಗೆ ರಾಜೀನಾಮೆ ನೀಡಲಿ. ಈ ಮೂಲಕ ಈ ಸರ್ಕಾರ ಹಾಗೂ ಸರ್ಕಾರದಿಂದ ನೇಮಕವಾಗಿರುವ ಪರಿಷ್ಕರಣಾ ಸಮಿತಿಯು ನಡೆಸಿದ ಪಠ್ಯ ಪರಿಷ್ಕರಣೆ ಪ್ರಕ್ರಿಯೆಯ ನಿಷ್ಪಕ್ಷಪಾತಿತನವನ್ನು ಜಗತ್ತಿಗೆ ಸಾರಿ ಹೇಳಲಿ.

ಡಾ. ರೋಹಿಣಾಕ್ಷ ಶಿರ್ಲಾಲು, ಸದಸ್ಯ, ಪಠ್ಯ ಪರಿಷ್ಕರಣೆ ಸಮಿತಿ, ಕಲಬುರಗಿ

ನಡೆಯಲಿ ಚಿಂತನೆ

ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದ ಗೊಂದಲಗಳು ದಿನೇ ದಿನೇ ಬೇರೆ ಸ್ವರೂಪಗಳನ್ನು ಪಡೆದುಕೊಳ್ಳುತ್ತಿವೆ. ಬಸವಣ್ಣನವರಿಗೂ ಅವಮಾನ ಮಾಡಲಾಗಿದೆ ಎಂದು ಕೆಲ ಸ್ವಾಮೀಜಿಗಳು ಧ್ವನಿಯೆತ್ತಿದ್ದಾರೆ. ಪಠ್ಯಪುಸ್ತಕದ ಪರಿಷ್ಕರಣೆಯಂತಹ ಮಹತ್ಕಾರ್ಯಕ್ಕೆ ಪೂರ್ವಗ್ರಹ-ಪೀಡಿತರನ್ನು ನೇಮಿಸಿ ಸರ್ಕಾರ ತಪ್ಪು ಮಾಡಿತು. ಹಿಂದೆ ನಾಡಗೀತೆಗೆ ಅಪಪ್ರಚಾರ ಮಾಡಿ ಬರೆದ ಸಾಲುಗಳನ್ನು ಈಗ ನೆನಪಿಸಿ ರಾಜಕೀಯಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬ ರೋಹಿತ್ ಚಕ್ರತೀರ್ಥ ಅವರ ಸಮರ್ಥನೆಗೆ ಕಿಮ್ಮತ್ತು ಇಲ್ಲ. ತಪ್ಪು ಯಾವಾಗ ಮಾಡಿದ್ದರೂ ತಪ್ಪೇ. ಪಠ್ಯಪುಸ್ತಕದಲ್ಲಿ ನನ್ನದೂ ಒಂದು ಕಥೆ, ಲೇಖನ, ಕವಿತೆ, ಪಠ್ಯ ಇರಲೆಂದು ಬಯಸುತ್ತಿದ್ದ ವ್ಯಕ್ತಿಗಳು ಇಂದು ಬೇಡ ಎಂದು ಮನವಿ ಮಾಡುತ್ತಿದ್ದಾರೆ. ಸಾಹಿತಿಗಳು ಕೆಲವರು ಮಹತ್ವದ ಸ್ಥಾನಗಳಿಗೆ ರಾಜೀನಾಮೆ ನೀಡಿ ತಮ್ಮ ಆಕ್ರೋಶವನ್ನು ಹೊರಹಾಕುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಗಂಭೀರವಾದ ಚಿಂತನೆ ನಡೆಸಬೇಕಿದೆ.

ಮಲ್ಲತ್ತಹಳ್ಳಿ ಡಾ. ಎಚ್.ತುಕಾರಾಂ, ಬೆಂಗಳೂರು



ವಾಸ್ತವ ಅರಿಯಿರಿ

ಪರಿಷ್ಕೃತ ಪಠ್ಯಪುಸ್ತಕವು ಚಕ್ರತೀರ್ಥದ ಮಡುವಿನ ಸುಳಿಯಂತೆ ದಿನಕ್ಕೊಂದರಂತೆ ತಿರುವನ್ನು ಪಡೆಯುತ್ತಿರುವುದರಿಂದ ಶಿಕ್ಷಣದ ಪಾವಿತ್ರ್ಯಕ್ಕೆ ಕುಂದುಂಟಾಗುತ್ತಿದೆ. ಪಕ್ಷರಾಜಕಾರಣ, ಸಿದ್ಧಾಂತಗಳ ಮೇಲಾಟ, ಸಾಹಿತಿಗಳ ಪ್ರತಿಷ್ಠೆ, ಸ್ವಾಮೀಜಿಗಳ ಆಗ್ರಹ, ನಿರ್ಧಾರ ತೆಗೆದುಕೊಳ್ಳುವಲ್ಲಿ ಸರ್ಕಾರ ತೋರಿದ ವಿಳಂಬ ನೀತಿಯು ವಿಷಯವನ್ನು ಇನ್ನಷ್ಟು ಗೋಜಲುಗೊಳಿಸುತ್ತಿದೆ. ಕುವೆಂಪು ಅವರನ್ನು ಕುರಿತ ವಿವಾದ ಮುಗಿಯುತ್ತಿದ್ದಂತೆ ಇಂದು ಬಸವೇಶ್ವರ ನಾಳೆ ಮತ್ತೆ ಯಾರೋ? ಹೀಗೆ, ಪರಿಸ್ಥಿತಿ ಗೊಂದಲವನ್ನು ಸೃಷ್ಟಿಸುತ್ತಿದೆ.

ಇತ್ತ ವಿಚಾರವಾದಿ ಲೇಖಕರು ತಮ್ಮ ಪಾಠಗಳನ್ನು ಪಠ್ಯಪುಸ್ತಕಗಳಿಂದ ಹಿಂಪಡೆಯಲು ತೆಗೆದುಕೊಂಡ ನಿರ್ಧಾರ ಈ ಪರಿಸ್ಥಿತಿಯಲ್ಲಿ ಅದರ ಔಚಿತ್ಯವನ್ನು ಪ್ರಶ್ನಿಸುವಂತಿದೆ. ಈಗಿರುವ ಪಾಠಗಳನ್ನು ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದ ಸಮಿತಿ ಸಿದ್ಧಪಡಿಸಿದ್ದರೂ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಸಿದ್ಧಪಡಿಸಿದ್ದರೂ ಓದುವವರು ಮಾತ್ರ ಅದೇ ವಿದ್ಯಾರ್ಥಿಗಳು. ಪರಿಷ್ಕೃತ ಪಠ್ಯಪುಸ್ತಕದ ಮುದ್ರಣ ಕಾರ್ಯ ಪೂರ್ಣಗೊಂಡು ಈಗಾಗಲೇ ಶಾಲೆಗಳಿಗೆ ಕಳುಹಿಸಿಕೊಡಲಾಗಿದೆ ಎಂದು ಸರ್ಕಾರ ಹೇಳಿದೆ. ಹಿಂಪಡೆಯಲು ಬಯಸುತ್ತಿರುವವರ ಬರಹಗಳನ್ನು ಈ ಹಂತದಲ್ಲಿ ಪಠ್ಯದಿಂದ ತೆಗೆದುಹಾಕಲು ಸಾಧ್ಯವಾಗದು ಎಂಬುದು ವಾಸ್ತವ. ಅವಾಂತರ ಅಂತ್ಯಗೊಳ್ಳಲಿ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ವಾಚಕರ ವಾಣಿ

ಅವಕಾಶಗಳಿಗೆ ತೊಡಕಾಗದಿರಲಿ ಭಾಷೆ

2021ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕರ್ನಾಟಕದ 26 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ವರದಿಯಾಗಿದೆ. ಯುಪಿಎಸ್‌ಸಿ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಯಲ್ಲಿ ಬರೆಯಲು ಅನುವು ಮಾಡಿಕೊಟ್ಟರೆ ಕನ್ನಡ ಒಳಗೊಂಡಂತೆ ಪ್ರಾದೇಶಿಕ ಭಾಷೆಗಳಲ್ಲಿ ಪ್ರೌಢಿಮೆ ಇರುವ ಇನ್ನೂ ಹೆಚ್ಚಿನ ಪ್ರತಿಭೆಗಳು ತೇರ್ಗಡೆ ಹೊಂದಲು ಅವಕಾಶವಾಗುತ್ತದೆ.

ಈ ಪರೀಕ್ಷೆಯು ಕ್ಲಿಷ್ಟವಾಗಿ ಇರುತ್ತದೆ ಎಂಬ ಮಾತಿದೆ. ಜೊತೆಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರ ಬರೆಯಲು ಅವಕಾಶ ಇರುತ್ತದೆ. ಇದರಿಂದಾಗಿ ಬಹುಸಂಖ್ಯಾತರಿಗೆ ಪರೀಕ್ಷೆಯು ಕಬ್ಬಿಣದ ಕಡಲೆಯಂತೆ ಆಗುವ ಸಾಧ್ಯತೆ ಇದೆ. ಆದ್ದರಿಂದ ಈ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಯಲ್ಲೂ ಬರೆಯಲು ಅವಕಾಶ ನೀಡುವಂತೆ ಮಾಡುವಲ್ಲಿ ದಕ್ಷಿಣದ ರಾಜ್ಯಗಳ ಎಲ್ಲ ಸಂಸದರೂ ಸರ್ವ ಪ್ರಯತ್ನ ಮಾಡಬೇಕು. ಅವಕಾಶಗಳಿಗೆ ಭಾಷೆಯಿಂದ ತೊಡಕಾಗಬಾರದು.

ವಿನಯ್ ಕುಮಾರ್ ಚಿಂಚೋಳಿ, ಬಲಶೆಟ್ಟಿಹಾಳ, ಹುಣಸಗಿ

ಜನೋಪಯೋಗಿ ವೈದ್ಯರ ಆರೋಗ್ಯ ಸುಧಾರಿಸಲಿ

ಮಂಡ್ಯ ಜಿಲ್ಲೆಯಾದ್ಯಂತ 5 ರೂಪಾಯಿ ಡಾಕ್ಟರ್ ಎಂದೇ ಖ್ಯಾತರಾಗಿರುವ ಡಾ. ಶಂಕರೇಗೌಡ ಅವರು ಇತ್ತೀಚೆಗೆ ಹೃದಯಾಘಾತಕ್ಕೆ ಒಳಗಾಗಿ ಚಿಕಿತ್ಸೆಯ ನಂತರ ಚೇತರಿಸಿಕೊಂಡಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ, ಅವರಿಗೆ ಸಂಪೂರ್ಣ ವಿಶ್ರಾಂತಿಯ ಅಗತ್ಯ ಇರುವುದನ್ನು ವೈದ್ಯರು ಒತ್ತಿ ಹೇಳಿರುವುದಾಗಿ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಶಂಕರೇಗೌಡರು ಸಾಂಕೇತಿಕವಾಗಿ ರೋಗಿಗಳಿಂದ 5 ರೂಪಾಯಿ ಪಡೆದು ಚಿಕಿತ್ಸೆ ನೀಡುತ್ತಿದ್ದರು ಹಾಗೂ ಅವರ ಕೈಗುಣ ತುಂಬಾ ಒಳ್ಳೆಯದು ಎಂಬ ಮಾತು ಜನಜನಿತವಾಗಿದೆ. ಹೀಗಾಗಿ ಅವರ ಬಳಿ ಚಿಕಿತ್ಸೆ ಪಡೆಯಲು ಹಲವಾರು ರೋಗಿಗಳು ದೂರದೂರದ ಊರುಗಳಿಂದ ಬರುತ್ತಿದ್ದರು. ಅನೇಕ ಧನದಾಹಿ ವೈದ್ಯರ ನಡುವೆ ಶಂಕರೇಗೌಡರಂತಹ ನಿಸ್ವಾರ್ಥ ಹಾಗೂ ಜನೋಪಯೋಗಿ ವೈದ್ಯರು ಇರುವುದು ಸುದೈವವೇ ಸರಿ. ಸ್ವತಃ ಡಾಕ್ಟರ್ ಆದರೂ ಸದ್ಯದ ಪರಿಸ್ಥಿತಿಯಲ್ಲಿ ಅವರೊಬ್ಬ ರೋಗಿ. ತಮ್ಮನ್ನು ನಂಬಿ ಬರುವ ರೋಗಿಗಳನ್ನು ಹುರಿದು ಮುಕ್ಕದೆ, ಕರ್ತವ್ಯವನ್ನೇ ದೇವರೆಂದು ಭಾವಿಸಿ ಉತ್ತಮ ಚಿಕಿತ್ಸೆ ನೀಡುವ ಈ ವೈದ್ಯ ಮಹಾಶಯರನ್ನು ಪಡೆದಿರುವ ನಾವು ನಿಜಕ್ಕೂ ಧನ್ಯ. ಇವರ ಆರೋಗ್ಯ ಶೀಘ್ರ ಸುಧಾರಿಸಲಿ ಎಂದು ಹಾರೈಸೋಣ.

ಡಾ. ಕೆ.ವಿ.ವಾಸು, ಮೈಸೂರು

ಪ್ರಾಯೋಗಿಕ ಜ್ಞಾನ ಬೆಳೆಸೋಣ

'ಕಾಲೇಜುಗಳಲ್ಲಿ ಕೋಚಿಂಗ್ ಹೊರೆ ಮಾನವೀಯಗೊಳಿಸಲು ಸಕಾಲ' ಎಂಬ ಸಂಪಾದಕೀಯ (ಪ್ರ.ವಾ., ಮೇ 30) ಸೂಕ್ತವಾಗಿದೆ. ವಿದ್ಯಾರ್ಥಿಗಳು ಪಿಯು ಪಠ್ಯಕ್ರಮವನ್ನು ಸರಿಯಾಗಿ ಅರ್ಥೈಸಿಕೊಂಡು ಅಧ್ಯಯನ ಮಾಡಿದಾಗಲೂ ಅವರಿಗೆ ಅರ್ಥವಾಗುತ್ತಿಲ್ಲ ಎಂದಾದರೆ ಅವರು ಬೇರೆಯವರ ಸಹಾಯವನ್ನು ಪಡೆಯುವುದು ಸಾಮಾನ್ಯ. ಹಾಗಾಗಿ, ಜೆಇಇ ಮತ್ತು ನೀಟ್ ಪರೀಕ್ಷೆಯ ಅನ್ವಯಿಕ ಮಾದರಿಯ ಕ್ರಿಯಾಶೀಲ ಪಠ್ಯಕ್ರಮವನ್ನು ರಚಿಸಿ, ಉಪನ್ಯಾಸಕರಾದ ನಾವು ವಿದ್ಯಾರ್ಥಿಗಳಿಗೆ ಕೇವಲ ಉಪನ್ಯಾಸ ಮಾಡುವ ಬದಲಾಗಿ, ಸ್ವತಃ ಕಲಿಕೆಯಲ್ಲಿ ತೊಡಗಿ ಅನ್ವಯಿಕ ಜ್ಞಾನವನ್ನು ಮಕ್ಕಳಲ್ಲಿ ಬೆಳೆಸಲು ಸಾಧ್ಯವಿದೆ.

ಶಿಕ್ಷಣ ಸಂಸ್ಥೆಗಳು ಸರ್ಕಾರಿಯೇ ಇರಲಿ, ಖಾಸಗಿಯೇ ಇರಲಿ ಎಲ್ಲರ ಉದ್ದೇಶ ಮಕ್ಕಳನ್ನು ಜೀವನದಲ್ಲಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದೇ ಆಗಿದೆ. ಹಾಗಾಗಿ, ಶಿಕ್ಷಣ ಇಲಾಖೆಯು ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಮಕ್ಕಳು, ಪಾಲಕರು ಮತ್ತು ಶಿಕ್ಷಣ ಕೇಂದ್ರಗಳಿಗೆ ಹೊರೆಯಾಗದಂತಹ, ಅವರ ಜೀವನಕ್ಕೆ ಉಪಯೋಗ ಆಗುವಂತಹ ಪಠ್ಯಕ್ರಮವನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ರೂಪಿಸುವಂತಾಗಲಿ.

ನಿಂಗಪ್ಪ ಮಾಳಶೆಟ್ಟಿ, ಕಾಜಿಬೀಳಗಿ

ಸುರಕ್ಷತೆ: ಬೇಕು ರೈತರಿಗೆ ತರಬೇತಿ

ಕೋಲಾರ ಜಿಲ್ಲೆಯ ಗ್ರಾಮವೊಂದರ ಜಮೀನಿನಲ್ಲಿ ಇತ್ತೀಚೆಗಷ್ಟೇ ರೈತ ಮಹಿಳೆಯೊಬ್ಬರು ಆಕಸ್ಮಿಕವಾಗಿ ಟ್ರ್ಯಾಕ್ಟರ್- ರೋಟರ್‌ಗೆ ಸಿಲುಕಿ ಮೃತಪಟ್ಟ ಘಟನೆಯ (ಪ್ರ.ವಾ., ಮೇ 30) ಬೆನ್ನಲ್ಲೇ ಚಿಕ್ಕಬಳ್ಳಾಪುರ ತಾಲ್ಲೂಕಿನ ಕಡಬೂರು ಗ್ರಾಮದಲ್ಲಿ ಜಮೀನು ಉಳುಮೆ ಮಾಡುವಾಗ ಆಯತಪ್ಪಿ ಟ್ರ್ಯಾಕ್ಟರ್- ರೋಟರ್‌ಗೆ ಸಿಲುಕಿದ ರೈತನ ದೇಹ ಛಿದ್ರವಾದ ಬಗ್ಗೆ ವರದಿಯಾಗಿದೆ (ಪ್ರ.ವಾ., ಜೂನ್ 1). ಇನ್ನು ಕೃಷಿ ಹೊಂಡಕ್ಕೆ ಬಿದ್ದು ಜೀವ ಕಳೆದುಕೊಂಡ ಅನೇಕ ಘಟನೆಗಳು ಆಗಿಂದಾಗ್ಗೆ ವರದಿಯಾಗುತ್ತಲೇ ಇರುತ್ತವೆ. ಇವಲ್ಲದೆ ರೈತರು ಸ್ವರಕ್ಷಣಾ ಸಾಧನಗಳನ್ನು ಉಪಯೋಗಿಸದೆ ಕ್ರಿಮಿ, ಕೀಟ ಹಾಗೂ ಕಳೆನಾಶಕಗಳಂಥ ಅಪಾಯಕಾರಿ ರಾಸಾಯನಿಕಗಳನ್ನು ಬೆಳೆಗಳಿಗೆ ಸಿಂಪಡಿಸುವಾಗ ರಾಸಾಯನಿಕಗಳು ಕೃಷಿಕನ ದೇಹವನ್ನು ಸೇರಿ ಆರೋಗ್ಯ ಸಮಸ್ಯೆಗಳೂ ಹೆಚ್ಚಾಗುತ್ತಿವೆ. ಇಂಥ ಅನೇಕ ಘಟನೆಗಳು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ಸುರಕ್ಷತೆಗೆ ನಾವು ಒತ್ತು ನೀಡುತ್ತಿಲ್ಲ ಎಂಬುದಕ್ಕೆ ನಿದರ್ಶನಗಳು.

ಆಧುನಿಕ ಕೃಷಿ ಚಟುವಟಿಕೆಯಲ್ಲಿ ಯಂತ್ರಗಳು ಹಾಗೂ ರಾಸಾಯನಿಕಗಳ ಬಳಕೆ ಅವಶ್ಯವಾದರೂ ಅವುಗಳನ್ನು ಬಳಸುವ ವೇಳೆ ವಹಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ರೈತರಿಗೆ ಅಗತ್ಯ ಶಿಕ್ಷಣ ನೀಡುವ ವ್ಯವಸ್ಥೆ ಬೇಕಲ್ಲವೇ? ಆದ್ದರಿಂದ, ಸುರಕ್ಷಾ ತಜ್ಞರು ಮತ್ತು ಕೃಷಿ ವಿಜ್ಞಾನಿಗಳನ್ನು ಒಳಗೊಂಡ 'ಇಂಟಿಗ್ರೇಟೆಡ್ ಅಪ್ರೋಚ್' ಮಾದರಿಯನ್ನು ಸಿದ್ಧಪಡಿಸಿ ಪ್ರತೀ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರೈತರಿಗೆ ಕೃಷಿ ಹಾಗೂ ಕೃಷಿ ಸಂಬಂಧಿತ ಸುರಕ್ಷಾ ತರಬೇತಿ ಕಮ್ಮಟಗಳನ್ನು ಏರ್ಪಡಿಸಬೇಕು. ಆಗ ಸುರಕ್ಷತೆ ಬಗ್ಗೆ ಹೆಚ್ಚಿನ ಅರಿವು ಮೂಡಿಸಿದಂತೆ ಆಗುತ್ತದೆ ಹಾಗೂ ಇದರಿಂದ ಕೃಷಿ ಚಟುವಟಿಕೆಯಲ್ಲಿ ಜೀವಹಾನಿಯಂಥ ಅಪಘಾತಗಳು ಮತ್ತು ರಾಸಾಯನಿಕಗಳ ಅಸಮರ್ಪಕ ಬಳಕೆಯ ವಿಧಾನದಿಂದ ರೈತರು ದೀರ್ಘಕಾಲದ ಅನಾರೋಗ್ಯ ಅಥವಾ ಗಂಭೀರ ರೋಗಗಳಿಗೆ ತುತ್ತಾಗುವಂಥ ಅಪಾಯಗಳನ್ನು ತಡೆಯಬಹುದು. ಸರ್ಕಾರ ಈ ದಿಸೆಯಲ್ಲಿ ಗಂಭೀರವಾಗಿ ಯೋಚಿಸಬೇಕಿರುವ ಅಗತ್ಯವನ್ನು ಈ ಅವಘಡಗಳು ಸಾರಿ ಹೇಳುತ್ತಿವೆ.


ಡಾ. ಜಿ.ಬೈರೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಡೀಸೆಲ್ ಬಳಕೆ ಕುಸಿತದ ಹಲವು ಮುಖಗಳು



ಡೀಸೆಲ್ ಬಳಕೆ ಕುಸಿತ (ವರ್ಷವಾರು)



ಪ್ರಜಾವಾಣಿ ವಾರ್ತೆ

ದೇಶದಲ್ಲಿ ಡೀಸೆಲ್ ಬಳಕೆ ಕಡಿಮೆಯಾಗಿದೆ. 2014–15ನೇ ಸಾಲಿನಿಂದ ದೇಶದಲ್ಲಿ ಡೀಸೆಲ್ ಬಳಕೆ ಸತತವಾಗಿ ಏರಿಕೆಯಾಗುತ್ತಿತ್ತು. 2019-20ರಲ್ಲಿ ಡೀಸೆಲ್ ಬಳಕೆ ಗರಿಷ್ಠ ಮಟ್ಟಕ್ಕೆ ತಲುಪಿತ್ತು. ಆದರೆ 2020-21ರಲ್ಲಿ ಕೋವಿಡ್‌ನ ಕಾರಣದಿಂದ ಎಲ್ಲಾ ಸ್ವರೂಪದ ಇಂಧನ ಬಳಕೆ ಕುಸಿದಿತ್ತು. ಆದರೆ ಆರ್ಥಿಕತೆಯ ಚೇತರಿಕೆಯ ಮಧ್ಯೆಯೂ 2021–22ನೇ ಸಾಲಿನಲ್ಲಿ ಡೀಸೆಲ್ ಬಳಕೆ ನಿರೀಕ್ಷಿತ ಮಟ್ಟವನ್ನು ತಲುಪಿಲ್ಲ. ಈ ಆರ್ಥಿಕ ವರ್ಷದಲ್ಲಿ ಸರ್ಕಾರದ ನಿರೀಕ್ಷೆಯನ್ನೂ ಮೀರಿ, ತೆರಿಗೆ ಸಂಗ್ರಹವಾಗಿದೆ. ಆರ್ಥಿಕ ಚಟುವಟಿಕೆಗಳಿಗೆ ಚಾಲನೆ ದೊರೆತಿದೆ. ಆದರೆ ಈ ಸಾಲಿನಲ್ಲಿನ ಡೀಸೆಲ್ ಬಳಕೆಯ ಪ್ರಮಾಣವು, 2016–17ರ ಮಟ್ಟಕ್ಕೆ ಕುಸಿದಿದೆ.


ದೇಶದಲ್ಲಿ ದಿನನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಮಂಗಳವಾರವಷ್ಟೇ ಬಿಡುಗಡೆಯಾಗಿರುವ ರಾಷ್ಟ್ರೀಯ ಸಾಂಖ್ಯಿಕ ಸಂಸ್ಥೆಯ ವಾರ್ಷಿಕ ವರದಿಯಲ್ಲಿ, ಒಟ್ಟು ರಾಷ್ಟ್ರೀಯ ತಲಾ ವೆಚ್ಚವು (ಗ್ರಾಹಕ ಬಳಕೆಯ ಅಂತಿಮ ವೆಚ್ಚ) ₹1.02 ಲಕ್ಷಕ್ಕೆ ಏರಿಕೆಯಾಗಿದೆ ಎಂದು ಹೇಳಲಾಗಿದೆ. 2020-21ನೇ ಸಾಲಿಗೆ ಹೋಲಿಸಿದರೆ (₹88,775), ಒಟ್ಟು ರಾಷ್ಟ್ರೀಯ ತಲಾ ವೆಚ್ಚದಲ್ಲಿ ಶೇ 16.5ರಷ್ಟು ಏರಿಕೆಯಾಗಿದೆ. ಇದರಿಂದ ದೇಶದ ಜನರ ಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಪರಿಣಾಮವಾಗಿ ದೇಶದ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿದಿದೆ. ಇವೆಲ್ಲವುಗಳ ಪರಿಣಾಮವಾಗಿ ತಯಾರಿಕಾ ವಲಯ ಮತ್ತು ಸರಕು ಸಾಗಣೆ ವಲಯದಲ್ಲಿ ಬೇಡಿಕೆ ಕುಸಿದಿದೆ. ಸರಕು ಸಾಗಣೆಯಲ್ಲಿ ಟ್ರಕ್‌ಗಳ ಬಳಕೆ ಕಡಿಮೆಯಾಗಿರುವ ಕಾರಣ, ಒಟ್ಟಾರೆಯಾಗಿ ದೇಶದಲ್ಲಿ ಡೀಸೆಲ್ ಬಳಕೆ ಕುಸಿದಿದೆ.

ದೇಶದಲ್ಲಿ ದೈನಂದಿನ ವಸ್ತುಗಳ ಬೆಲೆ ಏರಿಕೆಗೆ ಇಂಧನದ ಬೆಲೆ ಏರಿಕೆ ನೇರವಾಗಿ ಕಾರಣವಾಗಿದೆ. ಡೀಸೆಲ್ ಬೆಲೆಯಲ್ಲಿನ ಏರಿಕೆಯಿಂದಾಗಿ, ಸರಕು ಸಾಗಣೆ ವೆಚ್ಚ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದರ ಪರಿಣಾಮವಾಗಿ ಎಲ್ಲಾ ರೀತಿಯ ಸರಕುಗಳ ಬೆಲೆ ಏರಿಕೆಯಾಗಿದೆ. ಚಿಲ್ಲರೆ ಹಣದುಬ್ಬರವು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದರ ಪರಿಣಾಮವಾಗಿ ಎಲ್ಲಾ ಸರಕು ಮತ್ತು ಸೇವೆಗಳ ಮೇಲೆ ಹೆಚ್ಚು ವೆಚ್ಚ ಮಾಡಬೇಕಿರುವ ಕಾರಣ, ದೇಶದ ಪ್ರಜೆಗಳ ರಾಷ್ಟ್ರೀಯ ತಲಾ ವೆಚ್ಚವು ಒಂದು ಲಕ್ಷ ರೂಪಾಯಿಯ ಗಡಿ ದಾಟಿದೆ. ವೆಚ್ಚ ಮಾಡಲು ಜನರು ಬಳಿ ಹಣ ಉಳಿಯುತ್ತಿಲ್ಲ. ಡೀಸೆಲ್ ಬೆಲೆ ಏರಿಕೆಯಿಂದಲೇ ಉಂಟಾದ ಈ ಸ್ಥಿತಿಯಿಂದ ಅಂತಿಮವಾಗಿ, ಡೀಸೆಲ್‌ಗೇ ಬೇಡಿಕೆ ಕುಸಿದಿದೆ ಎಂದು ವಿಶ್ಲೇಷಿಸಲಾಗಿದೆ.

ಬಳಕೆ ಸ್ಥಿರವಾಗಿಲ್ಲ

ಕೋವಿಡ್ ಕಾರಣದಿಂದ ಡೀಸೆಲ್ ಬಳಕೆ ಪ್ರಮಾಣ ಕಡಿಮೆಯಾಗಿದೆ ಎಂದು ಸರ್ಕಾರವು ಹೇಳಿದೆ. ಕೋವಿಡ್ ಪತ್ತೆಯಾದ 2020ರ ಆರಂಭದ ತಿಂಗಳಲ್ಲಿ ಡೀಸೆಲ್ ಬಳಕೆ ಪ್ರಮಾಣ ಭಾರಿ ಕುಸಿದಿತ್ತು. ಆದರೆ, ಅದೇ ವರ್ಷದ ನಂತರದ ತಿಂಗಳುಗಳಲ್ಲಿ ಏರಿಕೆಯಾಗಿತ್ತು. ಆದರೆ ಈ ಏರಿಕೆಯು 2021–2022ನೇ ಸಾಲಿನಲ್ಲಿ ಮುಂದುವರೆದಿಲ್ಲ. 2021ರ ಜನವರಿಯಿಂದಲೇ ಡೀಸೆಲ್ ಬಳಕೆಯ ಮಟ್ಟ ಕುಸಿಯುತ್ತಾ ಬಂದಿದೆ. ಮಧ್ಯೆ ಕೆಲವು ತಿಂಗಳಲ್ಲಿ ಬಳಕೆ ಮಟ್ಟ ಏರಿಕೆಯಾಗಿದೆ. ಆದರೆ, ಡೀಸೆಲ್ ಬೆಲೆ ವಿಪರೀತ ಏರಿಕೆಯಾದ ನಂತರ ಬಳಕೆ ಪ್ರಮಾಣ ಮತ್ತೆ ಇಳಿಕೆಯಾಗುತ್ತಿದೆ

ಪ್ರತಿ ತಿಂಗಳು ಮಾರಾಟವಾದ ಡೀಸೆಲ್



ಆಧಾರ: ಇಂಧನ ಸಚಿವಾಲಯದ ಪೆಟ್ರೋಲಿಯಂ ಪ್ರೈಸ್ ಅನಲಿಸಿಸ್ ಸೆಲ್ ವರದಿಗಳು, ರಾಷ್ಟ್ರೀಯ ಸಾಂಖ್ಯಿಕ ಸಂಸ್ಥೆಯ ವರದಿ, ರಾಯಿಟರ್ಸ್

ಲಭ್ಯತೆ ಕೊರತೆಯೇ?

ದೇಶದಲ್ಲಿ ಡೀಸೆಲ್ ಕೊರತೆಯಾಗುತ್ತಿದೆ. ಡೀಸೆಲ್ ಬಳಕೆ ಕುಸಿಯಲು ಇದೂ ಒಂದು ಪ್ರಮುಖ ಕಾರಣ ಎಂದು ಪ್ರತಿಪಾದಿಸಲಾಗುತ್ತಿದೆ. ಖಾಸಗಿ ಕಂಪನಿಗಳು ದೇಶೀಯ ಮಾರಾಟವನ್ನು ಕಡಿಮೆ ಮಾಡಿ, ರಫ್ತನ್ನು ಹೆಚ್ಚಿಸಿಕೊಂಡಿವೆ. ಇದರಿಂದ ಡೀಸೆಲ್ ಲಭ್ಯತೆ ಕಡಿಮೆಯಾಗಿದೆ. ಇದರಿಂದಲೂ ಬಳಕೆ ಮಟ್ಟ ಕುಸಿದಿದೆ ಎಂದು ರಾಯಿಟರ್ಸ್ ವಿಶ್ಲೇಷಣೆ ಪ್ರಕಟಿಸಿದೆ.

ರಷ್ಯಾದ ಕಡಿಮೆ ದರದ ತೈಲದಿಂದ ಖಾಸಗಿ ತೈಲ ಸಂಸ್ಕರಣಾ ಕಂಪನಿಗಳು ಭರ್ಜರಿ ಲಾಭ ಮಾಡಿಕೊಳ್ಳುತ್ತಿದ್ದರೆ, ಕೇಂದ್ರ ಸರ್ಕಾರಿ ಒಡೆತನದ ತೈಲ ಕಂಪನಿಗಳು ನಷ್ಟದ ಹಾದಿ ಹಿಡಿದಿವೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಉಕ್ರೇನ್ ಮೇಲೆ ಯುದ್ಧ ಸಾರಿದ ರಷ್ಯಾಕ್ಕೆ ಆರ್ಥಿಕ ದಿಗ್ಬಂಧನ ಹೇರಿರುವ ಐರೋಪ್ಯ ರಾಷ್ಟ್ರಗಳು ಅಲ್ಲಿಂದ ತೈಲ ಆಮದು ಬಹಿಷ್ಕರಿಸಿವೆ. ಆದರೆ ಭಾರತವು ರಷ್ಯಾದ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ರಷ್ಯಾದ ಕಚ್ಚಾ ತೈಲ ಕಡಿಮೆ ದರಕ್ಕೆ ಲಭ್ಯವಾಗುತ್ತಿದ್ದು, ಇದನ್ನು ಸಂಸ್ಕರಣೆ ಮಾಡುತ್ತಿರುವ ಖಾಸಗಿ ಕಂಪನಿಗಳು ವಿದೇಶಗಳಿಗೆ ರಫ್ತು ಮಾಡಿ ಲಾಭ ಮಾಡಿಕೊಳ್ಳುತ್ತಿವೆ. ಆದರೆ, ಸರ್ಕಾರಿ ಒಡೆತನದ ಕಂಪನಿಗಳು ದೇಶೀಯ ಪೂರೈಕೆಗೆ ಒತ್ತು ನೀಡಿವೆ. ರಷ್ಯಾ ಹೊರತುಪಡಿಸಿ, ಬೇರೆ ಕಡೆಗಳಿಂದ ಅಧಿಕ ದರದಲ್ಲಿ ತೈಲ ಖರೀದಿಸಬೇಕಾದ ಅನಿವಾರ್ಯತೆ ಹಾಗೂ ದೇಶೀಯ ತೈಲ ಮಾರಾಟ ಬೆಲೆ ನಿಯಂತ್ರಣ ಕಾರಣಗಳಿಂದ ಸರ್ಕಾರಿ ತೈಲ ಸಂಸ್ಕರಣೆ ಕಂಪನಿಗಳು ಹಿನ್ನಡೆ ಎದುರಿಸುತ್ತಿವೆ ಎನ್ನಲಾಗಿದೆ.

ಭಾರತದ ಖಾಸಗಿ ಕಂಪನಿಗಳಾದ ರಿಲಯನ್ಸ್, ನಯಾರಾ ಮೊದಲಾದವು ರಿಯಾಯಿತಿ ದರದಲ್ಲಿ ಲಭ್ಯವಿರುವ ರಷ್ಯಾದ ತೈಲವನ್ನು ಬೃಹತ್ ಪ್ರಮಾಣದಲ್ಲಿ ಖರೀದಿ ಮಾಡುತ್ತಿವೆ. ಈ ಖಾಸಗಿ ಕಂಪನಿಗಳು ದೇಶೀಯ ಪೂರೈಕೆಯನ್ನು ಆದಷ್ಟು ಕಡಿಮೆ ಮಾಡಿ, ವಿದೇಶಗಳಿಗೆ ರಫ್ತು ಪ್ರಮಾಣವನ್ನು ಹೆಚ್ಚಿಸಿವೆ. ಇದರಿಂದ ದೊಡ್ಡ ಪ್ರಮಾಣದ ಆದಾಯವನ್ನು ಗಳಿಸುತ್ತಿವೆ. ಆದರೆ, ಸರ್ಕಾರಿ ಒಡೆತನದ ಸಂಸ್ಥೆಗಳು ವಾರ್ಷಿಕ ಪೂರೈಕೆ ಒಪ್ಪಂದಗಳ ಮೂಲಕ ಬೇರೆಡೆಯಿಂದ ಬೃಹತ್ ಪ್ರಮಾಣದ ತೈಲವನ್ನು ಖರೀದಿಸುತ್ತಿವೆ. ಹೀಗಾಗಿ ರಷ್ಯಾದಿಂದ ಕಡಿಮೆ ಪ್ರಮಾಣದ ತೈಲವನ್ನು ಖರೀದಿಸಲಷ್ಟೇ ಸಾಧ್ಯವಾಗುತ್ತಿದೆ.

ಸರ್ಕಾರಿ ತೈಲ ಸಂಸ್ಕರಣೆ ಘಟಕಗಳು ಬಿಕ್ಕಟ್ಟಿನಲ್ಲಿ ಸಿಲುಕಲು ಇನ್ನೂ ಕೆಲವು ಕಾರಣಗಳಿವೆ. ಕೋವಿಡ್ ಬಳಿಕ ಅಂತರರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರುತ್ತಲೇ ಇದೆ. ಹೀಗಾಗಿ ಸರ್ಕಾರಿ ಕಂಪನಿಗಳು ಹೆಚ್ಚು ಹಣವನ್ನು ತೆತ್ತು ಕಚ್ಚಾ ತೈಲ ಖರೀದಿಸುತ್ತಿವೆ. ದೇಶದ ಬಳಕೆದಾರರಿಗೆ ಪೂರೈಸುವ ಸಂಸ್ಕರಿತ ತೈಲದ ಮಾರಾಟ ಬೆಲೆಯಲ್ಲಿ ಏಪ್ರಿಲ್‌ನಿಂದ ಬದಲಾವಣೆಯಾಗಿಲ್ಲ. ಕಳೆದ ವಾರ ಬೆಲೆಯನ್ನು ತಗ್ಗಿಸಲಾಗಿದೆ. ಹಣದುಬ್ಬರ ಹೆಚ್ಚಳ ಹಿನ್ನೆಲೆಯಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿ ಇರಿಸಲಾಗಿದೆ. ಚುನಾವಣೆ ಸಂದರ್ಭದಲ್ಲಿ ಹಲವು ತಿಂಗಳವರೆಗೆ ಬೆಲೆ ಏರಿಕೆಯನ್ನು ಸ್ಥಗಿತಗೊಳಿಸಲಾಗುತ್ತಿದೆ. ಇವೆಲ್ಲವೂ ಸರ್ಕಾರಿ ತೈಲ ಕಂಪನಿಗಳ ಆದಾಯವನ್ನು ತಗ್ಗಿಸಿವೆ ಎಂದು ವಿಶ್ಲೇಷಿಸಲಾಗಿದೆ.

3 ಪಟ್ಟು ಹೆಚ್ಚು ಖರೀದಿ: ಫೆಬ್ರುವರಿ 24ರಂದು ಉಕ್ರೇನ್ ಮೇಲೆ ರಷ್ಯಾ ಯುದ್ಧ ಸಾರಿದ ದಿನದಿಂದ ಈವರೆಗೆ ಭಾರತವು ರಷ್ಯಾದಿಂದ 6.25 ಕೋಟಿ ಬ್ಯಾರಲ್ ತೈಲವನ್ನು ಖರೀದಿಸಿದೆ. 2021ರ ಇದೇ ಅವಧಿಯಲ್ಲಿ ಖರೀದಿಸಿದ್ದ ತೈಲಕ್ಕೆ ಹೋಲಿಸಿದರೆ 3 ಪಟ್ಟು ಅಧಿಕ ಪ್ರಮಾಣದ ತೈಲವನ್ನು ಈ ವರ್ಷ ಖರೀದಿಸಲಾಗಿದೆ. ಈ ಪೈಕಿ ಖಾಸಗಿ ಕಂಪನಿಗಳು ಶೇ 50ಕ್ಕಿಂತ ಹೆಚ್ಚು ರಷ್ಯನ್ ತೈಲ ಖರೀದಿಸಿವೆ ಎಂದು ರಿಲಯನ್ಸ್, ನಯಾರಾ ಎನರ್ಜಿ, ರೆಫಿನಿಟಿವ್ ಎಕೊನ್ ಸಂಸ್ಥೆಗಳ ದತ್ತಾಂಶಗಳು ಹೇಳುತ್ತವೆ.

ಖಾಸಗಿ ಕಂಪನಿಗಳು ತೈಲ ರಫ್ತು ಹೆಚ್ಚಿಸಿರುವುದರಿಂದ ಭಾರತದ ತೈಲ ರಫ್ತು ಪ್ರಮಾಣವು ಶೇ 15ಕ್ಕೆ ಏರಿಕೆಯಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ, 2022ರ ಮೊದಲ ಐದು ತಿಂಗಳಲ್ಲಿ ಇದು ಅತ್ಯಧಿಕ ರಫ್ತು ಎನ್ನಲಾಗಿದೆ.

ದೇಶಿ ಮಾರುಕಟ್ಟೆ ಖಾಸಗಿ ಪಾಲು ಕುಸಿತ

ರಫ್ತು ಪ್ರಮಾಣವನ್ನು ತಕ್ಷಣಕ್ಕೆ ಹೆಚ್ಚಿಸುವ ಉದ್ದೇಶದಿಂದ ಖಾಸಗಿ ಕಂಪನಿಗಳು ದೇಶೀಯ ತೈಲ ಮಾರಾಟ ಪ್ರಮಾಣವನ್ನು ತಗ್ಗಿಸಿವೆ. 2022ರ ಮಾರ್ಚ್‌ನಲ್ಲಿ ದೇಶೀಯ ಮಾರುಕಟ್ಟೆಯಲ್ಲಿ ಶೇ 10ರಷ್ಟು ಪಾಲು ಹೊಂದಿದ್ದ ಖಾಸಗಿ ಸಂಸ್ಥೆಗಳು ಏಪ್ರಿಲ್ ಹೊತ್ತಿಗೆ ತಮ್ಮ ಪಾಲನ್ನು ಶೇ 7ಕ್ಕೆ ತಗ್ಗಿಸಿವೆ ಎಂದು ಸರ್ಕಾರಿ ತೈಲ ಸಂಸ್ಕರಣ ಕಂಪನಿಗಳ ಮೂಲಗಳು ತಿಳಿಸಿವೆ.

ರಷ್ಯಾದ ಪ್ರತೀ ಬ್ಯಾರಲ್ ತೈಲವನ್ನು ಸಂಸ್ಕರಣೆ ಮಾಡಿ ಅದನ್ನು ರಫ್ತು ಮಾಡುವುದರಿಂದ ₹2,275 (30 ಡಾಲರ್) ಲಾಭ ಸಿಗುತ್ತಿದೆ ಎಂದು ಖಾಸಗಿ ರಿಫೈನರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಸರ್ಕಾರಿ ಕಂಪನಿಗಳು ದೇಶೀಯ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸಲೇಬೇಕು. ಇದೇ ವೇಳೆ ಖಾಸಗಿ ಸಂಸ್ಥೆಗಳು ರಿಯಾಯಿತಿ ದರದಲ್ಲಿ ತೈಲವನ್ನು ಖರೀದಿಸಿ, ಐರೋಪ್ಯ ದೇಶಗಳಿಗೆ ರಫ್ತು ಮಾಡಿ ಭಾರಿ ಪ್ರಮಾಣದ ಲಾಭ ಗಳಿಸುತ್ತಿವೆ' ಎಂದು ರೆಫಿನಿಟಿವ್‌ನ ವಿಶ್ಲೇಷಕ ಎಹ್ಸಾನ್ ಉಲ್ ಹಕ್ ಹೇಳುತ್ತಾರೆ.

ಸರ್ಕಾರಿ ಕಂಪನಿಗಳು ದೇಶೀಯ ತೈಲ ಮಾರಾಟವನ್ನು ಹೆಚ್ಚಿಸಬೇಕಿದೆ. ಆದರೆ, ಈ ಕಂಪನಿಗಳು ಹೆಚ್ಚಿನ ದರದಲ್ಲಿ ತೈಲ ಖರೀದಿಸಿ, ಸಂಸ್ಕರಿಸಿ ಮಾರಾಟ ಮಾಡಬೇಕಿರುವುದರಿಂದ ಪ್ರತೀ ಲೀಟರ್ ಡೀಸೆಲ್‌ಗೆ ₹20 ಹಾಗೂ ಪ್ರತೀ ಲೀಟರ್ ಪೆಟ್ರೋಲ್‌ಗೆ ₹17 ನಷ್ಟ ಉಂಟಾಗುತ್ತಿದೆ ಎಂದು ಸರ್ಕಾರಿ ತೈಲ ಸಂಸ್ಕರಣ ಘಟಕದ ಅಧಿಕಾರಿಯೊಬ್ಬರು ಹೇಳಿದ್ದಾರೆ. ಈ ಕಂಪನಿಗಳು ಪ್ರತೀ ಅಡುಗೆ ಅನಿಲ ಸಿಲಿಂಡರ್‌ಗೆ ₹200 ನಷ್ಟ ಅನುಭವಿಸುತ್ತಿವೆ. 'ನಾವು ಭಾರತದ ಮಾರುಕಟ್ಟೆಯಲ್ಲಿ ಹೆಚ್ಚು ಮಾರಾಟ ಮಾಡುತ್ತಿದ್ದೇವೆ, ಹೆಚ್ಚು ನಷ್ಟ ಅನುಭವಿಸುತ್ತಿದ್ದೇವೆ' ಎಂದು ಅಧಿಕಾರಿ ಹೇಳಿದ್ದಾರೆ.



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 136

ಸೋತು ಹಿಂದಿರುಗಿದ ಮನ್ಮಥ

ಶಿವ ಧ್ಯಾನ ಮಾಡುವ ತಾಣಕ್ಕೆ ಬಂದ ಮನ್ಮಥ ತನ್ನ ಪ್ರಭಾವವನ್ನು ಬೀರಿದ. ಇದರಿಂದ ಅಲ್ಲಿರುವ ಪ್ರಾಣಿಗಳೆಲ್ಲಾ ಕಾಮವಿಕಾರ ಹೊಂದಿದವು. ಆದರೆ ಶಿವ ಮಾತ್ರ ವಿಚಲಿತನಾಗಲಿಲ್ಲ. ಆಗ ವಸಂತ ತನ್ನ ಪ್ರಭಾವವನ್ನು ಬೀರಿ ಶಂಕರನನ್ನು ಮೋಹಗೊಳಿಸಲು ಯತ್ನಿಸಿದ. ಸುತ್ತಲಿನ ಮರಗಳಲ್ಲೆಲ್ಲ ಏಕಕಾಲದಲ್ಲಿ ಮೊಗ್ಗುಗಳು ಚಿಗುರಿ, ಹೂವುಗಳು ಅರಳಿದವು. ಆದರೆ ಮಹಾಯೋಗಿ ಶಿವ ಮಾತ್ರ ಧ್ಯಾನಸ್ಥಿತಿಯಿಂದ ಹೊರಬರಲಿಲ್ಲ. ಮನ್ಮಥ ತನ್ನ ಸತಿ ರತಿದೇವಿಯೊಡನೆ ಶಿವನನ್ನು ಮೋಹಗೊಳಿಸಲು ಅನೇಕ ಶೃಂಗಾರಪ್ರಯೋಗಗಳನ್ನು ಮಾಡಿದ. ಇದರಿಂದ ಅಲ್ಲಿರುವ ಪ್ರಾಣಿಗಳೆಲ್ಲ ಮತ್ತಷ್ಟು ಕಾಮದ ಮತ್ತಿನಲ್ಲಿ ತೇಲಿದವು. ಆದರೆ ಪ್ರಮಥಾಧಿಪತಿಯಾದ ಶಂಕರನು ಮಾತ್ರ ಮೋಹಗೊಳ್ಳಲೇ ಇಲ್ಲ. ರತಿ-ಮನ್ಮಥ ಮತ್ತು ವಸಂತರ ಪ್ರಯತ್ನಗಳೆಲ್ಲ ಸತತ ವ್ಯರ್ಥವಾದಾಗ ಮನ್ಮಥ ಹತಾಶನಾಗಿ ಬ್ರಹ್ಮನಿರುವ ಸಂಕೇತಸ್ಥಾನಕ್ಕೆ ಹಿಂತಿರುಗಿದ. ಏನಾಯಿತೆಂದು ಬ್ರಹ್ಮ ಕೇಳಿದಾಗ, ಮನ್ಮಥ ಬಹಳ ದುಃಖದಿಂದ ತೊದಲುತ್ತಾ ನುಡಿದ 'ಓ ಬ್ರಹನೇ! ವಿರಕ್ತನಾಗಿ, ಯೋಗನಿರತನಾದ ಶಿವನನ್ನು ಮೋಹಗೊಳಿಸಲು ಸಾಧ್ಯವಿಲ್ಲ. ವಸಂತನೊಡನೆ ಮತ್ತು ರತಿಯೊಡನೆ ನಾನು ಶಿವನನ್ನು ಮೋಹಗೊಳಿಸಲು ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾಯಿತು. ನಾವು ಶಿವನನ್ನು ಮೋಹಗೊಳಿಸಲು ಎಂತೆಂತಹ ಪ್ರಯತ್ನಗಳನ್ನು ಮಾಡಿದೆವೆಂಬುದನ್ನು ಹೇಳುವೆನು ಕೇಳು' ಎಂದು ಮನ್ಮಥ ತಾನು ಮಾಡಿದ ಪ್ರಯತ್ನದ ವಿವರಗಳನ್ನು ತಿಳಿಸುತ್ತಾನೆ.

ಶಿವನು ಶರೀರೇಂದ್ರಿಯಗಳನ್ನೂ ಪ್ರಾಣಗಳನ್ನೂ ಬಂಧಿಸಿ ಯಾವಾಗ ಸಮಾಧಿಯಲ್ಲಿ ಕುಳಿತುಕೊಳ್ಳುವನೋ, ಆಗ ನಾನು ಮತ್ತು ವಸಂತ ಸೇರಿ ಸುವಾಸನೆಯುಳ್ಳ ಶೀತಲವಾದ ಮೋಹವನ್ನುಂಟುಮಾಡುವಂತಹ ಗಾಳಿಯನ್ನು ಮೆಲ್ಲಗೆ ಬೀಸಿಸಿ ಮಹಾದೇವನನ್ನು ಉದ್ವೇಗಗೊಳ್ಳುವಂತೆ ಮಾಡುತ್ತಿದ್ದೆವು. ನಂತರ ನನ್ನ ಐದು ಪುಷ್ಪಬಾಣಗಳನ್ನೂ ಪ್ರಯೋಗಿಸಿ ಆ ಶಿವನ ಸುತ್ತಲೂ ಸಂಚರಿಸುವ ಪ್ರಮಥಗಣಗಳನ್ನು ಮೋಹಗೊಳಿಸಲು ಪ್ರಯತ್ನಿಸಿದೆ. ಆದರೆ ಶಿವನಿರಲಿ, ಅವನ ಪ್ರಮಥಗಣಗಳೂ ಮರುಳಾಗಲಿಲ್ಲ.

ಧ್ಯಾನ ಮಾಡಲು ಶಿವನು ಮೇರುಪರ್ವತ, ನಾಟಕೇಶ್ವರ, ಕೈಲಾಸಪರ್ವತಗಳಿಗೆ ಹೋದಾಗಲೆಲ್ಲ ನಾವು ಅವನನ್ನು ಹಿಂಬಾಲಿಸುತ್ತಿದ್ದೆವು. ಅಲ್ಲಿ ಶಿವನು ಸಮಾಧಿಸ್ಥಿತಿಯ ಧ್ಯಾನವನ್ನು ಬಿಟ್ಟು ಬರುವವರೆಗು ಕಾಯುತ್ತಿದ್ದೆವು. ಮಹಾದೇವ ಧ್ಯಾನದಿಂದ ಎದ್ದು ಬಂದು ಶಾಂತವಾಗಿ ಕುಳಿತಿರುವಾಗ, ಅವನೆದುರಿಗೆ ಚಕ್ರವಾಕ ದಂಪತಿಗಳಿಂದ ಶೃಂಗಾರ ಆಟವಾಡಿಸುತ್ತಿದ್ದೆ. ಚಕ್ರವಾಕಗಳ ಜೋಡಿಯು ಶಿವನೆದುರಿನಲ್ಲಿ ಅನೇಕ ಬಗೆಯ ಶೃಂಗಾರಚೇಷ್ಟೆಗಳನ್ನು ಪ್ರದರ್ಶಿಸುತ್ತಿದ್ದವು. ಮಯೂರ ಮೊದಲಾದ ಪಕ್ಷಿಗಳೂ, ಜಿಂಕೆ, ಹುಲಿ ಮುಂತಾದ ಮೃಗಗಳೂ ಶಿವನೆದುರಿನಲ್ಲಿ ಕಾಮಭಾವವನ್ನು ಪ್ರಕಟಿಸುತ್ತಿದ್ದವು. ಮಯೂರ ದಂಪತಿಗಳಂತೂ ಶಿವನೆದುರಿನಲ್ಲಿ ಅನೇಕ ಚೇಷ್ಟೆಗಳನ್ನು ಮಾಡುತ್ತಾ, ನೋಡುಗರಲ್ಲಿ ಶೃಂಗಾರಸುಖದ ಆಸಕ್ತಿಯನ್ನು ಹುಟ್ಟಿಸುತ್ತಿದ್ದವು.

ಹೀಗಿದ್ದರೂ ಶಿವನ ಮನಸ್ಸು ಚಂಚಲಿತವಾಗಲಿಲ್ಲ. ಇದರಿಂದ ಶಿವನ ಮೇಲೆ ನನ್ನ ಬಾಣಗಳನ್ನು ಹೂಡಲು ಅವಕಾಶವೇ ಸಿಗಲಿಲ್ಲ. ಶಿವನನ್ನು ಮೋಹಗೊಳಿಸುವಂಥ ಶಕ್ತಿ ನನಗಿಲ್ಲ ಎಂದು ಮನ್ಮಥ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾನೆ. ಅಲ್ಲದೆ, ಶಿವನನ್ನು ಮೋಹಗೊಳಿಸಲು ವಸಂತ ಎಂತೆಂಥ ಪ್ರಯತ್ನಗಳನ್ನು ಮಾಡಿದನೆಂಬುದನ್ನು ವಿವರವಾಗಿ ಬ್ರಹ್ಮನಿಗೆ ಹೇಳುತ್ತಾನೆ.

ಶಿವನ ಸುತ್ತಾ ಇದ್ದ ಸಂಪಿಗೆ, ಕೇಸರ, ಮಾವು, ಸುರಗಿ, ವಸಲೆ, ಹಸಿರುಪಾದರಿ, ನಾಗಸಂಪಿಗೆ, ಪುನ್ನಾಗ, ಮುತ್ತುಗ, ಕೇದಗೆ, ಕಗ್ಗಲೀ, ಮಲ್ಲಿಗೆ, ಕಗ್ಗೋಲೆ, ಕೆಂಪುಗೋರಂಟಿಗೆ ಮುಂತಾದ ಹೂವುಗಳನ್ನು ವಸಂತ ಅರಳಿಸಿದ. ಸರಸ್ಸುಗಳಲ್ಲಿ ಕಮಲಗಳನ್ನು ಅರಳಿಸಿದ. ಮಲಯಪರ್ವತದ ಸುವಾಸನೆಯುಳ್ಳ ಗಾಳಿಯನ್ನು ಬೀಸಿಸಿ ಶಿವನ ಆಶ್ರಮದಲ್ಲೆಲ್ಲಾ ಸುವಾಸನೆ ಪಸರಿಸಿದ. ಸುಂದರವಾದ ಮಾಧವೀಯೇ ಮೊದಲಾದ ಲತೆಗಳು, ಅರಳಿದ ಚಿಗುರುಗಳುಳ್ಳಂತಹ ವೃಕ್ಷಗಳನ್ನು ಮನೋಹರವಾಗಿ ಸುತ್ತಿಕೊಳ್ಳುವಂತೆ ರಚಿಸಿದ. ಇಂಥ ಸುಂದರವಾದ ಅರಳಿದ ಹೂವುಗಳುಳ್ಳ ಲತೆ–ವೃಕ್ಷಗಳನ್ನು ಮತ್ತು ಸುವಾಸನೆಯಾದ ಗಾಳಿಯನ್ನು ಸವಿದ ಮುನಿಗಳು ಕಾಮವಿಕಾರವನ್ನು ಹೊಂದಿದರು. ಆದರೆ ಶಂಕರನಿಗೆ ಸ್ವಲ್ಪವೂ ಮೋಹವುಂಟಾಗಲಿಲ್ಲ. ನನ್ನ ಮೇಲೆ ಕೋಪವನ್ನೂ ಮಾಡಿಕೊಳ್ಳದೆ ಸ್ಥಿತಪ್ರಜ್ಞನಾಗಿದ್ದ. ಶಂಕರನ ದೃಢವಾದ ವಿರಕ್ತಭಾವನೆಯನ್ನೂ ತಿಳಿದ ನಂತರ 'ಇನ್ನು ಪ್ರಯೋಜನವಿಲ್ಲವೆಂದು ಹಿಂತಿರುಗಿದೆ' ಎಂದು ಮನ್ಮಥ ತಿಳಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅರವಿಂದ ಕೇಜ್ರಿವಾಲ್ ನೇತೃತ್ವದ ದೆಹಲಿಯ ಆಮ್ ಆದ್ಮಿ ಸರ್ಕಾರವು ಮುಸ್ಲಿಂ ಓಲೈಕೆಯಲ್ಲಿ ತೊಡಗಿದೆ ಎಂದು ಬಿಜೆಪಿ ಆರೋಪಿಸಿದೆ. 1ರಿಂದ 10ನೇ ತರಗತಿಯ ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳ ಶುಲ್ಕವನ್ನು ತುಂಬಿಕೊಡಲು ಸರ್ಕಾರ ಮುಂದಾಗಿದೆ ಎಂದು ಬಿಜೆಪಿ ಹೇಳಿದೆ. ಶಿಕ್ಷಣ ಇಲಾಖೆ ಹೊರಡಿಸಿದ್ದು ಎನ್ನಲಾದ ಸುತ್ತೋಲೆಯ ಪ್ರತಿಯನ್ನು ಹಲವು ಬಿಜೆಪಿ ಮುಖಂಡರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. 'ಮುಸ್ಲಿಂ ವಿದ್ಯಾರ್ಥಿಗಳ ಶುಲ್ಕವನ್ನು ಮಾತ್ರ ಸರ್ಕಾರ ತುಂಬಿಕೊಡಲು ಮುಂದಾಗಿದೆ. ಹಿಂದೂ ಆಗಿ ಇರುವುದು ಅಪರಾಧವೇ' ಎಂದು ಬಿಜೆಪಿ ಮುಖಂಡ ವಿಕ್ರಂ ಬಿಧೂರಿ ಎಂಬುವರು ಪ್ರಶ್ನಿಸಿದ್ದಾರೆ.



ಸರ್ಕಾರ ಹೊಡಿಸಿದ್ದ ಸುತ್ತೋಲೆಯ ಎಲ್ಲಿಯೂ, ಕೇವಲ ಮುಸ್ಲಿಂ ವಿದ್ಯಾರ್ಥಿಗಳ ಶುಲ್ಕವನ್ನು ಸರ್ಕಾರ ತುಂಬಿಕೊಡಲಿದೆ ಎಂಬ ಉಲ್ಲೇಖವಿಲ್ಲ. ಖಾಸಗಿ ಶಾಲೆಗಳಲ್ಲಿ ಓದುತ್ತಿರುವ ಎಲ್ಲಾ ಅಲ್ಪಸಂಖ್ಯಾತ ಸಮುದಾಯಗಳ ಅರ್ಹ ವಿದ್ಯಾರ್ಥಿಗಳ ಶುಲ್ಕವನ್ನು ಭರಿಸುವುದಾಗಿ ಸರ್ಕಾರ ಆದೇಶ ಹೊರಡಿಸಿದೆ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಬದುಕೊಂದು ಗಾಳಿಪಟ

ಬಾನೊಳಿರುವುದೆ ಪಕ್ಷಿ ಪಾರ್ವ ದಾರಿಯ ನಕ್ಷೆ? |
ಮೀನು ನೀರೊಳು ನುಸುಳೆ ಪಥನಿಯಮವಿಹುದೆ? ||
ಏನೊ ಜೀವವನೆಳೆವುದೇನೊ ನೂಕುವುದದನು |
ನೀನೊಂದು ಗಾಳಿಪಟ – ಮಂಕುತಿಮ್ಮ || 641 ||

ಪದ-ಅರ್ಥ: ಬಾನೊಳಿರುವುದೆ = ಬಾನೊಳು (ಆಕಾಶದಲ್ಲಿ) + ಇರುವುದೆ, ಪಾರ್ವ = ಹಾರುವ, ಜೀವವನೆಳೆವುದೇನೊ = ಜೀವವನು + ಎಳೆವು-ದು + ಏನೊ, ನೂಕುವುದದನು = ನೂಕುವುದು-+ ಅದನು.

ವಾಚ್ಯಾರ್ಥ: ಹಕ್ಕಿ ಹಾರುವುದಕ್ಕೆ ಆಕಾಶದಲ್ಲಿ ದಾರಿಯ ನಕ್ಷೆ ಇದೆಯೆ? ಮೀನು ನೀರಿನಲ್ಲಿ ಸುಳಿದು ನುಸುಳುವುದಕ್ಕೆ ಏನಾದರೂ ದಾರಿನಿಯಮಗಳಿವೆ-ಯೆ? ಯಾವುದೋ ಶಕ್ತಿ ಜೀವವನ್ನು ಎಳೆಯುವುದು, ಮತ್ತೊಂದು ಯಾವುದೋ ಅದನ್ನು ನೂಕುವುದು. ನೀನು ಒಂದು ಗಾಳಿಪಟ ಇದ್ದಂತೆ.

ವಿವರಣೆ: ಗಾಳಿಪಟ ಒಂದು ಸುಂದರ ಪ್ರತಿಮೆ. ಅದು ಕಾಗದದ್ದೋ, ಈಗೀಗ ಬರುವಂತೆ ತೆಳುವಾದ ಪ್ಲಾಸ್ಟಿಕ್ ಹಾಳೆಯದೋ ಆಗಿರುತ್ತದೆ. ಅದನ್ನು ಸರಿಯಾದ ಸೂತ್ರದಲ್ಲಿ ಕಟ್ಟಬೇಕು ಅದಕ್ಕೊಂದು ಹಾರಲು ಸರಿಯಾದ ರೂಪ ಕೊಡುವುದಕ್ಕೆ, ಬಿದಿರು ಕಡ್ಡಿಗಳನ್ನು ಅಂಟಿಸಬೇಕು. ತೂಕಕ್ಕೆ ಒಂದು ಬಾಲಂಗೋಚಿ. ಹಾರಲು ಅನುವಾಗುವಂಥ ಬಯಲು ಪ್ರದೇಶ ಬೇಕು ಮತ್ತು ಅದನ್ನು ಕಳೆದುಹೋಗದಂತೆ ಕಟ್ಟಿದ ಉದ್ದ ದಾರ ಬೇಕು. ಗಾಳಿಪಟ ತನ್ನಷ್ಟಕ್ಕೆ ತಾನೇ ಏನೂ ಮಾಡಲಾರದು. ಅದಕ್ಕೆ ಸರಿಯಾದ ಗಾಳಿ ಬೇಕು. ಅದು ಮೇಲೆ ಏರಿದ ಮೇಲೆ ದಾರ ಅದನ್ನು ಕೆಳಗೆ ಬಿಗಿಯಾಗಿ ಹಿಡಿದು ಎಳೆಯುತ್ತದೆ, ಗಾಳಿ ಮುಂದೆ ನೂಕುತ್ತದೆ. ಗಾಳಿಪಟ ಹೀಗೆ ಮುಂದೆ ನೂಕುವ ಗಾಳಿ, ಹಿಂದೆ ಎಳೆಯುವ ದಾರದ ನಡುವೆ ಓಲಾಡುತ್ತದೆ. ಗಾಳಿ ನಿಂತರೆ ಬಿದ್ದು ಹೋಗುತ್ತದೆ, ದಾರ ಹರಿದರೆ ದಿಕ್ಕು ತಪ್ಪಿ ಹಾರಿ ಹೋಗುತ್ತದೆ. ಆ ಎರಡೂ ನೂಕು--ತಳ್ಳುಗಳ ನಡುವೆಯೇ ಅದರ ಬಾಳ್ವೆ. ಏರಿಳಿತ ಅದಕ್ಕೆ ತಪ್ಪಿದ್ದಲ್ಲ, ಯಾಕೆಂದರೆ ಎರಡು ಒತ್ತಡಗಳಲ್ಲಿ ಯಾವುದೋ ಒಂದು ಹೆಚ್ಚು ಕಡಿಮೆಯಾಗುತ್ತಲೇ ಇರುತ್ತದೆ.

ಕಗ್ಗ ಹೇಳುತ್ತದೆ ಮನುಷ್ಯನ ಬದುಕೂ ನಕ್ಷೆ ಇಲ್ಲದ ದಾರಿ. ಜೀವವನ್ನು ಯಾವುದೋ ಶಕ್ತಿ ಮುಂದೆ ತಳ್ಳುತ್ತದೆ, ಆಗ ಪ್ರಗತಿ ಕಾಣುತ್ತದೆ. ಮತ್ತೊಂದು ಕಾಣದ ಶಕ್ತಿ ಅದನ್ನು ಹಿಂದಲೆಯುತ್ತದೆ, ಆಗ ಅವನತಿ ಕಾಣುತ್ತದೆ. ಶಕ್ತಿಗಳು ಕಣ್ಣಿಗೆ ಕಾಣವು. ಪ್ರಗತಿ, ಅವನತಿಗಳು ಕಾಣುತ್ತವೆ. ರಾಬರ್ಟ ಕ್ಲೈವ್ ಒಬ್ಬ ಮುಂಗೋಪಿ ಹುಡುಗ, ಅಭ್ಯಾಸದಲ್ಲಿ ಸರಿಯಾಗಲಿಲ್ಲ. ಮೇಲಿಂದ ಮೇಲೆ ಶಾಲೆ ಬದಲಾಯಿಸಿದ. ಯಾವುದಾದರೂ ನೌಕರಿ ಸಿಕ್ಕರೆ ಸಾಕೆಂದು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕ್ಲಾರ್ಕ ಎಂದು ಸೇರಿ ಮದ್ರಾಸಿಗೆ ಬಂದ. ಒದ್ದಾಡಿದ. ಭವಿಷ್ಯ ಕಾಣದೆಂದೆನಿಸಿದಾಗ ಆತ್ಮಹತ್ಯೆಗೆ ಪ್ರಯತ್ನ ಮಾಡಿದ. ಉಳಿದ ನಂತರ ಹೇಗೋ, ಯಾರದೋ ಸಹಾಯದಿಂದ ಸೈನ್ಯ ಸೇರಿದ. ಮೆಲುಕ್ಕೇರುತ್ತ ಬಂದ. ಪ್ಲಾಸಿ ಯುದ್ಧದ ನಂತರ ಪ್ರಚಂಡನಾದ, ಪ್ರಖ್ಯಾತನಾದ. ಅಸಾಧ್ಯ ಪ್ರಮಾಣದ ಹಣ ಬಂತು. ಅದರ ಹಿಂದೆಯೇ ಭ್ರಷ್ಟಾಚಾರ. ಬೆಂಗಾಲ್ ಪ್ರೆಸಿಡೆನ್ಸಿಯ ಪ್ರಥಮ ಗವರ್ನರ್ ಆದ. ರಿಟೈರ್ ಆಗಿ ಇಂಗ್ಲೆಂಡಿಗೆ ಹೋದ. ಪಾಪಪ್ರಜ್ಞೆ ಬೆನ್ನಟ್ಟಿತು. ಕೊನೆಗೆ ತಾನೇ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ. ಇದೆಂಥ ಏರಿಳಿತ!

ಕಗ್ಗ ತಿಳಿ ಹೇಳುತ್ತದೆ. ನೀನೊಂದು ಗಾಳಿಪಟ ಇದ್ದ ಹಾಗೆ. ನೀನು ಮೇಲೆ ಏರುವುದಕ್ಕೆ ಮತ್ತು ಕೆಳಗೆ ಬರುವುದಕ್ಕೆ ನೀನೇ ಕಾರಣನಲ್ಲ. ನಿನ್ನ ಹಿಂದೆ ಯಾವುದೋ ಶಕ್ತಿಗಳು ಸಹಾಯಕವಾಗಿ ಅಥವಾ ವಿರುದ್ಧವಾಗಿ ಕಾರ್ಯಮಾಡುತ್ತವೆ. ಅವುಗಳನ್ನು ಅರಿತುಕೋ. ಅಹಂಕಾರದ ನಡೆ ನಮ್ಮನ್ನು ಹಿಂದೆ ತಳ್ಳಿದರೆ, ವಿನಯದ, ತಿಳುವಳಿಕೆಯ ಹೆಜ್ಜೆ ಮೇಲೆ ಏರಿಸೀತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 2, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ತೃತೀಯ ಗಂ. 24-18 ನಕ್ಷತ್ರ: ಆರ್ದ್ರಾ ಗಂ. 16-04 ಯೋಗ: ಗಂಡ ಗಂ. 26-35, ಕರಣ: ತೈತಿಲ ಗಂ. 11-03, ವೃಷಭ ಮಾಸದ 18 ನೇ ದಿನ.
ರಾಹುಕಾಲ: ಮಧ್ಯಾಹ್ನ 01:30 – 03:00
ಸೂರ್ಯೋದಯ: 06-06 **ಸೂರ್ಯಾಸ್ತ:** 06-51 ಮುಸ್ಲಿಂ ದಿನಾಂಕ : 02 ಜುಲ್ಕಾಯದ್
ದಿನ ವಿಶೇಷ: ರಂಭಾ ತೃತೀಯ, ಪ್ರತಾಪ ಜಯಂತಿ (ರಾಜಸ್ಥಾನ)
ಅದೃಷ್ಟ ಸಂಖ್ಯೆ: 5, 7

ಮೇಷ: ನೀವು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಸಾಹಸ ಪ್ರಿಯತೆಯಂತಹ ಮನೋಭಾವವು ಇಂದು ನಿಮ್ಮನ್ನು ಆವರಿಸಲಿದೆ. ಸರಕಾರದ ಕೆಲಸದಲ್ಲಿ ಜಯ.

ವೃಷಭ: ಹಣಕಾಸು ಸಂಸ್ಥೆಗಳ ನೆರವಿನಿಂದ ಬಹು ದಿನದ ಸ್ವಂತ ಉದ್ದಿಮೆ ಪ್ರಾರಂಭಿಸುವ ಯೋಜನೆ ಕೈಗೂಡುವುದು. ಚಿತ್ರನಟ, ನಟಿಯರು ಮತ್ತು ಸಂಗೀತಗಾರರಿಗೆ ಉತ್ತಮ ದಿನ. ಲೇಖನ ಸಾಮಗ್ರಿಗಳಿಂದ ಧನಾಗಮ.

ಮಿಥುನ: ಸಂಶೋಧಕರು ತಮ್ಮ ಸಾಧನೆಯ ಕುರಿತು ಹೆಮ್ಮೆ ಪಡಲು ಇಂದು ಸುಸಮಯ. ಅವಿವಾಹಿತರಿಗೆ ಕಂಕಣಬಲ ಇಂದು ಅನಾಯಾಸವಾಗಿ ಒದಗಿ ಬರಲಿದೆ. ಮಿತ ಆಹಾರ ಸೇವನೆಯಿಂದ ಆರೋಗ್ಯ ಉತ್ತಮವಾಗಿರುವುದು.

ಕರ್ಕಾಟಕ: ಯಂತ್ರೋಪಕರಣಗಳ ಸಹಾಯದಿಂದ ಕೆಲಸ ಮಾಡುವ ವೇಳೆ ಅಪಾಯ ಸಂಭವಿಸಬಹುದು ಹೆಚ್ಚಿನ ಗಮನದಿಂದ ಕೆಲಸವನ್ನು ಮಾಡಿ. ನಿಮ್ಮ ಮನೋಭಾವಕ್ಕೆ ಕುಟುಂಬ ವರ್ಗದವರು ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಾರೆ.

ಸಿಂಹ: ನಿಮ್ಮ ಕೆಲಸಗಳ ಬಗ್ಗೆ ಅನುಭವಸ್ಥರೊಂದಿಗೆ ಮಾತು ಕತೆ ನಡೆಸುವುದರಿಂದ ತಿಳುವಳಿಕೆ ವೃದ್ಧಿ. ನಿಯೋಜಿತ ಕೆಲಸಗಳನ್ನು ಉತ್ಸಾಹದಿಂದ ಮಾಡಿ ಮುಗಿಸುವಿರಿ ಮತ್ತು ಇನ್ನೊಂದು ಹೊಸ ಕೆಲಸ ನಿಮಗಾಗಿ ಕಾದಿರಲಿದೆ.

ಕನ್ಯಾ: ಐ.ಟಿ. ಕಂಪನಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಲಿರುವ ಪರಿಣಾಮವಾಗಿ ವರಮಾನ ಹೆಚ್ಚಳದ ಸಂಭವ. ನವ ದಂಪತಿಗಳಿಗೆ ಹರ್ಷದ ಸಮಾಚಾರ ಕೇಳಿ ಬರುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು.

ತುಲಾ: ಸ್ನೇಹಿತನ ಸಹಾಯದಿಂದ ಬೇರೆ ಉದ್ಯಮಕ್ಕೆ ಕೈ ಹಾಕುವ ಸಾಹಸವನ್ನು ಮಾಡಬಹುದು. ಮಗನಿಗಾಗಿ ವೈದ್ಯಕೀಯ ಖರ್ಚು ಹೆಚ್ಚಳ. ಮೇಧಾಕರ ದಕ್ಷಿಣಾಮೂರ್ತಿಯ ಆರಾಧನೆಯಿಂದ ಸುಲಭವಾಗಿ ಯಶಸ್ಸಿನ ದಾರಿ.

ವೃಶ್ಚಿಕ: ಕೆಲಸ ಆರಂಭಿಸುವ ಮುನ್ನ ಚಿಂತನೆ ಅಗತ್ಯ ಎಂಬುದು ಈಗ ತಿಳಿದು ಬಂದಿದೆ. ಜೀವನ ಸಂಗಾತಿಯ ಆಯ್ಕೆಯಲ್ಲಿ ಹಿರಿಯರ ಮಾತಿನ ಗಮನ ಕೊಡಿ. ಪರಿಸ್ಥಿತಿಗೆ ತಕ್ಕಂತೆ ಬದಲಾಗುವ ಮನೋಭಾವದಿಂದ ಸ್ನೇಹಕ್ಕೆ ಅಡ್ಡಿ.

ಧನು: ವಿದ್ಯಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಕೆಲಸದಲ್ಲಿ ಉತ್ಸಾಹ ವೃದ್ಧಿ. ನಿಮ್ಮ ಜೀವನದಲ್ಲಿ ಮಹತ್ತರ ಬದಲಾವಣೆಯಾಗುವ ಸೂಚನೆಗಳು ನಿಮ್ಮ ಗಮನಕ್ಕೆ ಬರಲಿದೆ. ಹಳೆಯ ಮಿತ್ರನ ಭೇಟಿಯಿಂದ ಮುದ.

ಮಕರ: ಸಹವರ್ತಿಗಳೊಡನೆ ಸಂಯಮದಿಂದ ವರ್ತಿಸಿ. ಎಲ್ಲ ಕೆಲಸಗಳನ್ನು ಬಿಟ್ಟು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ನಿಮಗೆ ಅನಿಸಲಿದೆ. ಮಾನಸಿಕ ನೆಮ್ಮದಿ ಸಂಪಾದಿಸಲು ತಾಯಿ ದುರ್ಗಾಪರಮೇಶ್ವರಿಯ ಮೊರೆ ಹೋಗಿ.

ಕುಂಭ: ನಿಮ್ಮ ಮೇಲುಸ್ತುವಾರಿಯಲ್ಲಿ ಕೆಲಸ ಕಾರ್ಯಗಳು ಸುಗಮ. ವ್ಯವ-ಹಾರದಲ್ಲಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಯ ಹುಡುಕಾಟ ನಡೆಸುವಿರಿ. ಮನೆಯಲ್ಲಿ ಸಮಾರಂಭ ನಡೆಸಲು ದಿನ ಗೊತ್ತು ಮಾಡುವಿರಿ.


ಮೀನ: ನಿಮ್ಮ ಭರವಸೆಯ ಮಾತುಗಳಿಂದ ಸಹೋದ್ಯೋಗಿಗೆ ಆತ್ಮಸ್ಥೈರ್ಯ. ಹಣದ ವಿಚಾರದಲ್ಲಿ ಬಿಗಿ ನಿಲುವು ಉತ್ತಮ. ಕಠಿಣ ಪರಿಶ್ರಮದಿಂದ ಕಾರ್ಯ ನಿರ್ವಹಿಸಿದಲ್ಲಿ ಕಹಿಯ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿವೆ.

ಪದಬಂಧ 4976

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೊಸ ಯುಗ ಈ ತರ ಕಾಣಿಸಿತೇ? (4)
3.ತರಂಗ ನೋಡುತ್ತಿರುವ ನಿಪುಣ (4)
5.ಮನಸ್ಸಿನ ಅಸ್ವಾಸ್ಥ್ಯವಿದು (3)
6.ವಿಶೇಷಕಾರ್ಯಕ್ಕಾಗಿ ನೇಮಿಸಲಾದ ಸಮಿತಿ (3)
8.ಬಾನುಲಿ ಎತ್ತರಕ್ಕೆ ಹಾರಿದ ಗಬ್ಬಿಲ (3)
9.ನಯವಾಗಿ ಕಾಣುತ್ತಿರುವ ಅಕ್ಷಿ (3)
10.ಸ್ವರ್ಗಅಲ್ಲ! ನರಕವೂಅಲ್ಲ! ಇಕ್ಕಟ್ಟಿನ ಸ್ಥಿತಿ! (3)
12.ಹಿಂದಿಯವನು ಧರಿಸಿದ ಕನ್ನಡಕ (3)
14.ಕರದಲ್ಲಿರುವ ಮೃತ ದೇಹ (4)
15.ಮರದೊಳಗೆ ಚಲುವು ಕಂಡೀತೇ (4)

ಮೇಲಿಂದ ಕೆಳಕ್ಕೆ
1.ಕಟ್ಟುಪಾಡು ಇಲ್ಲಿ ಉಲ್ಟಾ ಆಗಿದೆಯಲ್ಲಾ? (3)
2.ಮನ್ಮಥನ ಪತ್ನಿ (2)
3.ಟಪಾಲು ಬಂದಾಗ ಆಗಿರುವ ಹಿಸ್ಸೆ! (2)
4.ನೂಲು ತೆಗೆಯುವ ಸಾಧನ (3)
7.ಆನೆಯ ನಡಿಗೆ (5)
8.ಓಲಗದ ವಾದ್ಯಗಳನ್ನು ನುಡಿಸುವುದು (5)
9.ಈತ ನೃತ್ಯ ಮಾಡುವವನು (3)
11.ಅಷ್ಟದಿಕ್ಪಾಲಕರಲ್ಲಿ ಈತ ಬಲು ಶ್ರೀಮಂತ! (3)
12.ಗ್ರಹಚಾರ ಹಳಿಯುತ್ತಿರುವ ಸೇವಕ! (2)
13.ಸುಗಮವಾಗಿ ಕಿತ್ತಿರುವ ಹೂವು (2)



4975ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಮರಸ 3.ಅಧರ
4.ರತ್ನಾಕರ 6.ನರಿ
7.ಸುತ 8.ಮಗು
9.ಮಂದ್ರ 10.ಕಕ್ಕಿ
11.ಕಂತ್ರಿ 13.ಶಮಳತ
15.ನದವ 16.ಮಹಾದ್ವಾರ

ಮೇಲಿಂದ ಕೆಳಕ್ಕೆ:
1.ಸರದಿ 2.ಸರ
3.ಅಗ್ನಿಶಾಮಕದಳ
5.ರಜತಮಹೋತ್ಸವ
6.ಅಳು 9.ಮಂತ್ರಿ
12.ವಾನರ 14.ತಮ

ಸುಡೊಕು 5362

				1	6		8	
		6			9			7
4			7				9	
	7			2	1			8
	6	4	9		8		7	
8		1				9		4
	8			9				
1		2				7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5361 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ ಕೋಲ್ಕತ್ತ ಪೊಲೀಸರು

ಕೆಕೆ ಸಾವು: ಟಿಎಂಸಿ, ಬಿಜೆಪಿ ಆರೋಪ– ಪ್ರತ್ಯಾರೋಪ

ಕೋಲ್ಕತ್ತ(ಪಿಟಿಐ): ಬಾಲಿವುಡ್‌ನ ಖ್ಯಾತ ಗಾಯಕ ಕೃಷ್ಣಕುಮಾರ್ ಕುನ್ನತ್ (ಕೆಕೆ) ಅವರದ್ದು ಅಸಹಜ ಸಾವು ಎಂದು ಪ್ರಕರಣ ದಾಖಲಿಸಿಕೊಂಡಿರುವ ಕೋಲ್ಕತ್ತ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಆಡಳಿತಾರೂಢ ಟಿಎಂಸಿ ಹಾಗೂ ಪ್ರತಿಪಕ್ಷ ಬಿಜೆಪಿಯು ಪರಸ್ಪರ ಆರೋಪ ಪ್ರತ್ಯಾರೋಪದಲ್ಲಿ ತೊಡಗಿವೆ.

ಕೆಕೆ ಅವರದ್ದು ಅಸಹಜ ಸಾವು ಎಂದು ಕೆಕೆ ತಂಗಿದ್ದ ಹೋಟೆಲ್ ವ್ಯಾಪ್ತಿಯ ನ್ಯೂಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೆಕೆ ಇದ್ದ ಹೋಟೆಲ್‌ನ ವ್ಯವಸ್ಥಾಪಕ ಮತ್ತು ಇತರ ಸಿಬ್ಬಂದಿ ಜೊತೆಗೆ ಮಾತನಾಡಿ ಮಾಹಿತಿ ಕಲೆ ಹಾಕಲಾಗಿದೆ. ಆಸ್ಪತ್ರೆಗೆ ಕರೆದೊಯ್ಯುವ ಮೊದಲೇ ಕೆಕೆ ಅಸ್ವಸ್ಥರಾಗಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮುನ್ನ ಏನಾಯಿತು ಎಂದು ತಿಳಿಯಲು ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸುತ್ತಿದ್ದೇವೆ' ಎಂದೂ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಪಶ್ಚಿಮಬಂಗಾಳ ಸರ್ಕಾರದ ಭದ್ರತಾ ವೈಫಲ್ಯದಿಂದಾಗಿಯೇ ಈ ದುರ್ಘಟನೆ ಸಂಭವಿಸಿದೆ' ಎಂದು ಬಿಜೆಪಿ ಆರೋಪಿಸಿದ್ದು, 'ಸಾವನ್ನು ರಾಜಕೀಯಗೊಳಿಸಬೇಡಿ' ಎಂದು ಟಿಎಂಸಿ ಪ್ರತಿಕ್ರಿಯಿಸಿದೆ.

ಟಿಎಂಸಿ ತಿರುಗೇಟು: 'ಗಾಯಕನ ಸಾವು ದುರದೃಷ್ಟಕರ. ನಮಗೆಲ್ಲಾ ದುಃಖವಾಗಿದೆ. ಆದರೆ, ಬಿಜೆಪಿ ಮಾಡುತ್ತಿರುವುದು ನಿರೀಕ್ಷಿತವಲ್ಲ. ಕೇಸರಿ ಪಾಳಯವು ತನ್ನ ಕೆಟ್ಟ ರಾಜಕಾರಣವನ್ನು ನಿಲ್ಲಿಸಬೇಕು. ಕೆಕೆ ತಮ್ಮ ಪಕ್ಷದ ನಾಯಕ ಎಂದು ಬಿಜೆಪಿ ಹೇಳಿಕೊಳ್ಳಲು ಆರಂಭಿಸಿದರೆ ಆಶ್ಚರ್ಯವಿಲ್ಲ' ಎಂದು ಟಿಎಂಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕುನಾಲ್ ಘೋಷ್ ತಿರುಗೇಟು ನೀಡಿದ್ದಾರೆ.



ಕೆಕೆ ಅವರ ಭಾವಚಿತ್ರಕ್ಕೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪುಷ್ಪನಮನ ಸಲ್ಲಿಸಿದರು –ಪಿಟಿಐ ಚಿತ್ರ

ಸಾವಿಗೂ ಮುನ್ನ ನಡೆದಿದ್ದೇನು?

ಕೋಲ್ಕತ್ತದ ಎರಡು ಕಾಲೇಜುಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಲು ಬಂದಿದ್ದ ಕೃಷ್ಣಕುಮಾರ್ ಕುನ್ನತ್ (ಕೆಕೆ) ಸೋಮವಾರ ಮತ್ತು ಮಂಗಳವಾರ ಸಂಜೆ ನಜ್ರುಲ್ ಮಂಚ್ ಸಭಾಂಗಣದಲ್ಲಿ ಕಾರ್ಯಕ್ರಮ ನೀಡಿದ್ದರು.

'ಮಂಗಳವಾರ ಕಾರ್ಯಕ್ರಮದ ವೇಳೆ ಕೆಕೆ ಜತೆಗೆ ಅಭಿಮಾನಿಗಳು ಸೆಲ್ಫಿ ತೆಗೆದುಕೊಳ್ಳಲು ಮುಗಿಬಿದ್ದಿದ್ದರು. ಈ ವೇಳೆ ಒಂದಿಬ್ಬರು ಅಭಿಮಾನಿಗಳ ಜತೆಗೆ ಸೆಲ್ಫಿ ತೆಗೆಸಿಕೊಂಡಿದ್ದ ಕೆಕೆ, ನಂತರ ಸೆಲ್ಫಿಗೆ ನಿರಾಕರಿಸಿದ್ದರು. ಅಲ್ಲಿಂದ ಹೊರಟು ಅವರು ಹೋಟೆಲ್‌ಗೆ ತೆರಳಿ ಮಹಡಿ ಹತ್ತುವಾಗ ಏಕಾಏಕಿ ನೆಲದ ಮೇಲೆ ಬಿದ್ದಿದ್ದರು. ಅವರ ಹಣೆಯ ಎಡಭಾಗ ಮತ್ತು ತುಟಿಗಳ ಮೇಲೆ ಗಾಯಗಳಾಗಿವೆ. ಕೆಕೆ ಬಿದ್ದಿದ್ದುದರ ಬಗ್ಗೆ ಹೋಟೆಲ್‌ನ ಸಿಬ್ಬಂದಿ ತಿಳಿಸಿದಾಗ, ರಾತ್ರಿ 10ರ ಸುಮಾರಿಗೆ ಅವರನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ವೈದ್ಯರು ಕೆಕೆ ಮೃತಪಟ್ಟಿದ್ದಾರೆ ಎಂದು ತಿಳಿಸಿದರು' ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

'ಹೃದಯಸ್ತಂಭನದಿಂದಾಗಿ ಕೆಕೆ ಸಾವಿಗೀಡಾಗಿರಬಹುದು ಎಂದು ವೈದ್ಯರು ಶಂಕಿಸಿದ್ದು, ಶವಪರೀಕ್ಷೆಯ ವರದಿ ಬಂದ ಬಳಿಕವೇ ನಿಖರ ಕಾರಣ ತಿಳಿಯಲಿದೆ' ಎಂದೂ ಅವರು ಹೇಳಿದ್ದಾರೆ.

ಸರ್ಕಾರಿ ಗೌರವದೊಂದಿಗೆ ಅಂತಿಮ ನಮನ

ಕೆಕೆ ಅವರ ಪಾರ್ಥಿವ ಶರೀರವನ್ನು ಕೆಲಕಾಲ ಕೋಲ್ಕತ್ತದ ರವೀಂದ್ರ ಸದನದಲ್ಲಿ ಇರಿಸಲಾಗಿತ್ತು. ಪಶ್ಚಿಮ ಬಂಗಾಳ ಸರ್ಕಾರವು ಸಕಲ ಸರ್ಕಾರಿ ಗೌರವಗಳ ಮೂಲಕ ಅಂತಿಮ ನಮನ ಸಲ್ಲಿಸಿತು. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೇರಿದಂತೆ ಇತರ ಗಣ್ಯರು ಪುಷ್ಪನಮನ ಸಲ್ಲಿಸಿದರು.

'ಬಾಲಿವುಡ್ ಗಾಯಕ ಕೆಕೆ ಅವರ ಹಠಾತ್ ಮತ್ತು ಅಕಾಲಿಕ ನಿಧನವು ಆಘಾತ, ದುಃಖವನ್ನುಂಟು ಮಾಡಿದೆ. ಅವರ ಸಾವಿಗೆ ಸಂತಾಪಗಳು' ಎಂದು ಮಮತಾ ಟ್ವೀಟ್ ಮಾಡಿದ್ದಾರೆ.

ಪಾರ್ಥಿವ ಶರೀರವನ್ನು ಕೆಕೆ ಅವರ ಕುಟುಂಬಕ್ಕೆ ಒಪ್ಪಿಸಿದ ಬಳಿಕ ಮುಂಬೈಗೆ ಕೊಂಡೊಯ್ಯಲಾಯಿತು.

ಆಸನ ಸಾಮರ್ಥ್ಯಕ್ಕೂ ಹೆಚ್ಚಿದ್ದ ಪ್ರೇಕ್ಷಕರು?

'ಸಂಗೀತ ಕಾರ್ಯಕ್ರಮವಿದ್ದ ಆ ಸಭಾಂಗಣದಲ್ಲಿ 3 ಸಾವಿರ ಮಂದಿಗೆ ಮಾತ್ರ ಆಸನ ಸಾಮರ್ಥ್ಯವಿದೆ ಆದರೆ, ಅಲ್ಲಿ ಸುಮಾರು 7 ಸಾವಿರ ಜನರಿದ್ದರು ಎಂದು ವರದಿಯಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ವಕ್ತಾರ ಸಾಮಿಕ್ ಭಟ್ಟಾಚಾರ್ಯ ದೂರಿದ್ದಾರೆ. ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಅನುಪಮ್ ಹಜ್ರಾ, 'ಕಾರ್ಯಕ್ರಮದ ಆಯೋಜಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಟ್ವೀಟ್ ಮಾಡಿದ್ದಾರೆ.

'ಕೆಕೆ ಸಾವಿನ ಕುರಿತು ಸಕ್ಷಮ ಪ್ರಾಧಿಕಾರದಿಂದ ತನಿಖೆ ನಡೆಸಬೇಕು' ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ಒತ್ತಾಯಿಸಿದ್ದಾರೆ.

'ಸಭಾಂಗಣದಲ್ಲಿ ಹವಾನಿಯಂತ್ರಣ ವ್ಯವಸ್ಥೆಯು ಕಾರ್ಯನಿರ್ವಹಿಸುತ್ತಿತ್ತು. ಆದರೆ, ಅಲ್ಲಿ ಅಗಾಧ ಜನಸಂದಣಿ ಇತ್ತು' ಎಂದು ಕೋಲ್ಕತ್ತ ಮೇಯರ್ ಫಿರ್ಹಾದ್ ಹಕೀಮ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಹೊಸ ಬಾಹ್ಯಾಕಾಶ ನೀತಿ ಶೀಘ್ರ: ಅಜಯ್ ಕುಮಾರ್ ಸೂದ್

ನವದೆಹಲಿ: ಬಾಹ್ಯಾಕಾಶ ಕ್ಷೇತ್ರದಲ್ಲಿ ಖಾಸಗಿ ಸಹಭಾಗಿತ್ವವನ್ನು ಇನ್ನಷ್ಟು ಹೆಚ್ಚಿಸುವ ಉದ್ದೇಶದಿಂದ ಸರ್ಕಾರವು ಶೀಘ್ರದಲ್ಲೇ ಹೊಸ ನೀತಿ ಜಾರಿಗೊಳಿಸಲಿದೆ ಎಂದು ಪ್ರಧಾನ ವೈಜ್ಞಾನಿಕ ಸಲಹೆಗಾರ ಅಜಯ್ ಕುಮಾರ್ ಸೂದ್ ಹೇಳಿದ್ದಾರೆ.

ಹೊಸ ನೀತಿಯಿಂದಾಗಿ 'ಸ್ಪೇಸ್ ಎಕ್ಸ್' ರೀತಿಯಲ್ಲಿ ಭಾರತ ಕೂಡ ತನ್ನದೇ ಆದ ಉದ್ಯಮ ಆರಂಭಿಸಲಿದೆ ಎಂದು ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.



ಹೊಸನೀತಿ ಅಂತಿಮ ಗೊಳಿಸುವ ನಿಟ್ಟಿನಲ್ಲಿ ಸಮಾಲೋಚನೆ ನಡೆದಿದೆ ಎಂದಿರುವ ಅವರು, 'ಭೂಮಿಗೆ ಸಮೀಪದ ಕಕ್ಷೆಯಲ್ಲಿ (ಎಲ್‌ಇಒ) ಕಾರ್ಯನಿರ್ವಹಿಸಬಲ್ಲಂತಹ ಉಪಗ್ರಹಗಳನ್ನು ಹೊಸ ತಂತ್ರಜ್ಞಾನ ಬಳಸಿ ನಿರ್ಮಿಸಲಾಗುತ್ತಿದೆ. ಇವು ಕಡಿಮೆ ವೆಚ್ಚದ್ದಾಗಿವೆ. ಎಲ್‌ಇಒದಲ್ಲಿ ಈಗಾಗಲೇ ಭಾರಿ ಸಂಖ್ಯೆಯಲ್ಲಿ ಉಪಗ್ರಹಗಳಿದ್ದು, ಇವುಗಳು ಬಾಹ್ಯಾಕಾಶ ಕ್ಷೇತ್ರದಲ್ಲಿ ಬದಲಾವಣೆಗೆ ಕಾರಣವಾಗಲಿವೆ' ಎಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಕಾಲೇಜಿನ ಹುಲ್ಲುಹಾಸಿನ ಮೇಲೆ ನಮಾಜ್: ಪ್ರಾಧ್ಯಾಪಕನಿಗೆ ಕಡ್ಡಾಯ ರಜೆ

ಅಲೀಗಡ(ಉತ್ತರ ಪ್ರದೇಶ): ಕಾಲೇಜಿನ ಹುಲ್ಲುಹಾಸಿನ ಮೇಲೆ ನಮಾಜ್ ಮಾಡಿದ ಇಲ್ಲಿನ ಪ್ರಾಧ್ಯಾಪಕರೊಬ್ಬರನ್ನು ಒಂದು ತಿಂಗಳ ಕಾಲ ಕಡ್ಡಾಯ ರಜೆಯ ಮೇಲೆ ಕಳುಹಿಸಲಾಗಿದೆ. ಇವರು ನಮಾಜ್ ಮಾಡುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿತ್ತು.

ಶ್ರೀವಾರ್ಷ್ಣೇಯ ಕಾಲೇಜಿನ ಪ್ರಾಧ್ಯಾಪಕ ಎಸ್.ಆರ್. ಖಾಲಿದ್ ಎಂಬುವವರನ್ನು ರಜೆಯ ಮೇಲೆ ಕಳುಹಿಸಲಾಗಿದ್ದು, ಇವರ ವಿರುದ್ಧ ಕ್ರಮಕೈಗೊಳ್ಳುವಂತೆ ಭಾರತೀಯ ಜನತಾ ಯುವ ಮೋರ್ಚಾ (ಬಿಜೆವೈಎಂ) ಮುಖಂಡರು ಆಗ್ರಹಿಸಿದ್ದರು.

ಖಾಲಿದ್ ಅವರ ವಿರುದ್ಧ ಕುವಾರ್ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಲೇಜಿನ ಅಧಿಕಾರಿಗಳಿಂದ ವರದಿ ಪಡೆದು ಬಳಿಕ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಿಜೆಪಿ 'ತಮಿಳು ವಿರೋಧಿ': ಎಐಎಡಿಎಂಕೆ

ಚೆನ್ನೈ(ಪಿಟಿಐ): 'ಬಿಜೆಪಿಯು ತಮಿಳು ವಿರೋಧಿ'ಯಾಗಿದೆ ಎಂದು ಆರೋಪಿಸಿರುವ ಬಿಜೆಪಿಯ ಪ್ರಮುಖ ಮಿತ್ರಪಕ್ಷವಾದ ಎಐಎಡಿಎಂಕೆ, ರಾಜ್ಯದಲ್ಲಿ ಆ ಪಕ್ಷವು ಎಂದಿಗೂ ಬೆಳೆಯಲು ಸಾಧ್ಯವಿಲ್ಲ ಎಂದು ಹೇಳಿದೆ.

ಬುಧವಾರ ಇಲ್ಲಿ ಆಯೋಜಿಸಿದ್ದ ಪಕ್ಷದ ಕಾರ್ಯಕ್ರಮದಲ್ಲಿ ಮಾತನಾಡಿದ ಎಐಎಡಿಎಂಕೆ ವಕ್ತಾರ ಸಿ. ಪೊನ್ನಯ್ಯನ್, 'ಬಿಜೆಪಿ ಜತೆಗಿನ ಮೈತ್ರಿಯು ಕೇವಲ ಚುನಾವಣಾ ಹೊಂದಾಣಿಕೆಯಾಗಿದೆ. ಆ ಪಕ್ಷದ ಸಿದ್ಧಾಂತವು ಎಐಎಡಿಎಂಕೆಯ ಸಿದ್ಧಾಂತಕ್ಕೆ ಸಂಪೂರ್ಣ ವಿರುದ್ಧವಾಗಿದೆ. ನಮ್ಮ ಪಕ್ಷದ ತೀವ್ರ ವಿರೋಧದ ನಡುವೆಯೂ ಬಿಜೆಪಿಯು ನಿರಂತರವಾಗಿ ಹಿಂದಿ ಭಾಷೆಯನ್ನು ಹೇರುತ್ತಿದೆ' ಎಂದು ಆರೋಪಿಸಿದ್ದಾರೆ.

'ಬಿಜೆಪಿಯ ತಮಿಳು ಜನಾಂಗ ಮತ್ತು ಭಾಷಾ ವಿರೋಧವನ್ನು ನಾವು ಒಪ್ಪಿಕೊಳ್ಳುವುದಿಲ್ಲ. ಈ ಸಮಸ್ಯೆಗಳನ್ನು ಸೂಕ್ತವಾಗಿ ಬಗೆಹರಿಸಿಕೊಂಡಲ್ಲಿ ಮಾತ್ರ ಆ ಪಕ್ಷಕ್ಕೆ ರಾಜ್ಯದಲ್ಲಿ ಜಾಗ ಸಿಗಬಹುದು' ಎಂದು ಅಭಿಪ್ರಾಯ ಪಟ್ಟ ಅವರು, '2024ರ ಲೋಕಸಭಾ ಚುನಾವಣೆಗೆ ಬಿಜೆಪಿಯೊಂದಿಗೆ ಮೈತ್ರಿ ಮುಂದುವರಿಸುವಿರಾ' ಎನ್ನುವ ಪ್ರಶ್ನೆಗೆ 'ನನಗೆ ಗೊತ್ತಿಲ್ಲ' ಎಂದು ಉತ್ತರಿಸಿದರು.

'ಬಿಜೆಪಿಯ ಬೆಳವಣಿಗೆಯು ಎಐಎಡಿಎಂಕೆ, ರಾಜ್ಯ ಮತ್ತು ದ್ರಾವಿಡ ನೀತಿಗಳಿಗೆ ಒಳ್ಳೆಯದಲ್ಲ' ಎಂದೂ ಪೊನ್ನಯ್ಯನ್ ಹೇಳಿದ್ದಾರೆ.

'ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರಗಳ ಅವಧಿಗಿಂತಲೂ ಹೆಚ್ಚುಪಟ್ಟು ಹಿಂದಿ ಹೇರಿಕೆಯಾಗುತ್ತಿದೆ. ನಾವು ತಮಿಳು ಮತ್ತು ಇಂಗ್ಲಿಷ್‌ನ ದ್ವಿಭಾಷಾ ನೀತಿಗೆ ಬದ್ಧವಾಗಿದ್ದು, ಅದರ ಪರವಾಗಿ ದೃಢವಾಗಿ ನಿಲ್ಲುತ್ತೇವೆ. ಎಐಎಡಿಎಂಕೆಯು ತಮಿಳು ನಾಡಿನಲ್ಲಿ 'ನೀಟ್' ಪರೀಕ್ಷೆಯನ್ನು ವಿರೋಧಿಸುತ್ತದೆ. ಆದರೆ, ಬಿಜೆಪಿಯು ಪರೀಕ್ಷೆಯ ಪರವಾಗಿದೆ. ಇದು ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿರುವ ಸೀಟುಗಳನ್ನು ಕಸಿದುಕೊಳ್ಳುವ ಮೂಲಕ ಉತ್ತರ ರಾಜ್ಯಗಳ ವಿದ್ಯಾರ್ಥಿಗಳ ಪರ ವಹಿಸುವ ಮನೋಭಾವವಾಗಿದೆ' ಎಂದೂ ಅವರು ಆರೋಪಿಸಿದ್ದಾರೆ.

ರಾಮ ಮಂದಿರದ ಗರ್ಭಗುಡಿ ನಿರ್ಮಾಣಕ್ಕೆ ಶಂಕುಸ್ಥಾಪನೆ

'ರಾಮ ಮಂದಿರ ರಾಷ್ಟ್ರ ಮಂದಿರ ಆಗಲಿದೆ'

ಪ್ರಜಾವಾಣಿ ವಾರ್ತೆ

ಲಖನೌ: ಅಯೋಧ್ಯೆಯಲ್ಲಿ ನಿರ್ಮಾಣ ಹಂತದಲ್ಲಿರುವ ರಾಮ ಮಂದಿರದ ಗರ್ಭಗುಡಿ ನಿರ್ಮಾಣಕ್ಕೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಬುಧವಾರ ಶಂಕುಸ್ಥಾಪನೆ ನೆರವೇರಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಆದಿತ್ಯನಾಥ, 'ರಾಮ ಮಂದಿರವು ಜಗತ್ತಿನ ಸನಾತನ ಧರ್ಮದ ಅನುಯಾಯಿಗಳ ನಂಬಿಕೆಯ ಪ್ರತೀಕವಾಗಲಿದೆ. ರಾಮ ಮಂದಿರವು ದೇಶದ 'ರಾಷ್ಟ್ರ ಮಂದಿರ'ವಾಗಲಿದೆ' ಎಂದು ಹೇಳಿದರು.

'ಕಳೆದ ಐದು ನೂರು ವರ್ಷಗಳಲ್ಲಿ ರಾಮ ಮಂದಿರ ಚಳವಳಿಯನ್ನು ಜೀವಂತವಾಗಿಟ್ಟ ಪ್ರತಿಯೊಬ್ಬರೂ ಇಂದು ತುಂಬಾ ಸಂತೋಷವಾಗಿದ್ದಾರೆ. ಭಾರತದ ಜನರ ನಂಬಿಕೆಯ ಮೇಲೆ ದಾಳಿ ಮಾಡಿದ ಎಲ್ಲಾ ವಿದೇಶಿ ಆಕ್ರಮಣಕಾರರ ವಿರುದ್ಧದ ಗೆಲುವಾಗಿದೆ' ಎಂದು ಅವರು ಬಣ್ಣಿಸಿದರು.



ಅಯೋಧ್ಯೆಯಲ್ಲಿ ರಾಮ ಮಂದಿರದ ಗರ್ಭಗುಡಿ ನಿರ್ಮಾಣಕ್ಕೆ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಬುಧವಾರ ಶಂಕುಸ್ಥಾಪನೆ ನೆರವೇರಿಸಿದರು

ಗರ್ಭಗುಡಿ ನಿರ್ಮಾಣಕ್ಕೆ ಚಾಲನೆ ನೀಡುವ ಮುನ್ನ 'ಶಿಲಾಪೂಜೆ' ಸಮಾರಂಭ ನಡೆಯಿತು. ದೇಶದ ವಿವಿಧ ಭಾಗಗಳಿಂದ ಸುಮಾರು ನೂರು ಮಂದಿ ಸಂತರು, ಸ್ವಾಮೀಜಿಗಳು ಭಾಗವಹಿಸಿದ್ದರು.

2024ರ ಜ. 24 ರಂದು ಗರ್ಭಗುಡಿಯಲ್ಲಿ ರಾಮ ಲಲ್ಲಾ ವಿಗ್ರಹದ ಪ್ರತಿಷ್ಠಾಪನೆ ನಡೆಯಲಿದೆ ಎಂದು ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಪದಾಧಿಕಾರಿಗಳು ಹೇಳುತ್ತಾರೆ.

'ದೇವಾಲಯದ ಸಂಪೂರ್ಣ ಕಟ್ಟಡ ಸಂಕೀರ್ಣ 2025ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲಾಗುವುದು' ಎಂದು ಯೋಗಿ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಆಗಸ್ಟ್ 2020ರಲ್ಲಿ ರಾಮ ಮಂದಿರಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಹಣ ಅಕ್ರಮ ವರ್ಗಾವಣೆ: ಪಿಎಫ್‌ಐಗೆ ಸೇರಿದ ಬ್ಯಾಂಕ್ ಖಾತೆಗಳ ಮುಟ್ಟುಗೋಲು

ನವದೆಹಲಿ: ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣದಡಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಹಾಗೂ ಅದಕ್ಕೆ ಸಂಬಂಧಿಸಿದ ರಿಹಾಬ್ ಇಂಡಿಯಾ ಫೌಂಡೇಷನ್‌ಗೆ ಸೇರಿದ 33 ಬ್ಯಾಂಕ್ ಖಾತೆಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.


'ಈ ಖಾತೆಗಳಲ್ಲಿ ₹68 ಲಕ್ಷಕ್ಕೂ ಹೆಚ್ಚು ಹಣವಿದ್ದು, ಅಕ್ರಮವಾಗಿ ಹಣ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಈ ಆದೇಶ ಹೊರಡಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಿಎಫ್‌ಐಗೆ ಸೇರಿದ 23 ಖಾತೆಗಳ ₹59,12,051 ಹಾಗೂ ರಿಹಾಬ್ ಇಂಡಿಯಾ ಸಂಘಟನೆಗಳ 10 ಖಾತೆಗಳಲ್ಲಿದ್ದ ₹ 9,50,030 ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

10 ದಿನಗಳಲ್ಲೇ 'ನೀಟ್–ಪಿಜಿ' ಫಲಿತಾಂಶ ಪ್ರಕಟ

ನವದೆಹಲಿ: 'ನೀಟ್–ಪಿಜಿ 2022' ಫಲಿತಾಂಶ ಪ್ರಕಟವಾಗಿದ್ದು, ದಾಖಲೆಯ 10 ದಿನಗಳಲ್ಲೇ ಫಲಿತಾಂಶ ಪ್ರಕಟಿಸಿದ್ದಕ್ಕಾಗಿ ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ (ಎನ್‌ಬಿಇಎಂಎಸ್) ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ಮೆಚ್ಚುಗೆ ಸೂಚಿಸಿದ್ದಾರೆ.

'ನೀಟ್–ಪಿಜಿ ಫಲಿತಾಂಶ ಹೊರಬಿದ್ದಿದೆ! ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಅಭಿನಂದನೆ. ಎನ್‌ಬಿಇಎಂಎಸ್‌ನ ಶ್ಲಾಘನೀಯ ಕೆಲಸಕ್ಕಾಗಿ ಅವರನ್ನು ನಾನು ಶ್ಲಾಘಿಸುತ್ತೇನೆ' ಎಂದು ಮಾಂಡವಿಯಾ ಟ್ವೀಟ್ ಮಾಡಿದ್ದಾರೆ. ಪರೀಕ್ಷೆಯು ಮೇ 21ರಂದು 849 ಕೇಂದ್ರಗಳಲ್ಲಿ ನಡೆದಿತ್ತು. ಒಟ್ಟು 1,82,318 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.



ಮನ್ಸುಖ್ ಮಾಂಡವಿಯಾ

ಕಾಶ್ಮೀರ: ಹಿಂದೂಗಳ ಹತ್ಯೆ ಕುರಿತು 'ಸುಪ್ರೀಂ'ಗೆ ಪತ್ರ

ನವದೆಹಲಿ: 'ಕಾಶ್ಮೀರದಲ್ಲಿ ಹಿಂದೂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ನಡೆಯುತ್ತಿರುವ ಹತ್ಯೆಗಳಿಂದಾಗಿ ಕಣಿವೆಯಲ್ಲಿ ವಾಸವಿರುವ ಸಮುದಾಯದ ಜನರಲ್ಲಿ ಭಯ, ಆತಂಕ ಮತ್ತು ಅಭದ್ರತೆ ಕಾಡುತ್ತಿದೆ' ಎಂದು ವಕೀಲರೊಬ್ಬರು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ಇತರ ನ್ಯಾಯಮೂರ್ತಿಗಳಿಗೆ ಪತ್ರ ಬರೆದು ಗಮನ ಸೆಳೆದಿದ್ದಾರೆ.

ವಕೀಲ ವಿನೀತ್ ಜಿಂದಾಲ್ ಅವರು ತಾವು ಬರೆದಿರುವ ಪತ್ರದಲ್ಲಿ, 'ಕಾಶ್ಮೀರದಲ್ಲಿನ ಹಿಂದೂ ಅಲ್ಪಸಂಖ್ಯಾತರಿಗೆ ತಕ್ಷಣದಿಂದಲೇ ಸೂಕ್ತ ಭದ್ರತೆ ಒದಗಿಸಲು ಸರ್ಕಾರಕ್ಕೆ ನಿರ್ದೇಶನ ನೀಡುವಂತೆ' ಮನವಿ ಮಾಡಿದ್ದಾರೆ.

'ಕಾಶ್ಮೀರದಲ್ಲಿನ ಅಲ್ಪಸಂಖ್ಯಾತ ಸಮುದಾಯದವರ ಸುರಕ್ಷತೆ ಮತ್ತು ಭದ್ರತೆ ಖಚಿತಪಡಿಸಬೇಕಿದೆ. ಇದಕ್ಕೆ ಅಗತ್ಯವಿರುವ ವ್ಯವಸ್ಥೆ ರಚಿಸಲು ಮತ್ತು ನಿರ್ವಹಿಸಲು ವಿಶೇಷ ಘಟಕವನ್ನು ಸ್ಥಾಪಿಸಲುಸೂಚಿಸುವಂತೆ'ಕೋರಿದ್ದಾರೆ.

'ಇತ್ತೀಚೆಗೆ ನಡೆದ ಹಿಂದೂ ಅಲ್ಪಸಂಖ್ಯಾತರ ಹತ್ಯೆಗಳ ಕುರಿತು ರಾಷ್ಟ್ರೀಯ ಭದ್ರತಾ ಏಜೆನ್ಸಿಯಿಂದ ತನಿಖೆ ನಡೆಸಬೇಕು. ಈ ಹತ್ಯೆಗಳ ಸಂತ್ರಸ್ತರ ಕುಟುಂಬಕ್ಕೆ ₹ 1 ಕೋಟಿ ಪರಿಹಾರ ಮತ್ತು ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ ನೀಡಲು ನಿರ್ದೇಶಿಸಬೇಕು' ಎಂದು ಮನವಿ ಮಾಡಿದ್ದಾರೆ.

ಕುಲ್ಗಾಮ್‌ನ ಶಾಲೆಯಲ್ಲಿ ಮಂಗಳವಾರ ನಡೆದ ಶಿಕ್ಷಕಿ ರಜನಿ ಬಾಲಾ ಅವರ ಹತ್ಯೆಯನ್ನು ಪತ್ರದಲ್ಲಿ ಉಲ್ಲೇಖಿಸಿರುವ ವಕೀಲರು, 'ಇದು ಕಾಶ್ಮೀರದಲ್ಲಿ ಹಿಂದೂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ನಡೆದ ಏಳನೇ ಕೊಲೆ. ಇದಕ್ಕೂ ಮುನ್ನ ಉಗ್ರರು ಮೂವರು ಪೊಲೀಸರು ಮತ್ತು ಮೂವರು ನಾಗರಿಕರನ್ನು ಕೊಂದಿದ್ದರು' ಎಂದು ತಿಳಿಸಿದ್ದಾರೆ.

'ಕಾಶ್ಮೀರದಲ್ಲಿ ನಡೆದ ಅಲ್ಪಸಂಖ್ಯಾತರ ಹತ್ಯೆಗಳ ಬಗ್ಗೆ ಸ್ವಯಂಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಳ್ಳುವಂತೆ 2021ರ ಅ. 9ರಂದು ಸಲ್ಲಿಸಿದ್ದ ಅರ್ಜಿಯನ್ನು ಇಲ್ಲಿಯವರೆಗೆ ಗಂಭೀರವಾಗಿ ಪರಿಗಣಿಸದ ಕಾರಣ ಆ ಪರಿಸ್ಥಿತಿ ಇನ್ನೂ ಮುಂದುವರಿದಿದೆ' ಎಂದೂ ವಿನೀತ್ ಹೇಳಿದ್ದಾರೆ.

'ಕಾಶ್ಮೀರಿ ಪಂಡಿತರು ಧರಣಿ ನಡೆಸುತ್ತಿದ್ದರೆ, ಬಿಜೆಪಿ ಸಂಭ್ರಮಾಚರಣೆಯಲ್ಲಿದೆ'

ನವದೆಹಲಿ(ಪಿಟಿಐ): 'ಕಾಶ್ಮೀರಿ ಪಂಡಿತರು ಪ್ರತಿಭಟನೆ ನಡೆಸುತ್ತಿದ್ದರೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ತನ್ನ ಎಂಟು ವರ್ಷಗಳ ಸಂಭ್ರಮಾಚರಣೆಯಲ್ಲಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ವಾಗ್ದಾಳಿ ನಡೆಸಿದ್ದಾರೆ.

'18 ದಿನಗಳಿಂದ ಕಾಶ್ಮೀರಿ ಪಂಡಿತರು ಧರಣಿ ಕುಳಿತಿದ್ದಾರೆ. ಆದರೆ ಬಿಜೆಪಿ 8 ವರ್ಷಗಳ ಸಂಭ್ರಮಾಚರಣೆಯಲ್ಲಿ ನಿರತವಾಗಿದೆ. ಪ್ರಧಾನಿ ಅವರೇ, ಇದು ಸಿನಿಮಾವಲ್ಲ. ಇದು ಇಂದಿನ ಕಾಶ್ಮೀರದ ಸತ್ಯ. ಐದು ತಿಂಗಳ ಅವಧಿಯಲ್ಲಿ ಕಾಶ್ಮೀರದಲ್ಲಿ 15 ಭದ್ರತಾ ಸಿಬ್ಬಂದಿ ಹುತಾತ್ಮರಾಗಿದ್ದು, 18 ನಾಗರಿಕರು ಸಾವಿಗೀಡಾಗಿದ್ದಾರೆ. ಮಂಗಳವಾರವೂ ಶಿಕ್ಷಕಿಯೊಬ್ಬರನ್ನು ಹತ್ಯೆ ಮಾಡಲಾಗಿದೆ' ' ಎಂದು ರಾಹುಲ್ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ

'ಉಕ್ರೇನಿಗೆ ಮಧ್ಯಮ ಶ್ರೇಣಿಯ ರಾಕೆಟ್ ವ್ಯವಸ್ಥೆ ರವಾನೆ'

ವಾಷಿಂಗ್ಟನ್ (ಎಪಿ): ಉಕ್ರೇನಿಗೆ ಅತ್ಯಾಧುನಿಕ ಮಧ್ಯಮ ಶ್ರೇಣಿಯ ರಾಕೆಟ್ ವ್ಯವಸ್ಥೆಗಳನ್ನು ಕಳುಹಿಸಿಕೊಡುವುದಾಗಿ ಅಮೆರಿಕ ತಿಳಿಸಿದೆ.

ಡಾನ್‌ಬಾಸ್ ಪ್ರದೇಶದಲ್ಲಿ ರಷ್ಯಾಗೆ ಪ್ರತಿರೋಧ ನೀಡಲು ಪ್ರಬಲ ಶಸ್ತ್ರಾಸ್ತ್ರಗಳ ಅಗತ್ಯವಿದೆ ಎಂದು ಉಕ್ರೇನ್ ಬೇಡಿಕೆ ಇಟ್ಟ ಹಿನ್ನೆಲೆಯಲ್ಲಿ ಅಲ್ಪ ಪ್ರಮಾಣದ ರಾಕೆಟ್ ವ್ಯವಸ್ಥೆ ರವಾನೆಗೆ ಅಮೆರಿಕ ನಿರ್ಧರಿಸಿದೆ.

ರಷ್ಯಾ ವಿರುದ್ಧದ ಹೋರಾಟಕ್ಕೆ ಉಕ್ರೇನಿಗೆ ಒದಗಿಸಲಾಗುತ್ತಿರುವ 5,420 ಕೋಟಿ ರೂಪಾಯಿ (700 ಮಿಲಿಯನ್ ಡಾಲರ್) ಸೇನಾ ನೆರವಿನ ಭಾಗವಾಗಿ ರಾಕೆಟ್ ವ್ಯವಸ್ಥೆ, ಹೆಲಿಕಾಪ್ಟರ್, ಯುದ್ಧತಂತ್ರದ ವಾಹನಗಳನ್ನು ರವಾನಿಸಲಾಗುತ್ತಿದೆ ಎಂದು ಸರ್ಕಾರದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ಸಂಗೀತ: ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೆನ್ನೈನಲ್ಲಿರುವ 'ದಿ ಮ್ಯೂಸಿಕ್ ಅಕಾಡೆಮಿ ಮದ್ರಾಸ್' ಸಂಸ್ಥೆಯು ಕರ್ನಾಟಕ ಸಂಗೀತದಲ್ಲಿ (ಗಾಯನ) ಅಡ್ವಾನ್ಸಡ್ ಡಿಪ್ಲೊಮಾ ಕೋರ್ಸ್‌ನ ಮೊದಲ ವರ್ಷಕ್ಕೆ ಪ್ರವೇಶ ಪ್ರಕ್ರಿಯೆ ಆರಂಭಿಸಿದೆ. ಇದು 3 ವರ್ಷಗಳ ಅವಧಿಯ ಕೋರ್ಸ್ ಆಗಿದ್ದು, ಪ್ರತಿ ವರ್ಷ ಎರಡು ಸೆಮಿಸ್ಟರ್ ಒಳಗೊಂಡಿರುತ್ತದೆ. ವಾರಕ್ಕೆ ಐದು ದಿನಗಳು (ಸೋಮವಾರದಿಂದ ಶುಕ್ರವಾರ) ಬೆಳಿಗ್ಗೆ 8ರಿಂದ ಮಧ್ಯಾಹ್ನ 12.30ರವರೆಗೆ ತರಗತಿಗಳು ನಡೆಯಲಿವೆ.

ಅರ್ಹತೆ: ಅರ್ಜಿದಾರರು 12ನೇ ತರಗತಿ ಉತ್ತೀರ್ಣರಾಗಿರಬೇಕು. 18ರಿಂದ 30 ವರ್ಷದೊಳಗಿರಬೇಕು. ವರ್ಣ, ಕೃತಿಗಳನ್ನು ಹಾಡುವ ಸಾಮರ್ಥ್ಯ ಹೊಂದಿರಬೇಕು. ಅರ್ಜಿದಾರರು ತಾವು ಪಡೆದಿರುವ ಸಂಗೀತ ತರಬೇತಿಯ ಮಾಹಿತಿಯೊಂದಿಗೆ ತಮ್ಮ ವ್ಯಕ್ತಿತ್ವ ವಿವರವನ್ನು ಇ–ಮೇಲ್ ಮೂಲಕ ಕಳುಹಿಸಬೇಕು.

ಇ–ಮೇಲ್ ವಿಳಾಸ: music@musicacademymadras.com; ritharajan@gmail.com; soomty@gmail.com. ಅರ್ಜಿಗಳನ್ನು ಪರಿಶೀಲಿಸಿ, ಸಂದರ್ಶನ ನಡೆಸಿ, ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 044 28112231 / 28115162.

ಸಂಕ್ಷಿಪ್ತ ಸುದ್ದಿ

ಶ್ರೀಲಂಕಾ ಹಿಂಸಾಚಾರ: ಶಂಕಿತ ಪಟ್ಟಿಯಲ್ಲಿ ಮಾಜಿ ಸಚಿವನ ಹೆಸರು

ಕೊಲಂಬೊ (ಪಿಟಿಐ): ಕಳೆದ ತಿಂಗಳು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಮಾರಣಾಂತಿಕ ದಾಳಿ ನಡೆಸಲಾದ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಪ್ರಧಾನಿ ಮಹಿಂದ ರಾಜಪಕ್ಸ ಅವರ ಪ್ರಮುಖ ಮಿತ್ರ ಪಕ್ಷದ ಮಾಜಿ ಸಚಿವರೊಬ್ಬರು ಶಂಕಿತ ಎಂದು ಹೆಸರಿಸಲಾಗಿದೆ. ಹಿಂಸಾಚಾರದ ತನಿಖೆ ನಡೆಸಲು ಅಧ್ಯಕ್ಷ ಗೋಟಬಯ ರಾಜಪಕ್ಸ ಅವರು ತನಿಖಾ ಆಯೋಗವನ್ನು ನೇಮಿಸಿದ್ದಾರೆ.

ಪ್ರತಿಭಟನಕಾರರ ಮೇಲೆ ದಾಳಿ ನಡೆಯುವ ಮೊದಲು ಮಹಿಂದ ರಾಜಪಕ್ಸ ಬೆಂಬಲಿಗರನ್ನು ಉದ್ದೇಶಿಸಿ ಪ್ರಚೋದನಕಾರಿ ಭಾಷಣ ಮಾಡಿದ ಮಾಜಿ ಸಚಿವ ಜಾನ್ಸ್‌ಟನ್ ಫರ್ನಾಂಡೋ ಅವರನ್ನು ಶಂಕಿತ ಎಂದು ಹೆಸರಿಸಲಾಗಿದೆ.

ಶ್ರೀಲಂಕಾ: ಸಂವಿಧಾನ ತಿದ್ದುಪಡಿಗೆ ವಿರೋಧ

ಕೊಲಂಬೊ (ಪಿಟಿಐ): ಅಧ್ಯಕ್ಷರ ಅಧಿಕಾರವನ್ನು ಮೊಟಕುಗೊಳಿಸಿ, ಆಡಳಿತದಲ್ಲಿ ಸಂಸತ್ತಿನ ಪಾತ್ರವನ್ನು ಹೆಚ್ಚಿಸಲು ಅನುವು ಮಾಡಿಕೊಡುವ ಸಂವಿಧಾನದ 21ನೇ ತಿದ್ದುಪಡಿಗೆ ಮೈತ್ರಿಕೂಟದ ಕೆಲ ಅಂಗಪಕ್ಷಗಳಿಂದಲೇ ವಿರೋಧ ವ್ಯಕ್ತವಾಗಿದೆ.

ದೇಶವನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡಲು ನೆರವಾಗಲಿರುವ ಈ ತಿದ್ದುಪಡಿ ಮಸೂದೆಯನ್ನು ಸಂಸತ್‌ನಲ್ಲಿ ಮಂಡಿಸಬೇಕು ಎಂಬ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರ ಪ್ರಯತ್ನಕ್ಕೆ ಆರಂಭದಲ್ಲಿಯೇ ಪ್ರತಿರೋಧ ವ್ಯಕ್ತವಾಗಿದೆ ಎಂದು ಮೂಲಗಳು ಬುಧವಾರ ಹೇಳಿವೆ.

ರಾಜಪಕ್ಸ ಕುಟುಂಬಗಳಿಗೆ ನಿಷ್ಠರಿಂದಲೇ ಉದ್ದೇಶಿತ ತಿದ್ದುಪಡಿಗೆ ಪ್ರತಿರೋಧ ವ್ಯಕ್ತವಾಗಿದೆ. ಅದರಲ್ಲೂ, ಮಾಜಿ ಹಣಕಾಸು ಸಚಿವ ಬಸಿಲ್ ರಾಜಪಕ್ಸ ಬೆಂಬಲಿಗರು ಈ ನಡೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಚೀನಾಭೂಕಂಪ: ನಾಲ್ವರ ಸಾವು

ಬೀಜಿಂಗ್/ಚೆಂಗ್ಡು (ಪಿಟಿಐ): ನೈರುತ್ಯ ಚೀನಾದ ಸಿಚುವಾನ್ ಪ್ರಾಂತ್ಯದ ಯಾನ್‌ನಲ್ಲಿ ಬುಧವಾರ ಮಧ್ಯಾಹ್ನ 6.1 ತೀವ್ರತೆಯ ಭೂಕಂಪ ಸಂಭವಿಸಿದ್ದು ನಾಲ್ವರು ಸಾವನ್ನಪ್ಪಿದ್ದಾರೆ. 14 ಮಂದಿಗೆ ಗಾಯಗಳಾಗಿವೆ ಎಂದು ಸರ್ಕಾರಿ ಸ್ವಾಮ್ಯದ ಪೀಪಲ್ಸ್ ಡೈರಿ ವರದಿ ಮಾಡಿದೆ.

ಸ್ಥಳೀಯ ಕಾಲಮಾನದ ಪ್ರಕಾರ ಸಂಜೆ 5 ಗಂಟೆಗೆ ಯಾನ್‌ನ ಲುಶನ್‌ಕೌಂಟಿಯಲ್ಲಿ ಭೂಕಂಪ ಸಂಭವಿಸಿದೆ ಎಂದು ಚೀನಾದ ಅರ್ಥ್‌ಕ್ವೇಕ್ ನೆಟ್‌ವರ್ಕ್ ಸೆಂಟರ್ (ಸಿಇಎನ್‌ಸಿ) ತಿಳಿಸಿದೆ.

ಸ್ವತಂತ್ರ ತನಿಖೆಗೆ ವಿಶ್ವಸಂಸ್ಥೆಯ ನೆರವು ಕೋರಿದ ಇಮ್ರಾನ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ್ ತೆಹ್ರೀಕ್–ಇ–ಇನ್ಸಾಫ್ (ಪಿಟಿಐ) ಪಕ್ಷವು ನಡೆಸಿದ ಪ್ರತಿಭಟನೆ ಸಂದರ್ಭದಲ್ಲಿ ಸರ್ಕಾರ ಆಕ್ರಮಣಕಾರಿಯಾಗಿ ವರ್ತಿಸಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದೆ. ಈ ಕುರಿತು ಸ್ವತಂತ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಲು ಸಹಾಯ ಮಾಡಬೇಕು ಎಂದು ವಿಶ್ವಸಂಸ್ಥೆಯನ್ನು (ಯುಎನ್) ಮಾಜಿ ಪ್ರಧಾನಿ ಇಮ್ರಾನ್ ಖಾನ್ ಒತ್ತಾಯಿಸಿದ್ದಾರೆ.

ಚುನಾವಣೆಗಳನ್ನು ಘೋಷಿಸುವಂತೆ ಒತ್ತಾಯಿಸಿ ಇಮ್ರಾನ್ ಖಾನ್ ಅವರ ಬೆಂಬಲಿಗರು ಮೇ 25 ರಂದು ಇಸ್ಲಾಮಾಬಾದ್‌ನಲ್ಲಿ ಪ್ರತಿಭಟನೆ ನಡೆಸಿದ್ದರು. ಅದು ಹಿಂಸಾತ್ಮಕ ರೂಪ ಪಡೆದಿತ್ತು. ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಅಶ್ರುವಾಯು ಮತ್ತು ಲಾಠಿ ಚಾರ್ಜ್ ನಡೆಸಿದ್ದರು.

ನಾರ್ವೆ ಚೆಸ್: ಆನಂದ್‌ಗೆ ಜಯ


ಆನಂದ್

ಸ್ಟಾವೆಂಜರ್, ನಾರ್ವೆ (ಪಿಟಿಐ): ಭಾರತದ ವಿಶ್ವನಾಥನ್ ಆನಂದ್ ನಾರ್ವೆ ಚೆಸ್ ಟೂರ್ನಿಯ ಕ್ಲಾಸಿಕಲ್ ವಿಭಾಗದಲ್ಲಿ ಮ್ಯಾಕ್ಸಿಮ್ ವ್ಯಾಚಿರ್ ಲ್ಯಾಗ್ರೇವ್ ಅವರನ್ನು ಸೋಲಿಸಿದರು.

ಮೊದಲ ಸುತ್ತಿನ ಪಂದ್ಯದಲ್ಲಿ ಆನಂದ್ 40 ನಡೆಗಳಲ್ಲಿ ಫ್ರಾನ್ಸ್ ಆಟಗಾರನನ್ನು ಮಣಿಸಿದರು. ಈ ಮೂಲಕ ಮೂರು ಪಾಯಿಂಟ್ಸ್ ಕಲೆಹಾಕಿದರು. ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಅಮೆರಿಕದ ವೆಸ್ಲಿ ಸೊ ಅಜರ್‌ಬೈಜಾನ್‌ನ ತೈಮೂರ್ ರಜ್‌ದಬೊವ್ ಎದುರು ಜಯಿಸಿದರೆ, ವಿಶ್ವ ಚಾಂಪಿಯನ್ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಚೀನಾದ ವಾಂಗ್ ಹ್ಯಾಡ್ ಜೊತೆಗೆ ಡ್ರಾ ಸಾಧಿಸಿದರು.

ಖೇಲೊ ಇಂಡಿಯಾ ಯೂತ್ ಗೇಮ್ಸ್: ರಾಜ್ಯ ಸೈಕ್ಲಿಂಗ್ ತಂಡ ಸಿದ್ಧ

ಬೆಂಗಳೂರು: ಹರಿಯಾಣದ ಪಂಚಕುಲಾದಲ್ಲಿ ಇದೇ 4ರಿಂದ 13ರವರೆಗೆ ನಡೆಯಲಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಸ್ಪರ್ಧಿಸುವ ಕರ್ನಾಟಕ ರಾಜ್ಯದ ತಂಡಗಳನ್ನು ಆಯ್ಕೆ ಮಾಡಲಾಗಿದೆ.

ಬಾಲಕರ ತಂಡದಲ್ಲಿ ನಾಲ್ವರು ಮತ್ತು ಬಾಲಕಿಯರ ತಂಡದಲ್ಲಿ ಐವರು ಸ್ಥಾನ ಪಡೆದಿದ್ದಾರೆ.

ಕರ್ನಾಟಕ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯ ಕಾರ್ಯದರ್ಶಿ ಶ್ರೀಶೈಲ ಕುರಣಿ ಬುಧವಾರ ಪ್ರಕಟಿಸಿರುವ ತಂಡಗಳು; ಬಾಲಕರು: ಮಲ್ಲಿಕಾರ್ಜುನ ಯಾದವಾಡ್, ಸಂಪತ್ ಪಾಸ್ಮೆಲ್, ಪ್ರತಾಪ್ ಪಡಚಿ (ಬಾಗಲಕೋಟೆ ಜಿಲ್ಲೆ), ಲಾಯಪ್ಪ ಮುಧೋಳ (ವಿಜಯಪುರ ಜಿಲ್ಲೆ) ಬಾಲಕಿಯರು: ಅಂಕಿತಾ ರಾಠೋಡ (ವಿಜಯಪುರ ಜಿಲ್ಲೆ), ಚೈತ್ರಾ ಬೋರ್ಜಿ, ಭಾವನಾ ಪಾಟೀಲ, ಸವಿತಾ ಅಡಗಲ್ (ಬಾಗಲಕೋಟೆ ಜಿಲ್ಲೆ), ಗಂಗಾ ದಂಡಿನ್ (ಕ್ರೀಡಾ ನಿಲಯ, ವಿಜಯಪುರ). ಅಲ್ಕಾ ಫಡತಾರೆ (ಮ್ಯಾನೇಜರ್), ವಿಠಲ್ ಬೋರ್ಜಿ (ತರಬೇತುದಾರ)

ಜೊಕೊ ಸವಾಲ್ ಮೀರಿದ ನಡಾಲ್

ಫ್ರೆಂಚ್ ಓಪನ್ ಟೆನಿಸ್: ಮಹಿಳೆಯರ ಸಿಂಗಲ್ಸ್ ಸೆಮಿಗೆ ಸ್ವೆಟೆಕ್, ದರಿಯಾ

ಪ್ಯಾರಿಸ್ (ಎಪಿ): ಆವೆಮಣ್ಣಿನ ಅಂಕಣದಲ್ಲಿ ರಫೆಲ್ ನಡಾಲ್ ಮತ್ತೊಮ್ಮೆ ತಮ್ಮ ಪ್ರತಾಪ ಮೆರೆದರು.

ರೋಲ್ಯಾಂಡ್ ಗ್ಯಾರೊಸ್ ಕೋರ್ಟ್‌ನಲ್ಲಿ ಮೇ 31ರ ರಾತ್ರಿ ಆರಂಭವಾಗಿ ಜೂನ್ 1ರ ಬೆಳಗಿನ ಜಾವದಲ್ಲಿ ಮುಗಿದ ಎಂಟರ ಘಟ್ಟದ ಪಂದ್ಯದಲ್ಲಿ ಸ್ಪೇನ್ ಆಟಗಾರ ನಡಾಲ್ 6-2, 4-6, 6-2, 7-6 (4) ರಿಂದ ಹಾಲಿ ಚಾಂಪಿಯನ್ ನೊವಾಕ್ ಜೊಕೊವಿಚ್ ವಿರುದ್ಧ ಜಯಿಸಿದರು. ಸೆಮಿಫೈನಲ್ ಪ್ರವೇಶಿಸಿದ ನಡಾಲ್ 22ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯದತ್ತ ಚಿತ್ತ ನೆಟ್ಟಿದ್ದಾರೆ.

‘ನಾ ಕಂಡ ಕೆಲವು ಮಾಂತ್ರಿಕ ರಾತ್ರಿಗಳಲ್ಲಿ ಇದೂ ಒಂದಾಗಿದೆ’ ಎಂದು ಪಂದ್ಯ ಜಯಿಸಿದ ನಂತರ ನಡಾಲ್ ಹೇಳಿದರು.

ನಡಾಲ್ ಇದೇ ಶುಕ್ರವಾರ 36ನೇ ವಸಂತಕ್ಕೆ ಕಾಲಿಡಲಿದ್ದಾರೆ. ಅದೇ ದಿನ ನಡೆಯಲಿರುವ ಸೆಮಿಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವೆರೆವ್ ಅವರನ್ನು ಎದುರಿಸಲಿದ್ದಾರೆ.

ಇಲ್ಲಿ ನಾಲ್ಕು ಗಂಟೆಗಳ ಹೋರಾಟದಲ್ಲಿ ಜಯ ಸಾಧಿಸಿದರು. ಉಭಯ ಆಟಗಾರರ ನಡುವಣ ತುರುಸಿನ ಪೈಪೋಟಿಯಿಂದಾಗಿ ಪಂದ್ಯವು ಫೈನಲ್‌ನಂತೆಯೇ ಭಾಸವಾಯಿತು.

ಮುಖ್ಯಾಂಶಗಳು
- ದಿಗ್ಗಜ ಆಟಗಾರರ ನಾಲ್ಕು ತಾಸುಗಳ ಹಣಾಹಣಿ
- ಟೈಬ್ರೇಕರ್‌ನಲ್ಲಿ ಜಯಿಸಿದ ರಫೆಲ್ ನಡಾಲ್
- ಫ್ರೆಂಚ್ ಓಪನ್‌ನಲ್ಲಿ ನಡಾಲ್ ಎದುರು ಜೊಕೊಗೆ ಎಂಟನೇ ಸೋಲು

ಎಂಟರ ಘಟ್ಟದ ಮೊದಲ ಸೆಟ್‌ನಲ್ಲಿ ನಿರಾಯಾಸವಾಗಿ ಗೆದ್ದ ನಡಾಲ್ ಎರಡನೇ ಸೆಟ್‌ನಲ್ಲಿಯೂ 3–0 ಗೇಮ್‌ಗಳ ಮುನ್ನಡೆ ಸಾಧಿಸಿದರು. ಆದರೆ, ಅಗ್ರಶ್ರೇಯಾಂಕದ ಆಟಗಾರ, ಸರ್ಬಿಯಾದ ಜೊಕೊವಿಚ್ ತಿರುಗೇಟು ನೀಡಿದರು.

‘ಎರಡನೇ ಸೆಟ್‌ನಲ್ಲಿ ಗೆದ್ದಾಗ ಹಳಿಗೆ ಮರಳಿದೆ ಎಂದುಕೊಂಡೆ. ಮುಂದಿನ ಸೆಟ್‌ಗಳಲ್ಲಿ ಸುಲಭ ಜಯ ಸಾಧಿಸುವ ವಿಶ್ವಾಸ ಮೂಡಿತ್ತು. ಆದರೆ, ಒಬ್ಬ ಶ್ರೇಷ್ಠ ಆಟಗಾರನ ಎದುರು ಪರಾಭವಗೊಂಡೆ. ಅದ್ಭುತ ಆಟವಾಡಿದರು’ ಎಂದು ನೊವಾಕ್ ಹೇಳಿದರು.

ಉಭಯ ಆಟಗಾರರು ಗ್ರ್ಯಾನ್‌ಸ್ಲಾಮ್ ಓಪನ್ ಟೂರ್ನಿಗಳಲ್ಲಿ 59ನೇ ಬಾರಿ ಮುಖಾಮುಖಿಯಾದರು.



ರಫೆಲ್ ನಡಾಲ್ ರಿಟರ್ನ್ ಹೊಡೆತದ ಸೊಬಗು –ಎಎಫ್‌ಪಿ ಚಿತ್ರ


ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ನಿರಾಶೆ ಅನುಭವಿಸಿ ಹೊರಬಿದ್ದ ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ನಡಾಲ್ 29ನೇ ಬಾರಿ ಜಯಿಸಿದರು. ಫ್ರೆಂಚ್ ಓಪನ್ ಟೂರ್ನಿಯಲ್ಲಿ ನಡಾಲ್ 8–2ರಿಂದ ನೊವಾಕ್ ಎದುರು ಮುನ್ನಡೆ ಸಾಧಿಸಿದರು.

ಸೆಮಿಗೆ ಸ್ವೆಟೆಕ್, ದರಿಯಾ: ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಪೋಲೆಂಡ್‌ನ ಇಗಾ ಸ್ವೆಟೆಕ್ ಮತ್ತು ರಷ್ಯಾದ ದರಿಯಾ ಕಸ್ತಕಿನಾ ಮಹಿಳಾ ಸಿಂಗಲ್ಸ್ ವಿಭಾಗದ ನಾಲ್ಕರ ಘಟ್ಟ ತಲುಪಿದರು.

ಎಂಟರಘಟ್ಟದ ಪಂದ್ಯಗಳಲ್ಲಿ ಬುಧವಾರ ಇಗಾ ಸ್ವೆಟೆಕ್ 6-3, 6-2ರಿಂದ ಅಮೆರಿಕದ ಜೆಸಿಕಾ ಪೆಗುಲಾ ಅವರನ್ನು ಸೋಲಿಸಿದರೆ, ದರಿಯಾ 6-4, 7-6 (7/5)ರಿಂದ ವೆರೊನಿಕಾ ಕುದರ್ಮೆಟೊವಾ ಎದುರು ಜಯಿಸಿದರು.

ಇಂದಿನ ಪಂದ್ಯಗಳು

ಮಹಿಳಾ ಸಿಂಗಲ್ಸ್ ಸೆಮಿಫೈನಲ್ಸ್

ಇಗಾ ಸ್ವೆಟೆಕ್ (ಪೋಲೆಂಡ್)– ದರಿಯಾ ಕಸತ್ಕಿನಾ (ರಷ್ಯಾ)
ಆರಂಭ: ಸಂಜೆ ***6.30***

ಕೊಕೊ ಗಫ್ (ಅಮೆರಿಕ)– ಮಾರ್ಟಿನಾ ಟ್ರೆವಿಸನ್ (ಇಟಲಿ)
ಆರಂಭ: ರಾತ್ರಿ ***7.45***

ಪುರುಷರ ಡಬಲ್ಸ್ ಸೆಮಿ

ರೋಹನ್ ಬೋಪಣ್ಣ– ಮ್ಯಾಟ್‌ವೆ ಮಿಡಲ್‌ಕೂಪ್
ಜೀನ್ ಜೂಲಿಯನ್ ರೋಜರ್– ಮಾರ್ಸೆಲೊ ಅರೆವಾಲೊ
ಆರಂಭ: ಮಧ್ಯಾಹ್ನ ***3.30***

ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಲೆಗೊ ಸ್ವಾದ ಶೇ 40ರಷ್ಟು ಷೇರು ರಿಲಯನ್ಸ್‌ಗೆ

ನವದೆಹಲಿ (ಪಿಟಿಐ): ಆಟಿಕೆಗಳನ್ನು ತಯಾರಿಸುವ ಇಟಲಿಯ ಪ್ಲಾಸ್ಟಿಕ್ ಲೆಗೊ ಕಂಪನಿಯ ಭಾರತದ ವಹಿವಾಟಿನಲ್ಲಿ ಶೇ 40ರಷ್ಟು ಷೇರುಗಳನ್ನು ಖರೀದಿಸುವುದಾಗಿ ರಿಲಯನ್ಸ್ ಬ್ರ್ಯಾಂಡ್ಸ್ ಲಿಮಿಟೆಡ್ (ಆರ್‌ಬಿಎಲ್) ಬುಧವಾರ ತಿಳಿಸಿದೆ.

ದೇಶದಲ್ಲಿ ಆಟಿಕೆಗಳ ತಯಾರಿಕೆಯನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಅದು ತಿಳಿಸಿದೆ. ಆದರೆ ಖರೀದಿ ಮೊತ್ತವನ್ನು ಬಹಿರಂಗಪಡಿಸಿಲ್ಲ.

25 ವರ್ಷಗಳಿಗೂ ಹೆಚ್ಚಿನ ಸಮಯದಿಂದ ಪ್ಲಾಸ್ಟಿಕ್ ಲೆಗೊ ಸ್ವಾ ಕಂಪನಿಯು ಆಟಿಕೆಗಳನ್ನು ತಯಾರಿಸುತ್ತಿದೆ.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) **₹326-623**
ದ್ವಿತಳಿ (ಬಿ.ವಿ) **₹509-833**

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 **₹171**
ಆರ್‌ಎಸ್‌ಎಸ್-5 **₹164**
ಗುಡ್ ಲಾಟ್ **₹158**
(ಪ್ರತಿ ಕೆ.ಜಿಗೆ)


ಚಿನ್ನದ ದರ ₹ 353 ಇಳಿಕೆ

ನವದೆಹಲಿ (ಪಿಟಿಐ): ಚಿನ್ನದ ದರ ಬುಧವಾರ 10 ಗ್ರಾಂ ₹ 353ರಷ್ಟು ಇಳಿಕೆ ಆಗಿ ₹ 50,509ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 123 ಕಡಿಮೆ ಆಗಿ ₹ 60,834ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಹಾಗೂ ರೂಪಾಯಿ ಮೌಲ್ಯ ಹೆಚ್ಚಳ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,584
ಇಂದಿನ ಅಂತ್ಯ	16,522
▼	62
ದಿನದ ಕನಿಷ್ಠ	16,438

ವಿನಿಮಯ ದರ

$ ಡಾಲರ್	77.50
£ ಪೌಂಡ್	97.65
€ ಯುರೊ	83.16
¥ ಯೆನ್ (100ಕ್ಕೆ)	60

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹495
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹497

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1630)
ಸೋಯಾ (ರಿಫೈನ್ಡ್)	₹1500 (1510)
ಸೂರ್ಯಕಾಂತಿ (ರಿಫೈನ್ಡ್)	₹1800 (1810)
ಪಾಮೋಲಿನ್	₹1480 (1490)

ಸಂಕ್ಷಿಪ್ತ ಸುದ್ದಿ

ರೂಪಾಯಿ ಮೌಲ್ಯ 21 ಪೈಸೆ ಹೆಚ್ಚಳ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಬುಧವಾರ ಕನಿಷ್ಠ ಮಟ್ಟದಿಂದ ಹೊರಬಂದು ಚೇತರಿಕೆ ಕಂಡುಕೊಂಡಿತು. ಅಮೆರಿಕದ ಡಾಲರ್ ಎದುರು 21 ಪೈಸೆ ಏರಿಕೆ ಕಂಡು, ಒಂದು ಡಾಲರ್‌ಗೆ ₹ 77.50ಕ್ಕೆ ತಲುಪಿತು.

ಮಂಗಳವಾರದ ವಹಿವಾಟಿನಲ್ಲಿ 17 ಪೈಸೆ ಇಳಿಕೆ ಆಗಿ, ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹ 77.71ಕ್ಕೆ ತಲುಪಿತ್ತು.

ಕೆಲವು ಬ್ಯಾಂಕ್‌ಗಳು ಡಾಲರ್ ಮಾರಾಟ ಮಾಡಿರುವುದು ಹಾಗೂ ವಿದೇಶಿ ಬಂಡವಾಳ ಹೊರಹರಿವು ಮುಂದುವರಿದಿರುವ ಕಾರಣಗಳಿಂದಾಗಿ ರೂಪಾಯಿ ಮೌಲ್ಯ ಚೇತರಿಕೆ ಕಂಡುಕೊಂಡಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವಿಮಾನ ಇಂಧನ ದರ ಶೇ 1.3 ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಿಮಾನ ಇಂಧನ (ಜೆಟ್ ಇಂಧನ) ದರವನ್ನು ಬುಧವಾರ ಶೇ 1.3ರಷ್ಟು ಕಡಿಮೆ ಮಾಡಿವೆ.

ಇದರಿಂದಾಗಿ ದೆಹಲಿಯಲ್ಲಿ ವಿಮಾನ ಇಂಧನ ದರವು ಪ್ರತಿ ಕಿಲೋ ಲೀಟರಿಗೆ ₹ 1,563ರಷ್ಟು ಕಡಿಮೆ ಆಗಿ ₹ 1.21 ಲಕ್ಷಕ್ಕೆ ತಲುಪಿದೆ. (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್).

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿಕೆಗೆ ಅನುಗುಣವಾಗಿ ವಿಮಾನ ಇಂಧನ ದರ ಕಡಿಮೆ ಮಾಡಲಾಗಿದೆ ಎಂದು ಕಂಪನಿಗಳು ತಿಳಿಸಿವೆ.

ವಾಣಿಜ್ಯ ಬಳಕೆ ಸಿಲಿಂಡರ್ ದರ ₹ 135 ಇಳಿಕೆ

ನವದೆಹಲಿ (ಪಿಟಿಐ): ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಪ್ರತಿ ಲೀಟರಿಗೆ ₹ 135ರಷ್ಟು ಕಡಿಮೆ ಮಾಡಲಾಗಿದೆ. ಇದರಿಂದ ಬೆಂಗಳೂರಿನಲ್ಲಿ 19 ಕೆ.ಜಿ. ತೂಕದ ಸಿಲಿಂಡರ್ ದರವು ₹ 2,300ಕ್ಕೆ ಇಳಿಕೆ ಆಗಿದೆ.

ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಸದ್ಯ ಬೆಂಗಳೂರಿನಲ್ಲಿ 14.2 ಕೆ.ಜಿ ತೂಕದ ಸಿಲಿಂಡರ್ ದರ ₹ 1006 ಇದೆ. ಪೆಟ್ರೋಲ್, ಡೀಸೆಲ್ ದರದಲ್ಲಿಯೂ ಯಾವುದೇ ಬದಲಾವಣೆ ಆಗಿಲ್ಲ.

₹ 1.41 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

2021ರ ಮೇ ತಿಂಗಳಿಗೆ ಹೋಲಿಸಿದರೆ 2022ರ ಮೇನಲ್ಲಿ ಶೇ 40ರಷ್ಟು ಹೆಚ್ಚು


ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಡಿ ಮೇ ತಿಂಗಳಿನಲ್ಲಿ ₹ 1.41 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. 2021ರ ಮೇನಲ್ಲಿ ಸಂಗ್ರಹ ಆಗಿದ್ದ ಮೊತ್ತಕ್ಕೆ ಹೋಲಿಸಿದರೆ ಈ ಬಾರಿ ಶೇ 44ರಷ್ಟು ಹೆಚ್ಚಳ ಆಗಿದೆ. 2021ರ ಮೇನಲ್ಲಿ ₹ 97,821 ಕೋಟಿ ವರಮಾನ ಸಂಗ್ರಹ ಆಗಿತ್ತು.

ಆದರೆ, 2022ರ ಏಪ್ರಿಲ್‌ನಲ್ಲಿ ₹ 1.68 ಲಕ್ಷ ಕೋಟಿಯಷ್ಟು ದಾಖಲೆಯ ತೆರಿಗೆ ವರಮಾನ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಮೇನಲ್ಲಿ ₹ 27 ಸಾವಿರ ಕೋಟಿ ಕಡಿಮೆ ಸಂಗ್ರಹ ಆಗಿದೆ. ಹೀಗಿದ್ದರೂ ಜಿಎಸ್‌ಟಿ ವ್ಯವಸ್ಥೆಯು ಜಾರಿಗೆ ಬಂದಾಗಿನಿಂದ ಈವರೆಗೆ ಸಂಗ್ರಹ ಆಗಿರುವ ನಾಲ್ಕನೇ ಗರಿಷ್ಠ ಮೊತ್ತ ಇದಾಗಿದೆ.

2022ರ ಮೇನಲ್ಲಿ ಸಂಗ್ರಹ ಆಗಿರುವ ಒಟ್ಟಾರೆ ಮೊತ್ತದಲ್ಲಿ ಸಿಜಿಎಸ್‌ಟಿ ₹ 25,036 ಕೋಟಿ, ಸಿಜಿಎಸ್‌ಟಿ ₹ 32,001 ಕೋಟಿ, ಐಜಿಎಸ್‌ಟಿ ₹ 73,345 ಕೋಟಿ ಹಾಗೂ ಸೆಸ್ ₹ 10,502 ಕೋಟಿ ಸೇರಿಕೊಂಡಿದೆ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಮೇನಲ್ಲಿ ಸಂಗ್ರಹ ಆಗಿರುವ ಮೊತ್ತವು ಏಪ್ರಿಲ್‌ನಲ್ಲಿ ಆಗಿರುವ ಮಾರಾಟಕ್ಕೆ ಸಂಬಂಧಿಸಿದ್ದಾಗಿದೆ. ಏಪ್ರಿಲ್‌ನಲ್ಲಿ ಸಂಗ್ರಹ ಆಗುವ ಮೊತ್ತವು ಮಾರ್ಚ್‌ಗೆ ಸಂಬಂಧಿಸಿದ್ದಾಗಿದೆ. ಮಾರ್ಚ್‌ಗೆ ಹಣಕಾಸು ವರ್ಷ ಅಂತ್ಯ ಆಗುವುದರಿಂದ ರಿಟರ್ನ್ಸ್ ಸಲ್ಲಿಕೆ ಹೆಚ್ಚಿರುತ್ತದೆ. ಹೀಗಾಗಿ ಮೇ ತಿಂಗಳ ಸಂಗ್ರಹವು ಸಾಮಾನ್ಯವಾಗಿ ಏಪ್ರಿಲ್‌ನಲ್ಲಿ ತಿಂಗಳಿಗಿಂತಲೂ ಕಡಿಮೆ ಇರುತ್ತದೆ.

ಜಿಎಸ್‌ಟಿ ಸಂಗ್ರಹ ವಿವರ (ಕೋಟಿಗಳಲ್ಲಿ)



ಮಾಹಿತಿ: ಹಣಕಾಸು ಸಚಿವಾಲಯ

ತಿಂಗಳ ಜಿಎಸ್‌ಟಿ ಸಂಗ್ರಹವು ₹ 1.5 ಲಕ್ಷ ಕೋಟಿ ದಾಟಬೇಕು ಎನ್ನುವ ಕೇಂದ್ರದ ಗುರಿ ತಲುಪಲು ಬೇಕಾದ ವೇದಿಕೆ ಸಿದ್ಧವಾಗಿರುವಂತೆ ಕಾಣುತ್ತಿದೆ
ವಿವೇಕ್ ಜಲನ್, ಟ್ಯಾಕ್ಸ್ ಕನೆಕ್ಟ್ ಅಡ್ವೈಸರಿ ಪಾಲುದಾರ

ಕಳೆದ ಮೂರು ತಿಂಗಳಿನಿಂದಲೂ ಜಿಎಸ್‌ಟಿ ಸಂಗ್ರಹವು ₹ 1.4 ಲಕ್ಷ ಕೋಟಿಯನ್ನು ದಾಟುತ್ತಿರುವುದು ಆರ್ಥಿಕ ಬೆಳವಣಿಗೆಯನ್ನು ಸೂಚಿಸುತ್ತಿದೆ
ಎಂ.ಎಸ್. ಮಣಿ, ಡೆಲಾಯ್ಟ್ ಇಂಡಿಯಾ ಪಾಲುದಾರ

ಏಪ್ರಿಲ್‌ನಲ್ಲಿ 7.4 ಕೋಟಿ ಇ–ವೇ ಬಿಲ್ ಸೃಷ್ಟಿ ಆಗಿದೆ. ಮಾರ್ಚ್‌ನಲ್ಲಿ ಸೃಷ್ಟಿ ಆಗಿದ್ದ 7.7 ಕೋಟಿ ಇ–ವೇ ಬಿಲ್‌ಗೆ ಹೋಲಿಸಿದರೆ ಶೇ 4ರಷ್ಟು ಕಡಿಮೆ ಕಡಿಮೆ ಆಗಿದೆ.

ಜಿಎಸ್‌ಟಿ ಪರಿಹಾರ: ರಾಜ್ಯಕ್ಕೆ ₹ 8,633 ಕೋಟಿ

ನವದೆಹಲಿ (ಪಿಟಿಐ): ರಾಜ್ಯಗಳಿಗೆ ನೀಡಬೇಕಿದ್ದ ಜಿಎಸ್‌ಟಿ ಪರಿಹಾರದ ಬಾಕಿ ಮೊತ್ತ ₹ 86,912 ಕೋಟಿಯನ್ನು ಬಿಡುಗಡೆ ಮಾಡಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಇದರಲ್ಲಿ ಕರ್ನಾಟಕ ರಾಜ್ಯದ ಪಾಲು ₹ 8,633 ಕೋಟಿ ಇದೆ.

ಮಹಾರಾಷ್ಟ್ರ ರಾಜಕ್ಕೆ ಅತಿ ಹೆಚ್ಚಿನ ₹ 14,145 ಕೋಟಿ ಜಿಎಸ್‌ಟಿ ಪರಿಹಾರ ದೊರೆತಿದೆ.

ಒಟ್ಟಾರೆ ಮೊತ್ತದಲ್ಲಿ ₹ 25 ಸಾವಿರ ಕೋಟಿಯನ್ನು ಜಿಎಸ್‌ಟಿ ಪರಿಹಾರ ನಿಧಿಯಿಂದ ನೀಡಲಾಗಿದೆ. ಉಳಿದ ₹ 61,912 ಕೋಟಿಯನ್ನು ಕೇಂದ್ರವು ತನ್ನ ಸೆಸ್ ಸಂಗ್ರಹದಿಂದ ನೀಡಿದೆ ಎಂದು ಹಣಕಾಸು ಸಚಿವಾಲಯವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಒಟ್ಟಾರೆ ಮೊತ್ತದಲ್ಲಿ ಏಪ್ರಿಲ್–ಮೇ ಅವಧಿಗೆ ₹ 17,973 ಕೋಟಿ ಹಾಗೂ ಫೆಬ್ರುವರಿ–ಮಾರ್ಚ್ ಅವಧಿಗೆ ₹ 21,322 ಕೋಟಿ ಹಾಗೂ 2022ರ ಜನವರಿವರೆಗೆ ಬಾಕಿ ಉಳಿಸಿಕೊಂಡಿದ್ದ ₹ 47,617 ಕೋಟಿ ಮೊತ್ತವು ಸೇರಿಕೊಂಡಿದೆ ಎಂದು ಅದು ಮಾಹಿತಿ ನೀಡಿದೆ.

ತಯಾರಿಕಾ ವಲಯದ ಬೆಳವಣಿಗೆ ಸ್ಥಿರ


ನವದೆಹಲಿ (ಪಿಟಿಐ): ಹಣದುಬ್ಬರ ಗರಿಷ್ಠ ಮಟ್ಟದಲ್ಲಿ ಇದ್ದರೂ ದೇಶದ ತಯಾರಿಕಾ ವಲಯದ ಬೆಳವಣಿಗೆಯು ಮೇನಲ್ಲಿ ಸ್ಥಿರವಾಗಿದೆ. ಆದರೆ, ಏಪ್ರಿಲ್‌ಗೆ ಹೋಲಿಸಿದರೆ ಅತ್ಯಲ್ಪ ಇಳಿಕೆ ಕಂಡಿದೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಏಪ್ರಿಲ್‌ನಲ್ಲಿ 54.7 ರಷ್ಟು ಇತ್ತು. ಇದು ಮೇನಲ್ಲಿ 54.6ಕ್ಕೆ ಅಲ್ಪ ಇಳಿಕೆ ಕಂಡಿದೆ.

ವಲಯದ ಒಟ್ಟಾರೆ ಸ್ಥಿತಿಯು ಸತತ 11ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಮಟ್ಟದಲ್ಲಿಯೇ ಇದೆ. ಪಿಎಂಐ 50ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಸಕಾರಾತ್ಮಕ ಬೆಳವಣಿಗೆ, 50ಕ್ಕಿಂತಲೂ ಕಡಿಮೆ ಮಟ್ಟದಲ್ಲಿ ಇದ್ದರೆ ನಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. ತಯಾರಿಕೆ ಮತ್ತು ಹೊಸ ಯೋಜನೆಗಳಿಗೆ ಬೇಡಿಕೆ ಹೆಚ್ಚಾಗಿರುವುದು ಹಾಗೂ ಅಂತರರಾಷ್ಟ್ರೀಯ ಮಾರಾಟವು 11 ವರ್ಷಗಳ ಗರಿಷ್ಠ ಮಟ್ಟಕ್ಕೆ ಹೆಚ್ಚಳ ಆಗಿರುವುದರಿಂದ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.



ವಲಯದ ಬೆಳವಣಿಗೆ ವಿವರ (%)



ಮಾಹಿತಿ: ನಿಕೇಯ್, ಐಎಚ್‌ಎಸ್ ಮರ್ಕಿಟ್ ಎಸ್‌ಆ್ಯಂಡ್‌ಪಿ ಗ್ಲೋಬಲ್

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಕುಮಟ	
ಚಿಪ್ಪು	24019-29969
ಕೋಕ	18109-28699
ಫ್ಯಾಕ್ಟರಿ	10109-20129

ಹಳೆಚಾಲಿ	45019-48619
ಹೊಸಚಾಲಿ	34019-38509
ಸಿದ್ದಾಪುರ	
ಬಿಳಿಗೋಟು	24299-30699
ಚಾಲಿ	34399-38288
ಕೋಕ	22199-30499
ಕೆಂಪುಗೋಟು	29199-32299
ರಾಶಿ	44769-48299
ತಟ್ಟಿಬೆಟ್ಟೆ	34209-44619
ಶಿರಸಿ	
ಬೆಟ್ಟೆ	32599-47399
ಬಿಳಿಗೋಟು	23709-31121

ಚಾಲಿ	32099-38511
ರಾಶಿ	40699-48909
ಶಿವಮೊಗ್ಗ	
ಬೆಟ್ಟೆ	50229-53339
ಗೊರಬಲು	16500-37889
ರಾಶಿ	44869-50500
ಸರಕು	58169-80100
ತಿಪಟೂರು ಕೊಬ್ಬರಿ	
ಕನಿಷ್ಠ	12000
ಗರಿಷ್ಠ	13000
ಮಾದರಿ	13000
ಒಟ್ಟು ಆವಕ (ಕ್ವಿಂಟಲ್)	696

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	16300	16300	--- ಸೆಂಟ್ಸ್
ಎಸಿ	8960	8600	8950	
ಆರ್‌ಪಿ	9600	9900	10050	ಲಂಡನ್
ಆರ್‌ಸಿ	4770	4400	4550	2105 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 1-6-2022

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	11100-11500
ದಪ್ಪ ಗುಜರಾತ್(ಹೊಸ)	10300-10350

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1640)
ಒಂದು ವಾರದ ಡೆಲಿವರಿ	1615 (1635)
ಸೋಯಾ ಕಚ್ಚಾ	1440 (1475)
ಪಾಮ್ ವಾರದ ಡೆಲಿವರಿ	1478 (1488)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,100 (50,950)
ಬೆಳ್ಳಿ ಕೆ.ಜಿ 60,900 (61,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1200
ಮಧ್ಯಮ	₹800-1000
ಸಣ್ಣ	₹400-800

ಸಂಕ್ಷಿಪ್ತ ಸುದ್ದಿ

ಪುನೀತ್ ಕಪ್ ಪ್ರೊ ಕಬಡ್ಡಿ ನಾಳೆಯಿಂದ

ಮೈಸೂರು: ಮೈಸೂರು ಸ್ನೇಹಿತರ ಬಳಗ ಹಾಗೂ ಮೈಸೂರು ಅಮೆಚೂರ್ ಕಬಡ್ಡಿ ಸಂಸ್ಥೆಯಿಂದ ಜೂನ್ 3ರಿಂದ 5ರವರೆಗೆ ನಗರದ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಪುನೀತ್ ಕಪ್ ಪ್ರೊ ಕಬಡ್ಡಿ ಟೂರ್ನಿ ಆಯೋಜಿಸಲಾಗಿದೆ ಎಂದು ಬಳಗದ ಕಾರ್ಯದರ್ಶಿ ಬಿ.ಎಸ್.ರಾಘವ ಹೇಳಿದರು.

'8 ತಂಡಗಳನ್ನು ರಚಿಸಿದ್ದು, 31 ಪಂದ್ಯಗಳು ನಡೆಯಲಿವೆ. ರಾಜ್ಯದ ಎಲ್ಲ ಜಿಲ್ಲೆಗಳಿಂದ ಆಟಗಾರರು ಪಾಲ್ಗೊಳ್ಳಲಿದ್ದಾರೆ. ಪ್ರಥಮ ಬಹುಮಾನ ₹ 2 ಲಕ್ಷ, ದ್ವಿತೀಯ ಬಹುಮಾನ ₹1 ಲಕ್ಷ, ತೃತೀಯ ಹಾಗೂ 4ನೇ ಬಹುಮಾನ ತಲಾ ₹50 ಸಾವಿರ ನೀಡಲಾಗುತ್ತದೆ. ವೈಯಕ್ತಿಕ ಬಹುಮಾನಗಳನ್ನೂ ನೀಡಲಾಗುತ್ತದೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಪ್ರತಿದಿನ ಬೆಳಿಗ್ಗೆ 8ರಿಂದ 11 ಹಾಗೂ ಸಂಜೆ 4ರಿಂದ ರಾತ್ರಿ 9.30ರವರೆಗೆ ಪಂದ್ಯಗಳು ನಡೆಯಲಿವೆ. 5ರಂದು ಸಂಜೆ 5ಕ್ಕೆ ಸೆಮಿ ಫೈನಲ್, ಫೈನಲ್ ಪಂದ್ಯಗಳು ನಡೆಯಲಿವೆ' ಎಂದು ಬಳಗದ ಸಂಘಟನಾ ಕಾರ್ಯದರ್ಶಿ ಶಶಿಧರ ತಿಳಿಸಿದರು.

ಟಿಟಿ: ತೇಶುಭ್ ದಿನೇಶ್‌ಗೆ ಚಿನ್ನ



ತೇಶುಭ್ ದಿನೇಶ್

ಬೆಂಗಳೂರು: ಕರ್ನಾಟಕದ ತೇಶುಭ್ ದಿನೇಶ್ ಇಂದೋರ್‌ನಲ್ಲಿ ನಡೆದ ರಾಷ್ಟ್ರೀಯ ಕೆಡೆಟ್ ಮತ್ತು ಸಬ್‌ಜೂನಿಯರ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಅಭಯ್ ಪ್ರಶಾಲ್ ಕ್ರೀಡಾಂಗಣದಲ್ಲಿ ನಡೆದ 13 ವರ್ಷದೊಳಗಿನ ಬಾಲಕರ ಫೈನಲ್ ಪಂದ್ಯದಲ್ಲಿ ತೇಶುಭ್ 11-4, 11-9, 8-11, 11-6, 11-4ರಿಂದ ಗುಜರಾತ್‌ನ ಆರ್ಯ ಕಟಾರಿಯಾ ವಿರುದ್ಧ ಜಯಿಸಿದರು.

ಫುಟ್‌ಬಾಲ್: ಎಚ್‌ಎಎಲ್‌ಗೆ ಭರ್ಜರಿ ಜಯ

ಬೆಂಗಳೂರು: ಎಸ್.ಜಾನಿ ಕೋಮ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಎಚ್‌ಎಎಲ್ ಎಫ್‌ಸಿ ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಎಚ್‌ಎಎಲ್ 4-0ಯಿಂದ ಬ್ಲಿಟ್ಜ್ ಎಫ್‌ಸಿ ತಂಡವನ್ನು ಸೋಲಿಸಿತು. ಜಾನಿ 27 ಮತ್ತು 64ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ವಿಜೇತ ತಂಡದ ರಮಣ್ ಸಿಂಗ್ (34ನೇ ನಿಮಿಷ) ಮತ್ತು ತುಷಾರ್ ವಿಶ್ವಕರ್ಮ (72ನೇ ನಿ.) ತಲಾ ಒಂದು ಗೋಲು ಹೊಡೆದರು.

ಇನ್ನುಳಿದ ಪಂದ್ಯಗಳಲ್ಲಿ ಪರಿಕ್ರಮ ಎಫ್‌ಸಿ 3-0ಯಿಂದ ಪೋಸ್ಟಲ್ ಡಿಪಾರ್ಟ್‌ಮೆಂಟ್ ಎಫ್‌ಸಿ ವಿರುದ್ಧ, ರೆಬೆಲ್ಸ್ ಎಫ್‌ಸಿ 1-0ಯಿಂದ ಎಜಿಒಆರ್‌ಸಿ ಎಫ್‌ಸಿ ವಿರುದ್ಧ, ಬಿಟಿಎಂ ಎಫ್‌ಸಿ 1-0ಯಿಂದ ಸೌತ್ ಯುನೈಟೆಡ್ ಎಫ್‌ಸಿ ಎದುರು ಜಯ ಸಾಧಿಸಿದವು.

ಮೆಕ್‌ಡೊನಾಲ್ಡ್‌ಗೆ ಕೋವಿಡ್

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ತಂಡದ ಮುಖ್ಯ ಕೋಚ್ ಆ್ಯಂಡ್ರ್ಯೂ ಮೆಕ್‌ಡೊನಾಲ್ಡ್ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ. ಮಂಗಳವಾರ ತಂಡವು ಶ್ರೀಲಂಕಾ ಪ್ರವಾಸಕ್ಕೆ ತೆರಳಲು ವಿಮಾನ ನಿಲ್ದಾಣಕ್ಕೆ ಬಂದಾಗ ಪರೀಕ್ಷೆ ನಡೆಸಲಾಯಿತು.

ಇದರಲ್ಲಿ ಡೇವಿಡ್ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿತು. ಅವರನ್ನು ಮೆಲ್ಬರ್ನ್‌ನಲ್ಲಿ ಒಂದು ವಾರ ಕ್ವಾರಂಟೈನ್‌ನಲ್ಲಿ ಇರುವಂತೆ ಸೂಚಿಸಲಾಗಿದೆ. ಸಂಪೂರ್ಣ ಗುಣಮುಖರಾದ ನಂತರ ಅವರನ್ನು ಶ್ರೀಲಂಕಾಕ್ಕೆ ಕಳಿಸಲಾಗುವುದು.

ನಿಧನ ವಾರ್ತೆ

ವಿಂಡೀಸ್ ಕ್ರಿಕೆಟಿಗ ಹಾಲ್‌ಫೋರ್ಡ್

ಸೇಂಟ್ ಜಾನ್ಸ್ (ಎಎಫ್‌ಪಿ): ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದ ಆಲ್‌ರೌಂಡರ್ ಆಗಿದ್ದ ಡೇವಿಡ್ ಹಾಲ್‌ಫೋರ್ಡ್ (82) ಮಂಗಳವಾರ ನಿಧನರಾಗಿದ್ದಾರೆ.

1966–77ರ ಅವಧಿಯಲ್ಲಿ ಅವರು 24 ಟೆಸ್ಟ್‌ಗಳಲ್ಲಿ ವಿಂಡೀಸ್ ತಂಡವನ್ನು ಪ್ರತಿನಿಧಿಸಿದ್ದರು. ಲೆಗ್‌ಸ್ಪಿನ್ನರ್ ಮತ್ತು ಬ್ಯಾಟರ್ ಆಗಿದ್ದರು. 1966ರಲ್ಲಿ ಲಾರ್ಡ್ಸ್‌ನಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ತಮ್ ತಂಡವನ್ನು ಸೋಲಿನಿಂದ ಪಾರು ಮಾಡುವಲ್ಲಿ ಡೇವಿಡ್ ಮಹತ್ವದ ಪಾತ್ರ ವಹಿಸಿದ್ದರು. ಗ್ಯಾರಿಫೀಲ್ಡ್ ಸೋಬರ್ಸ್ ಅವರಿಗೆ 274 ರನ್‌ಗಳ ಜೊತೆಯಾಟವನ್ನು ದಾಖಲಿಸಿದ್ದರು.

ಜಿಮ್ ಪಾರ್ಕ್ಸ್

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ಅತಿ ಹಿರಿಯ ವಯಸ್ಸಿನ ಮಾಜಿ ಕ್ರಿಕೆಟಿಗ ಜಿಮ್ ಪಾರ್ಕ್ಸ್ (90) ಮಂಗಳವಾರ ನಿಧನರಾದರು. 1954 ರಿಂದ 1968ರ ಅವಧಿಯಲ್ಲಿ ಜಿಮ್ 46 ಟೆಸ್ಟ್‌ಗಳಲ್ಲಿ ಆಡಿದ್ದರು. ಸಸೆಕ್ಸ್ ಕೌಂಟಿ ಕ್ಲಬ್ ಆಟಗಾರನಾಗಿದ್ದ ಜಿಮ್ 739 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿದ್ದರು. 132 ಲಿಸ್ಟ್ ಎ ಪಂದ್ಯಗಳಲ್ಲಿ ಆಡಿದ್ದರು.

ಏಷ್ಯಾಕಪ್ ಹಾಕಿ ಟೂರ್ನಿ: ಜಪಾನ್ ವಿರುದ್ಧ ಏಕೈಕ ಗೋಲಿನಿಂದ ಭಾರತ ತಂಡಕ್ಕೆ ಜಯ

ರಾಜ್‌ಕುಮಾರ್ ಕೈಚಳಕಕ್ಕೆ ಒಲಿದ ಕಂಚು



ಕಂಚಿನ ಪದಕ ಜಯಿಸಿದ ಭಾರತದ ಆಟಗಾರರ ಸಂಭ್ರಮ– ಹಾಕಿ ಇಂಡಿಯಾ ಟ್ವಿಟರ್ ಚಿತ್ರ

ಜಕಾರ್ತ, ಇಂಡೊನೇಷ್ಯಾ (ಪಿಟಿಐ): ಯುವ ಆಟಗಾರರನ್ನು ಒಳಗೊಂಡ ಭಾರತ ಹಾಕಿ ತಂಡವು ಏಷ್ಯಾಕಪ್ ಟೂರ್ನಿಯಲ್ಲಿ ಕಂಚಿನ ಪದಕ ಜಯಿಸಿದೆ.

ಮೂರನೇ ಸ್ಥಾನಕ್ಕಾಗಿ ಬುಧವಾರ ನಡೆದ ಪಂದ್ಯದಲ್ಲಿ ಬೀರೇಂದ್ರ ಲಾಕ್ರಾ ಸಾರಥ್ಯದ ತಂಡವು 1–0ಯಿಂದ ಜಪಾನ್‌ಗೆ ಸೋಲುಣಿಸಿತು. ಪಂದ್ಯದ ಏಳನೇ ನಿಮಿಷದಲ್ಲೇ ರಾಜ್‌ಕುಮಾರ್ ಪಾಲ್ ಕೈಚಳಕ ತೋರಿ ಭಾರತದ ಗೆಲುವಿಗೆ ಕಾರಣರಾದರು.

ಹೋದ ಬಾರಿ ಚಾಂಪಿಯನ್ ಆಗಿದ್ದ ಭಾರತ, ಮಂಗಳವಾರ ಸೂಪರ್ ಫೋರ್ ಹಂತದ ಅಂತಿಮ ಲೀಗ್ ಪಂದ್ಯದಲ್ಲಿ 4–4ರಿಂದ ದಕ್ಷಿಣ ಕೊರಿಯಾ ಎದುರು ಡ್ರಾ ಸಾಧಿಸಿತ್ತು. ಇದರಿಂದಾಗಿ ಗೋಲು ಗಳಿಕೆಯ ಆಧಾರದಲ್ಲಿ ಹಿಂದೆ ಬಿದ್ದು, ಫೈನಲ್ ತಲುಪಲಿಲ್ಲ.

ಈ ಹಣಾಹಣಿಯಲ್ಲಿ ಭಾರತ ತಂಡವು ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮಂದಾಯಿತು. ಅದಕ್ಕೆ ಏಳನೇ ನಿಮಿಷದಲ್ಲಿ ಫಲ ಲಭಿಸಿತು. ಉತ್ತಮ್ ಸಿಂಗ್ ಅವರ ನೆರವು ಪಡೆದ ರಾಜ್‌ಕುಮಾರ್ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿ ಭಾರತ ತಂಡದಲ್ಲಿ ಸಂಭ್ರಮ ಮೂಡಿಸಿದರು. ಇದಾದ ಐದು ನಿಮಿಷಗಳ ಬಳಿಕ ತಂಡಕ್ಕೆ ಸತತ ಎರಡು ಪೆನಾಲ್ಟಿ ಅವಕಾಶಗಳು ಲಭಿಸಿದರೂ ಗೋಲು ದಾಖಲಾಗಲಿಲ್ಲ.

ಈ ಹಂತದಲ್ಲಿ ಸಮಬಲದ ಗೋಲು ಹೊಡೆಯಲು ಜಪಾನ್‌ನ ಪ್ರಯತ್ನವೂ ಕೈಗೂಡಲಿಲ್ಲ. 20ನೇ ನಿಮಿಷದಲ್ಲಿ ಆ ತಂಡಕ್ಕೆ ದೊರೆತ ಎರಡು ಪೆನಾಲ್ಟಿ ಅವಕಾಶಗಳೂ ವ್ಯರ್ಥವಾದವು. ಕನ್ನಡಿಗ ಎಸ್.ವಿ. ಸುನಿಲ್ ನೀಡಿದ ಪಾಸ್‌ನಲ್ಲಿ ಮತ್ತೊಂದು ಗೋಲು ಗಳಿಕೆಯ ಅವಕಾಶ ರಾಜ್‌ಕುಮಾರ್ ಅವರಿಗಿತ್ತು. ಆದರೆ ಎದುರಾಳಿ ಗೋಲ್‌ಕೀಪರ್ ಚೆಂಡನ್ನು ಯಶಸ್ವಿಯಾಗಿ ತಡೆದರು.

ಕೊನೆಯ ಕ್ವಾರ್ಟರ್‌ನಲ್ಲಿ ಜಪಾನ್ ತಂಡಕ್ಕೆ ಮೂರು ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದರೂ ಭಾರತದ ಭದ್ರಕೋಟೆಯನ್ನು ಭೇದಿಸಲಾಗಲಿಲ್ಲ.

ಏಷ್ಯಾಕಪ್ ಹಾಕಿಯಲ್ಲಿ ಭಾರತದ ಸಾಧನೆ

ವರ್ಷ	ಆತಿಥ್ಯ ದೇಶ	ಪದಕ/ಸ್ಥಾನ
1982	ಪಾಕಿಸ್ತಾನ	ಬೆಳ್ಳಿ
1985	ಬಾಂಗ್ಲಾದೇಶ	ಬೆಳ್ಳಿ
1989	ಭಾರತ	ಬೆಳ್ಳಿ
1994	ಜಪಾನ್	ಬೆಳ್ಳಿ
1999	ಮಲೇಷ್ಯಾ	ಕಂಚು
2003	ಮಲೇಷ್ಯಾ	ಚಿನ್ನ
2007	ಭಾರತ	ಚಿನ್ನ
2009	ಮಲೇಷ್ಯಾ	ಐದನೇ ಸ್ಥಾನ
2013	ಮಲೇಷ್ಯಾ	ಬೆಳ್ಳಿ
2017	ಢಾಕಾ	ಚಿನ್ನ
2022	ಜಕಾರ್ತ	ಕಂಚು

ಹೆಚ್ಚು ಬಾರಿ ಪ್ರಶಸ್ತಿ ಜಯಿಸಿದ ತಂಡಗಳು

ದಕ್ಷಿಣ ಕೊರಿಯಾ	ಭಾರತ	ಪಾಕಿಸ್ತಾನ
5	3	3


ದಕ್ಷಿಣ ಕೊರಿಯಾಗೆ 5ನೇ ಪ್ರಶಸ್ತಿ

ದಕ್ಷಿಣ ಕೊರಿಯಾ ತಂಡವು ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು. ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ 2–1ರಿಂದ ಮಲೇಷ್ಯಾ ತಂಡಕ್ಕೆ ಸೋಲುಣಿಸಿತು. ದಕ್ಷಿಣ ಕೊರಿಯಾಗೆ ಇದು ಐದನೇ ಕಿರೀಟ.

ಪಂದ್ಯದಲ್ಲಿ ದಕ್ಷಿಣ ಕೊರಿಯಾ ಪರ ಮಾಂಜೆ ಜುಂಗ್ (17ನೇ ನಿಮಿಷ), ಟೈಲ್ ಹ್ವಾಂಗ್ (52ನೇ ನಿ.) ಗೋಲು ದಾಖಲಿಸಿದರು. ಮಲೇಷ್ಯಾ ತಂಡದ ಗೋಲು 25ನೇ ನಿಮಿಷದಲ್ಲಿ ಸಯ್ಯದ್ ಚೋಲನ್ ಅವರಿಂದ ಬಂದಿತು.

ಗಂಗೂಲಿ ಟ್ವೀಟ್: ರಾಜೀನಾಮೆ ವದಂತಿ

'ಬಿಸಿಸಿಐ ಅಧ್ಯಕ್ಷ ಸ್ಥಾನ ತೊರೆದಿಲ್ಲ'



ಸೌರವ್ ಗಂಗೂಲಿ

ನವದೆಹಲಿ (ಪಿಟಿಐ): ತಮ್ಮ ಜೀವನದಲ್ಲಿ 'ಹೊಸ ಪಯಣ' ಆರಂಭಿಸುವುದಾಗಿ ಸೌರವ್ ಗಂಗೂಲಿ ಬುಧವಾರ ಮಾಡಿದ ಟ್ವೀಟ್ ಸಂದೇಶದಿಂದಾಗಿ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕುರಿತು ವದಂತಿ ಹಬ್ಬಿತ್ತು.

ಆದರೆ, 'ಗಂಗೂಲಿ ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿಲ್ಲ. ಈ ಸುದ್ದಿಗಳು ಸತ್ಯಕ್ಕೆ ದೂರವಾಗಿವೆ. ನಾವು ಮತ್ತು ಸಹೋದ್ಯೋಗಿಗಳು ಸೇರಿ ಮುಂಬರುವ ಮಾಧ್ಯಮ ಹಕ್ಕುಗಳ ಹರಾಜು ಪ್ರಕ್ರಿಯೆಯ ಕುರಿತು ಹೆಚ್ಚಿನ ಗಮನ ಹರಿಸಿದ್ದೇವೆ. ಭಾರತದ ಕ್ರಿಕೆಟ್‌ನ ಬೆಳವಣಿಗೆ ಮತ್ತು ಹಿತಾಸಕ್ತಿಯೇ ನಮ್ಮ ಆದ್ಯತೆ ' ಎಂದು ಮಂಡಳಿಯ ಕಾರ್ಯದರ್ಶಿ ಜಯ್ ಶಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'2022ಕ್ಕೆ ನನ್ನ ಕ್ರಿಕೆಟ್ ವೃತ್ತಿ ಜೀವನಕ್ಕೆ 30 ವರ್ಷ ತುಂಬಿದೆ. 1992ರಲ್ಲಿ ಆಟದಂಗಣಕ್ಕಿಳಿದಿದ್ದ ನನಗೆ ಕ್ರಿಕೆಟ್ ಬಹಳಷ್ಟು ಉತ್ತಮವಾದದ್ದನ್ನು ಕೊಟ್ಟಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಿಮ್ಮೆಲ್ಲರ ಅಭಿಮಾನ ಮತ್ತು ಪ್ರೀತಿಯನ್ನು ಗಳಿಸಿಕೊಟ್ಟಿದೆ. ನನ್ನನ್ನು ಬೆಂಬಲಿಸಿದ ಮತ್ತು ಇಂದು ನಾನು ಪಡೆದಿರುವ ಸ್ಥಾನಮಾನಕ್ಕೆ ಕಾರಣರಾಗಿರುವ ಪ್ರತಿಯೊಬ್ಬರಿಗೂ ಆಭಾರಿಯಾಗಿರುವೆ. ಇವತ್ತು ನಾನು ಜೀವನದ ಹೊಸ ಅಧ್ಯಾಯ ಆರಂಭಿಸುತ್ತಿದ್ದೇನೆ. ಈ ಹೊಸ ಪಯಣದಲ್ಲಿಯೂ ತಮ್ಮೆಲ್ಲರ ಬೆಂಬಲ ಇರುವ ವಿಶ್ವಾಸವಿದೆ' ಎಂದು ಗಂಗೂಲಿ ಟ್ವೀಟ್ ಮಾಡಿದ್ದರು.

ಇದರಿಂದಾಗಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆಂದು ಸಾಮಾಜಿಕ ಜಾಲತಾಣಗಳು ಮತ್ತು ಸುದ್ದಿ ತಾಣಗಳು ವರದಿ ಮಾಡಿದವು.

2019ರ ಅಕ್ಟೋಬರ್‌ನಲ್ಲಿ ಗಂಗೂಲಿ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅವರ ಮೂರು ವರ್ಷಗಳ ಕಾರ್ಯಾವಧಿ ಮುಗಿಯಲು ಇನ್ನೂ ನಾಲ್ಕು ತಿಂಗಳು ಬಾಕಿಯಿವೆ.

ಅವರು ಮಾಡಿರುವ ಟ್ವೀಟ್ ಭವಿಷ್ಯದ ಪ್ರಾಜೆಕ್ಟ್ ಒಂದರ ಪ್ರಚಾರದ ಭಾಗವಾಗಿದೆ ಎಂದು ತಿಳಿದುಬಂದಿದೆ.

ಬಾಕ್ಸರ್ ನಿಖತ್, ಇಶಾಗೆ ₹ 2 ಕೋಟಿ

ಹೈದರಾಬಾದ್ (ಪಿಟಿಐ): ವಿಶ್ವ ಮಹಿಳೆಯರ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಚಿನ್ನದ ಪದಕ ವಿಜೇತರಾದ ನಿಖತ್ ಜರೀನ್ ಮತ್ತು ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಶೂಟಿಂಗ್‌ನಲ್ಲಿ ಚಿನ್ನದ ಪದಕ ಗೆದ್ದ ಇಶಾ ಸಿಂಗ್ ಅವರಿಗೆ ತೆಲಂಗಾಣ ಸರ್ಕಾರವು ₹ 2 ಕೋಟಿ ಮತ್ತು ವಸತಿ ನಿವೇಶನದ ಕಾಣಿಕೆ ನೀಡಿದೆ.

ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಈಚೆಗೆ ಟರ್ಕಿಯಲ್ಲಿ ಮತ್ತು ಶೂಟಿಂಗ್ ಜರ್ಮನಿಯಲ್ಲಿ ನಡೆದಿತ್ತು.

ಇಬ್ಬರಿಗೂ ಹೈದರಾಬಾದಿನ ಬಂಜಾರ ಹಿಲ್ಸ್ ಅಥವಾ ಜ್ಯುಬಿಲಿ ಹಿಲ್ಸ್‌ನಲ್ಲಿ ನಿವೇಶನ ನೀಡಲಾಗುವುದು ಎಂದು ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ಘೋಷಿಸಿದ್ದಾರೆ.



ವಿಶ್ವ ಮಹಿಳಾ ಬಾಕ್ಸಿಂಗ್‌ನಲ್ಲಿ ಈಚೆಗೆ ಚಿನ್ನದ ಪದಕ ಗೆದ್ದ ನಿಖತ್ ಜರೀನ್ (ಬಲದಿಂದ ಮೊದಲು), ಕಂಚಿನ ಪದಕ ವಿಜೇತರಾದ ಮನೀಷಾ ಮೌನ್ ಮತ್ತು ಪರ್ವೀನ್ ಹೂಡಾ ಅವರು ಬುಧವಾರ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಬಾಕ್ಸಿಂಗ್ ಕೈಗವಸು ಕಾಣಿಕೆ ನೀಡಿದರು –ಪಿಟಿಐ ಚಿತ್ರ



ತಾಯಿ ನಾಗಲಕ್ಷ್ಮಿ ಅವರೊಂದಿಗೆ ಆರ್. ಪ್ರಜ್ಞಾನಂದ ಮತ್ತು ವೈಶಾಲಿ– ಪಿಟಿಐ ಚಿತ್ರ

ಚೆಸ್: ಮಿನುಗುತ್ತಿರುವ ಪ್ರಜ್ಞಾನಂದ, ವೈಶಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಯುವ ಚೆಸ್ ಪ್ರತಿಭೆ ಆರ್. ಪ್ರಜ್ಞಾನಂದ ಈಗ ವಿಶ್ವದ ಮನೆ ಮಾತಾಗಿದ್ದಾರೆ.

ಐದು ಬಾರಿಯ ವಿಶ್ವ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಮೂರು ತಿಂಗಳ ಅಂತರದಲ್ಲಿ ತಮಿಳುನಾಡಿನ 16 ವರ್ಷದ ಪ್ರಜ್ಞಾನಂದ ಎರಡು ಬಾರಿ ಮಣಿಸಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ ಪ್ರಜ್ಞಾನಂದ ಅವರು ಸದ್ಯ 114ನೇ ಸ್ಥಾನದಲ್ಲಿದ್ದಾರೆ. ಅವರ ಅಕ್ಕ ಇಂಟರ್‌ನ್ಯಾಷನಲ್ ಮಾಸ್ಟರ್ ಆರ್. ವೈಶಾಲಿ ಕೂಡ 2013ರಲ್ಲಿ ಕಾರ್ಲ್‌ಸನ್ ಅವರಿಗೆ ಸೋಲುಣಿಸಿದ್ದರು. ಹೀಗಾಗಿ ಪ್ರಜ್ಞಾನಂದ ಅವರ ಕುಟುಂಬವನ್ನು 'ಕಾರ್ಲ್‌ಸನ್ ಬೀಟರ್ಸ್' ಎನ್ನಬಹುದು.

ಕಳೆದ ಕೆಲವು ತಿಂಗಳುಗಳಿಂದ ವೈಶಾಲಿ ಕೂಡ ಮಿಂಚುತ್ತಿದ್ದಾರೆ. ಆಸ್ಟ್ರಿಯಾದಲ್ಲಿ ಬುಧವಾರ ಕೊನೆಗೊಂಡ ಬೋಡೆನ್ಸಿ ಓಪನ್ ಚೆಸ್ ಟೂರ್ನಿಯಲ್ಲಿ ಅವರು ಎರಡನೇ ಸ್ಥಾನ ಗಳಿಸಿದ್ದರು.

ಚೆಸ್ ಬೋರ್ಡ್ ಮೇಲೆ ಹಾರ್ಮೋನಿಯಂ ವಾದನ ನುಡಿಸಿದಂತೆ ಬೆರಳುಗಳನ್ನು ಚಲಿಸುವ ಪ್ರಜ್ಞಾನಂದ, ಚುರುಕಿನ ಆಟದ ಮೂಲಕ ಗಮನಸೆಳೆಯುತ್ತಿದ್ದಾರೆ.

ಟೆಸ್ಟ್: ಸ್ಟೋಕ್ಸ್ ನಾಯಕತ್ವಕ್ಕೆ ಸವಾಲು

ಲಂಡನ್ (ಎಎಫ್‌ಪಿ): ಆತಿಥೇಯ ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ತಂಡಗಳು ಗುರುವಾರದಿಂದ ಲಾರ್ಡ್ಸ್‌ನಲ್ಲಿ ನಡೆಯಲಿರುವ ಮೊದಲ ಟೆಸ್ಟ್‌ನಲ್ಲಿ ಮುಖಾಮುಖಿಯಾಗಲಿವೆ.

ಇಂಗ್ಲೆಂಡ್ ತಂಡವು ಆಲ್‌ರೌಂಡರ್ ಬೆನ್ ಸ್ಟೋಕ್ಸ್ ನಾಯಕತ್ವ ಮತ್ತು ಮುಖ್ಯ ಕೋಚ್ ಬ್ರೆಂಡನ್ ಮೆಕ್ಲಮ್ ಮಾರ್ಗದರ್ಶನದಲ್ಲಿ ಕಣಕ್ಕಿಳಿಯಲಿದೆ. ಇದು ಇಂಗ್ಲೆಂಡ್ ತಂಡದ ಮಟ್ಟಿಗೆ ಹೊಸ ಯುಗದ ಆರಂಭ ಎನ್ನಲಾಗುತ್ತಿದೆ. ಆ್ಯಷಸ್ ಸರಣಿಯ ವೈಫಲ್ಯದ ನಂತರ ಜೋ ರೂಟ್ ಅವರನ್ನು ನಾಯಕತ್ವದಿಂದ ಕೆಳಗಿಳಿಸಲಾಗಿತ್ತು. ಕ್ರಿಸ್ ಸಿಲ್ವರ್‌ವುಡ್ ಅವರನ್ನು ಕೋಚ್ ಹುದ್ದೆಯಿಂದ ಕೈಬಿಡಲಾಗಿತ್ತು. ಆಗ ಸ್ಟೋಕ್ಸ್ ನಾಯಕರಾಗಿ ನೇಮಕವಾದರು. ವಿಶೇಷವೆಂದರೆ; ಸ್ಟೋಕ್ಸ್ ನ್ಯೂಜಿಲೆಂಡ್‌ನಲ್ಲಿ ಜನಿಸಿ ಇಂಗ್ಲೆಂಡ್‌ನಲ್ಲಿ ಬೆಳೆದವರು. ಮೆಕ್ಲಮ್ ಕಿವೀಸ್ ತಂಡದ ಮಾಜಿ ನಾಯಕರಾಗಿದ್ದಾರೆ. ವಿಶ್ವ ಟೆಸ್ಟ್ ಚಾಂಪಿಯನ್ ನ್ಯೂಜಿ ಲೆಂಡ್ ನಾಯಕ ಕೇನ್ ವಿಲಿಯಮ್ಸನ್ ಅವರಿಗೆ ಮೆಕ್ಲಮ್ ಮತ್ತು ಬೆನ್ ತಂತ್ರಗಾರಿಕೆಯನ್ನು ಮೀರುವ ಸವಾಲು ಎದುರಾಗಿದೆ.